Financial Business

(a) Supplementary and Additional Demands for Grants for 1969-70 (First Instalment)

(b) Demands for Grants to cover Expenditure incurred in excess of Voted Grants for 1964-65

(c) Demands for Grants to cover expenditure incurred in excess of Voted Grants for 1965-66.

Mr. SPEAKER.—Recommendations of the Governor in respect of Supplementary Grants and Excess Grants have been received. Hon. Minister to move the Demands.

Sri RAMAKRISHNA HEGDE (Minister for Finance, Planning and Youth Welfare).—Sir, I beg to move :

> "That a further sum not exceeding Rs. 4,00,0^0 be granted to the Government to defray the charges which will come in course of payment during the financial year for the period ending 31st day of March 1970 in respect of Taxes on Vehicles."

Mr, SPEAKER.—Motion moved :

> "That a further sum not exceeding Rs. 4,00,000 be granted to the Government to defray the charges which will come in course of payment during the financial year for the period ending 31st day of March 1970 in respect of Taxes on Vehicles."

Along with this Demand, other Demands Nos. 10, 17, 20, 23, 24, 27, 33, 39, 41, 44, 47, 48 and 54 are deemed to have been moved.

Demands for grants to cover expenditure incurred in excess of voted grants for 1964-65 and 1965-66 are also before the House.

Now Discussion on Supplementary and Additional Demands for grants and also excess grants may be taken up together.

Sri Sivappa will commence the debate.

ಶ್ರೀ ಎಸ್. ಶಿವಪ್ಪ.—ಮಾನ್ಯ ಅಧ್ಯಕ್ಷರೇ, ಈ ಸಪ್ಲಿಮೆಂಟರಿ ಡಿಮ್ಯಾಂಡ್ ಮತ್ತು ಎಸ್ಟಿಮೇಟನ್ನು ಒಂದು ದಿವಸ ಚರ್ಚೆಮಾಡಬೇಕೆಂದು ನಿಮ್ಮ ಅಧ್ಯಕ್ಷತೆಯಲ್ಲಿದ್ದ ಬಿಸಿನೆಸ್ ಅಡ್ವೈಸರಿ ಕಮಿಟಿ ತೀರ್ಮಾನಮಾಡಿದೆ. ಇವತ್ತಿನ ದಿವಸ ಪಾರ್ಲಮೆಂಟರಿ ಸಚಿವರು ಇದನ್ನು ಈಗ ಕೇವಲ ಎರಡು-ಎರಡೂವರೆ ಗಂಟೆ ಬಾಕಿ ಇರುವಾಗ, ದಿನದ ಕೊನೆಯಲ್ಲಿ ತೆಗೆದುಕೊಂಡು, ಚರ್ಚೆಗೆ ಪೂರ್ಣ ಅವಕಾಶ ಕೊಡುವಂತಹ ಕಾರ್ಯವನ್ನು ಮಾಡದೆ ಇರುವುದರಿಂದ, ಮಾನ್ಯ ಪಾರ್ಲಮೆಂಟರಿ ಮಂತ್ರಿಯವರು ಈ ಆಪಾದನೆಗೆ ಒಳಗಾಗಿದ್ದಾರೆಂದು ನಾನು ಆಪಾದನೆ ಮಾಡುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಇವತ್ತು ಮುಗಿಯದಿದ್ದರೆ, ನಾಳೆ ಮುಗಿಸೋಣ.

ಶ್ರೀ ಎಸ್. ಶಿವಪ್ಪ.—ಸಭಾಪತಿಯವರೇ, ನಮ್ಮ ಮುಂದೆ 1964-65 ಮತ್ತು 1965-66ನೇ ಇಸವಿಯಲ್ಲಿ ಆಗಿರತಕ್ಕ ಎಕ್ಸೆಸ್ ಎಕ್ಸ್‌ಪೆಂಡಿಚರನ್ನು ಈ ಸಭೆಯು ಮುಂದೆ ಇಟ್ಟು, ಅನುಮೋದನೆ ಕೊಡಬೇಕೆಂದು ಕೇಳಿದ್ದಾರೆ. ಆಡಿಟರ್ ಜನರಲ್ ಅವರು ಈ ಬಗ್ಗೆ ತಪ್ಪು ತೋರಿಸಿದಮೇಲೆ ಅದನ್ನು ರೆಗ್ಯುಲರೈಸ್ ಮಾಡುವುದಕ್ಕೋಸ್ಕರ, ಫಾರ್ಮಾಲಟಿಗೋಸ್ಕರ ಈಗ ತಂದಿದ್ದಾರೆ. ಒಂದು

(ಶ್ರೀ ಎಸ್. ಶಿವಪ್ಪ)

ವಿಚಾರ ಹೇಳುತ್ತೇನೆ. ಸರ್ಕಾರ ಡಿವ್ಯಾಂಡ್ ಫಾರ್ ಎಕ್ಸೆಸ್ ಗ್ರಾಂಟಿಗೆ ಕಾನ್ಸಿಟ್ಯೂಶನರ್ ಪ್ರೊವಿಜನ್ಸ್ ಇದೆಯೆಂದು, ಈ ವಿಧಿಯನ್ನು ದುರುಪಯೋಗ ಮಾಡುತ್ತಿದೆ. ಎಕ್ಸೆಸ್ ಗ್ರಾಂಟನ್ನು ರೆಗ್ಯುಲರೈಸ್ ಮಾಡತಕ್ಕದ್ದು ಒಂದು ವಿಶೇಷವಾದ ಕಾಲದಲ್ಲ; ಏನೂ ಸರ್ಕಾರಕ್ಕೆ ವಿಧಿಯಿಲ್ಲದೆ, ಬಜೆಟ್ ವರ್ಷದಲ್ಲಿ ಒಪ್ಪಿಗೆ ತಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲದೆ, ಅಲ್ಪಸ್ವಲ್ಪ ಖರ್ಚು ಮಾಡಿದ್ದರೆ, ಸಭೆಯ ಒಪ್ಪಿಗೆಗೆ ಬರಬಹುದು. ಆದರೆ ಈಗ ಏನು ಮಾಡಿದ್ದಾರೆ ಎಂದರೆ, ಈ ಶಾಸನ ಸಭೆಗೆ ಕಾರ್ಯ ನಿರ್ವಹಣೆ ಮಾಡುವಂತಹ ಒಂದು ಅವಕಾಶವನ್ನೂ ಕೂಡ ಕೊಡದೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಶಾಸನ ಸಭೆಯಲ್ಲಿ ಆ ಖರ್ಚನ್ನೆಲ್ಲಾ ಇಟ್ಟರೆ, ಏನಾದರೂ ಇಲ್ಲ ಟೀಕೆ ಟಿಪ್ಪಣಿಗಳಾಗುತ್ತವೆ, ಎಂಬ ಭೀತಿಯಿಂದ, ಅನೇಕ ಕಾಮಗಾರಿಗಳನ್ನು ಮಾಡಿಕೊಂಡು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಒಂದು ಇಲಾಖೆಗೆ 64–65 ರಲ್ಲಿ ನುಮಾರು ಒಂದೂಮುಕ್ಕಾಲು ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆ. ಅದೇ ರೀತಿ ಇದೆ ಇಲಾಖೆಗೆ 65–66 ರಲ್ಲಯೂ ಕೂಡ ಅತೀ ಹೆಚ್ಚಿನ ಹಣವನ್ನು ಪೆಚ್ಚ ಮಾಡಿದ್ದಾರೆ. ಇವರು ಈ ರೀತಿಯಲ್ಲಿ ಪಾರ್ಲಿಮೆಂಟರಿ ಡೆಮೋಕ್ರೆಸಿಯಲ್ಲಿ ಪ್ರಜಾಪ್ರಭುತ್ವದ ಅಡಿಗಲ್ಲಿಗೆ ಏಟು ಕೊಡುವಂತಹ ರೀತಿಯಲ್ಲಿ ಹಣ ಖರ್ಚು ಮಾಡಿದ್ದಾರೆ.

4-30 P.M.

ಇದು ನಿಜವಾಗಿಯೂ ನಿಮ್ಮ ಹಣಕಾಸಿನ ನೀತಿಗೆ ಅನುಗುಣವಾಗಿಲ್ಲ. ನೀವು ಈ ಒಂದು ನಬೂಬು ಹೇಳತಕ್ಕಂಥಾದ್ದು ಅಕ್ಷಮ್ಯ ಅಪರಾಧ, ಇಂಥ ಕೆಲಸಗಳನ್ನು ಮಾಡತಕ್ಕದ್ದು ನಮ್ಮ ಹಣಕಾಸಿನ ಪರಿಸ್ಥಿತಿ ತೀರಾ ದುರವಸ್ಥೆಗೆ ಬರುವುದಕ್ಕೆ ಇದೂ ಒಂದು ಕಾರಣ ಎಂದು ನಾನು ಬಹಳ ವಿಷಾದದಿಂದ ಹೇಳುತ್ತೇನೆ. ಮಾನ್ಯ ಹಣಕಾಸಿನ ಸಚಿವರು ಈ ಸಭೆಯ ಮುಂದೆ ಕಾಲ್ ಆಟೆನ್‌ಷನ್ ಮುಖಾಂತರವಾಗಿ ಫೈನಾನ್ಸ್ ಕಮಿಷನ್ನಿನವರು ನಮ್ಮ ಮೈಸೂರಿಗೆ ಕೊಟ್ಟಂಥ ಅವಾರ್ಡಿನಲ್ಲಿ ಅನ್ಯಾಯ ಮಾಡಿದ್ದಾರೆ ಎಂದು ಬಹಳ ವಿವರವಾಗಿ ಹೇಳಿದ್ದಾರೆ. ಅವರು ಈ ಸಭೆಗೆ ಹೇಳಿರತಕ್ಕ ರೀತಿಯಲ್ಲಿ ಕೂಡ ನಮ್ಮ ದೇಶದ ಹಣಕಾಸಿನ ಪರಿಸ್ಥಿತಿ ಈ ಫೈನಾನ್ಸ್ ಕಮಿಷನ್ನಿನವರ ತೀರ್ಮಾನದಿಂದ ಬಹಳಮಟ್ಟಿಗೆ ತಲೆಕೆಳಕು ಆಗತಕ್ಕಂಥ ಪರಿಸ್ಥಿತಿ ಇದೆ. 18 ಕೋಟಿ ರೂಪಾಯಿಗಳು ಅದರಿಂದ ಬರತಕ್ಕದ್ದು ಕಡಿಮೆಯಾಗಿದೆ ಎಂದು ಹೇಳಿದಮೇಲೆ ಮುಂದೆ ನಮ್ಮ ರಾಜ್ಯದಲ್ಲಿ ಯಾವ ಯೋಜನೆಯನ್ನು ಯಾವ ರೀತಿ ಕಾರ್ಯಗತ ಮಾಡುತ್ತಾರೆ ಎನ್ನುವ ಪ್ರಶ್ನೆ ಉದ್ಭವವಾಗುತ್ತದೆ. ಫೈನಾನ್ಸ್ ಕಮಿಷನ್ನಿನವರು ಕೊಟ್ಟ ತೀರ್ಮಾನದಿಂದ ಈ ದೇಶದ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮಾಡಬೇಕಾಗಿರತಕ್ಕ ಅನೇಕ ಯೋಜನೆಗಳನ್ನು ಕಾರ್ಯಗತ ಮಾಡುವ ಬಗ್ಗೆ ಯೋಚನೆ ಮಾಡಬೇಕಾಗಿದೆ. ವಿಷಮಪರಿಸ್ಥಿತಿ ಉಂಟಾಗಿದೆ ಎಂದು ನಾನು ಕಳಕಳಿಯಿಂದ ಹೇಳುತ್ತಿದ್ದೇನೆ. ನಮ್ಮ ರಾಜ್ಯ ಸರ್ಕಾರ ಹಣವನ್ನು ಹೊಂದಿಸಿಕೊಳ್ಳಬೇಕಾಗುತ್ತದೆ. ಫೈನಾನ್ಸ್ ಕಮಿಷನ್ನಿನವರಮೇಲೆ ಸರ್ಕಾರದವರು ತಮ್ಮ ಪ್ರಭಾವವನ್ನು ಬೀರಿಲ್ಲ. ಮುಖ್ಯ ಮಂತ್ರಿಗಳ ಪ್ರಭಾವ ಕೇಂದ್ರದಲ್ಲಿ ಇಲ್ಲ. ಫೈನಾನ್ಸ್ ಕಮಿಷನ್ನಿನವರು ತೀರ್ಪನ್ನು ಕೊಡುವುದಕ್ಕೆ ಮುಂಚೆ ಕಮಿಷನ್ನಿನ ಮುಂದೆ ನಮ್ಮ ಸರ್ಕಾರದವರು ಅಂಕಿ ಅಂಶಗಳನ್ನು ಯಾವ ರೀತಿ ಶೇಖರಣೆ ಮಾಡಿ ಇಡಬೇಕಾಗಿತ್ತೋ ಆ ರೀತಿ ಮಾಡಿಲ್ಲ ಎಂದು ವಿಷಾದದಿಂದ ನಾನು ಹೇಳಬೇಕಾಗಿದೆ. ಇವೊತ್ತು ಮೈಸೂರು ರಾಜ್ಯದಲ್ಲಿ ನಮ್ಮ ಆದಾಯ ಇಷ್ಟು ಇದೆ, ಈ ಹಣಕಾಸಿನ ಪರಿಸ್ಥಿತಿಯಿಂದ ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕೆ ಶಕ್ತಿ ಇಲ್ಲ, ಇದಕ್ಕೆ ಇಷ್ಟು ಹಣ ಸಹಾಯವನ್ನು ಕೊಡಬೇಕು ಎನ್ನತಕ್ಕ ಅಂಕಿ ಅಂಶಗಳನ್ನು ಕೂಡ ಜೋಪಾನವಾಗಿ ಅವರಿಗೆ ಕೊಡಬೇಕಾಗಿತ್ತು. ಈ ದೇಶದ ಬಡ ಜನರ ಭೂಕಂದಾಯವನ್ನು ರದ್ದು ಮಾಡಿ, ಬೆಟರ್‌ಮೆಂಟ್ ಲೆವಿಯನ್ನು ಕಡಿಮೆ ಮಾಡಿ ಎಂದು ಹೇಳುತ್ತಿದ್ದಾರೆ ಎನ್ನುವ ವಾದವನ್ನು ಫೈನಾನ್ಸ್ ಕಮಿಷನ್ನಿನವರಮುಂದೆ ಇಡಬೇಕಾಗಿತ್ತು. ಕೇಂದ್ರ ಸರ್ಕಾರದವರು, ಮತ್ತು ಫೈನಾನ್ಸ್ ಕಮಿಷನ್ನಿನವರು ನಿಮ್ಮ ಇಂಟರ್‌ನರ್ ರಿಸೋರ್ಸಸ್ ಏನಿದೆ, ನಿಮಗೆ ಹಣ ಕೊಡುತ್ತೇವೆ ಎಂದು ಅವರು ಹೇಳಿದಾಗ ನೀವು ಭೂಕಂದಾಯವಮ್ಮ ಏರಿಸಿ ಅದರಿಂದ ಬರುವ ಆದಾಯವನ್ನು ಅವರ ಮುಂದೆ ಇಟ್ಟರಿ. ನಿಮ್ಮ ಹಣ ಎಲ್ಲಿದೆ, ರೈತರಿಂದ ಕಂದಾಯವನ್ನು ವಸೂಲು ಮಾಡುವುದಕ್ಕೆ ಆಗಿಲ್ಲ. ಕಂದಾಯವನ್ನು ಕೊಡುವ ಶಕ್ತಿ ರೈತರಿಗೆ ಇಲ್ಲ. ಇಂಥಾ ಅಂಕಿ ಅಂಶಗಳನ್ನು ಗಣನೆಗೆ ತೆಗೆದುಕೊಂಡು ನೀವು ಇಕ್ಕಟ್ಟಿಗೆ ಸಿಕ್ಕಿದ್ದೀರಿ ಎಂದು ನಾನು ಹೇಳುತ್ತೇನೆ. ಕೆಲವು ರಾಜ್ಯಗಳವರು ನಾವು ಭೂಕಂದಾಯವನ್ನು ರದ್ದು ಮಾಡಿದ್ದೇವೆ, ಅವನ್ನು ಸರಿದೂಗಿಸಿಕೊಡಬೇಕೆಂದು ಫೈನಾನ್ಸ್ ಕಮಿಷನ್ನಿನ ಮುಂದೆ ತಮ್ಮ ವಾದವನ್ನು ಇಟ್ಟು ಅದರಲ್ಲಿ ಅವರು ಗೆದ್ದಿದ್ದಾರೆ. ಇಂಥಾ ಕೆಲಸವನ್ನು

ನೀವು ಮಾಡಿದ್ದೀರಾ ಎಂದು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಮದ್ರಾಸ್ ಸರ್ಕಾರದವರು ಪುಡ್‌ಗ್ರೈನ್ಸ್ ಕೊಡುವುದಕ್ಕೆ 8 ಕೋಟಿ ರೂಪಾಯಿಗಳ ಸಬ್ಸಿಡಿಯನ್ನು ಕೊಟ್ಟು ಒಂದು ರೂಪಾಯಿಗೆ ಒಂದು ಪಡಿ ದವಸವನ್ನು ಕೊಡುವುದಕ್ಕೆ ಸಹಾಯ ಮಾಡಿದ್ದಾರೆ, ಇದರ ಬಗ್ಗೆ ಮಾನ್ಯ ಹಣಕಾಸಿನ ಸಚಿವರು ಹೇಳುತ್ತಾರೆ, ಚೀಫ್ ಪಾಪ್ಯುಲರಿಟಿಗೋಸ್ಕರ ಅವರು ಆ ರೀತಿ ಕೊಟ್ಟಿದ್ದಾರೆ ಎಂದು. ಅವರ ಈ ಒಂದು ವಾದ ಏನಿದೆ, ಇದರಲ್ಲಿ ತಿರುಳಿಲ್ಲ. ಇವರಿಗೆ ಆ ರೀತಿ ಮಾಡತಕ್ಕ ಧೈರ್ಯ ಬರಲಿಲ್ಲ. ಇವರು ಇಕ್ಕಟ್ಟಿಗೆ ಸಿಕ್ಕಿಹಾಕಿಕೊಂಡಿದ್ದಾರೆ. ಇವರು ನಮ್ಮ ರಾಜ್ಯದ ಪರ್‌ಕ್ಯಾಪಿಟಾ ಇಕಂ ಜಾಸ್ತಿಯಾಗಿದೆ ಎಂದು ಹೇಳಿದ್ದಾರೆ ಇವರ ಅಂಕೆ ಸಂಖ್ಯೆಗಳ ಶೇಖರಣೆಯಲ್ಲಿ ದೋಷ ಇರಬೇಕು ಎಂದು ನನಗೆ ಅನ್ನಿಸುತ್ತದೆ. ಏಕೆಂದರೆ ನಮ್ಮ ರಾಜ್ಯದ ಪರ್‌ಕ್ಯಾಪಿಟಾ ಇಕಂನ ಸರಾಸರಿ ಆದಾಯ ಏನಿದೆ ಅದನ್ನು ಮತ್ತು ಇವರು ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರ ನೋಡಿದರೆ ನಮಗೆ ಅನುಮಾನ ಬಂದಿದೆ ಮೈಸೂರು ರಾಜ್ಯದವರು ಮುಂದುವರಿದಿದ್ದಾರೆಂದು ಹೇಳಿದ್ದರಿಂದ ನಮ್ಮ ಹಣಕಾಸಿನ ಸಹಾಯದಲ್ಲಿ ದೋಷವಾಗಿದೆ. ಗ್ರಾಂಟ್ ಇನ್ ಏಯ್ಡ್ ಇತ್ಯಾದಿ ಅನೇಕ ರೀತಿಯಲ್ಲಿ ಸುಮಾರು 18 ಕೋಟಿ ರೂಪಾಯಿಗಳು ನಮಗೆ ಖೋತಾ ಆಗಿದೆ ಎಂದು ಹೇಳಿದ್ದಾರೆ. ಇದು ಎಲ್ಲರೂ ಯೋಚನೆ ಮಾಡತಕ್ಕ ವಿಚಾರ. ನಮ್ಮ ರಾಜ್ಯದಲ್ಲಿ ನೀರಾವರಿ ಇರತಕ್ಕ ಒಂದು ಸರಾಸರಿ ಲೆಕ್ಕವನ್ನು ತೆಗೆದುಕೊಂಡರೆ, ಇಡೀ ರಾಷ್ಟ್ರದಲ್ಲಿ ಅತಿ ಕಡಿಮೆ ಸರಾಸರಿ ನೀರಾವರಿಯನ್ನು ಹೊಂದಿರತಕ್ಕ ರಾಜ್ಯ ಎಂದರೆ ಮೈಸೂರು ದೇಶ. ಇಷ್ಟಲ್ಲದೆ ಮೂರನೇ ಪಂಚ ವಾರ್ಷಿಕ ಯೋಜನೆ ಕಾರ್ಯಗತವಾದಮೇಲೆ ಶೇಕಡಾ 8.6 ಮಾತ್ರ ನೀರಾವರಿ ಪ್ರದೇಶ ಇರುವ ರಾಜ್ಯಕ್ಕೆ ಫೈನಾನ್ಸ್ ಕಮಿಷನ್ನಿನವರು ನೆರವು ನೀಡಲಿಲ್ಲ. ಇಷ್ಟೊಂದು ದೋಷವನ್ನು ಫೈನಾನ್ಸ್ ಕಮಿಷನ್ನಿನವರು ನಮ್ಮ ರಾಜ್ಯಕ್ಕೆ ಮಾಡಿದ್ದಾರೆ ಎಂದು ನಾನು ಬಹಳ ಖೇದದಿಂದ ಹೇಳುತ್ತೇನೆ. ಇಂಥಾ ಒಂದು ಅನ್ಯಾಯ ಮಾಡಿರತಕ್ಕ ಫೈನಾನ್ಸ್ ಕಮಿಷನ್ ರಿಪೋರ್ಟ್‌ನ್ನು ನಮ್ಮ ರಾಜ್ಯ ಸರ್ಕಾರ ಹೇಗೆ ಒಪ್ಪಿಕೊಳ್ಳುವುದಕ್ಕೆ ಸಾಧ್ಯ? ನಮ್ಮ ರಾಜ್ಯದ ಗತಿ ಏನು? ಅಭಿವೃದ್ಧಿ ಕಾರ್ಯಗಳ ಗತಿ ಏನು? ನೀರಾವರಿ ಯೋಜನೆಗಳ ಗತಿ ಏನು! ಫೈನಾನ್ಸ್ ಕಮಿಷನ್ನಿನವರು ನಮ್ಮ ರಾಜ್ಯಕ್ಕೆ 18 ಕೋಟಿ ರೂಪಾಯಿಗಳನ್ನು ಖೋತಾ ಮಾಡಿರುವುದರಿಂದ ಯೋಜನೆಗಳ ಗತಿ ಏನಾಗಬೇಕು? ಈ ಬಗ್ಗೆ ದೀರ್ಘವಾಗಿ ಆಲೋಚನೆ ಮಾಡುವ ಹಂತಕ್ಕೆ ನಾವು ಬಂದಿದ್ದೇವೆ. ಆರ್ಥಿಕ ಸಚಿವರು ನೀರಾವರಿ ಯೋಜನೆಗಳನ್ನು ಕಾರ್ಯಗತ ಮಾಡಬೇಕೆಂದು ಎಲ್ಲಾ ಯೋಜನೆಗಳಿಗೂ ಸಂಬಂಧಪಟ್ಟಂತೆ ಒಂದು ರಿಸೋರ್ಸಸ್ ಕಮಿಟಿಯನ್ನು ನೇಮಕ ಮಾಡಿದ್ದಾರೆ ಅದರಲ್ಲಿ ನಾನೂ ಒಬ್ಬ ಸದಸ್ಯನಾಗಿದ್ದೇನೆ. ಫೈನಾನ್ಸ್ ಕಮಿಷನ್ನಿನವರದಿ ಬರುತ್ತದೆ, ಹಣ ಬರುತ್ತದೆ ಕಮಿಷನ್ ವರದಿಯನ್ನು ನೋಡೋಣ ಎಂದು ಮಾತನಾಡಿಕೊಂಡಿದ್ದೆವು. ಈಗ ರಿಸೋರ್ಸಸ್ ಕಮಿಟಿಯನ್ನು ರದ್ದುಮಾಡುವ ಅಭಿಪ್ರಾಯ ಬಂದಿದೆ. ಈಗ ಕಮಿಟಿ ಬಂದಿರತಕ್ಕ 18 ಕೋಟಿ ರೂಪಾಯಿಗಳನ್ನು ಯಾವ ಸಾಹುಕಾರನಿಂದ, ಯಾವ ರಿಸೋರ್ಸ್‌ನಿಂದ ತರುವುದಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ಬಹಳ ಆಳವಾಗಿ ಯೋಚನೆ ಮಾಡಬೇಕಾಗಿದೆ. ಈ ಸರ್ಕಾರಕ್ಕೆ ಶಕ್ತಿ ಇದ್ದರೆ, ಫೈನಾನ್ಸ್ ಕಮಿಷನ್ನಿನವರು ನಮ್ಮ ರಾಜ್ಯಕ್ಕೆ ಅನ್ಯಾಯ ಮಾಡಿದ್ದಾರೆ. ಆದ್ದರಿಂದ ಫೈನಾನ್ಸ್ ಕಮಿಷನ್ನಿನವರು ಕೊಟ್ಟಂಥ ತೀರ್ಮಾನಕ್ಕೆ ಮೈಸೂರು ರಾಜ್ಯದ ಶಾಸನ ಸಭೆಯ ವಿರೋಧ ಇದೆ ಎಂದು ಕೇಂದ್ರ ಸರ್ಕಾರಕ್ಕೆ ಹಾಗೂ ಫೈನಾನ್ಸ್ ಕಮಿಷನ್ನಿನವರಿಗೆ ಉಗ್ರ ಪ್ರತಿಭಟನೆ ಮಾಡಬೇಕು. ಇದು ಮಂತ್ರಿಮಂಡಲದ ದೊಡ್ಡ ಜವಾಬ್ದಾರಿಯಾಗಿದೆ. ಕೇಂದ್ರದಲ್ಲಿ ನಮ್ಮ ಪ್ರಭಾವ ಇಲ್ಲ. ನಮಗೆ ಅನ್ಯಾಯವಾಗಿದೆ ಎನ್ನುವುದನ್ನು ಸಾಬೀತು ಮಾಡಿಕೊಡುವ ನಾಯಕತ್ವ. ಕೇಂದ್ರದವರಮೇಲೆ ಪ್ರಭಾವ ಬೀರುವಂಥಾ ನಾಯಕತ್ವ, ನಮ್ಮ ರಾಜ್ಯದಲ್ಲಿ ಇಲ್ಲದೇ ಇರುವುದರಿಂದ ನಮ್ಮ ರಾಜ್ಯ ಹಿಂದುಳಿಯುವುದಕ್ಕೆ ಕಾರಣವಾಗಿದೆ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಫೈನಾನ್ಸ್ ಕಮಿಷನ್ನಿನವರು ಕೊಟ್ಟಂತಕ್ಕ ವರದಿಯಿಂದ ನಮ್ಮ ರಾಜ್ಯಕ್ಕೆ ಹೆಚ್ಚಿನ ಉಪಕಾರವಾಗುವುದಿಲ್ಲ ಎಂಬುದನ್ನು ಗ್ರಹಿಸಿ ಮುಖ್ಯ ಮಂತ್ರಿಗಳು ದೆಹಲಿ ಯಾತ್ರೆಯನ್ನು ಮಾಡಿದ್ದಾರೆ. ದೆಹಲಿಯಲ್ಲಿ ಅವರ ಮಾತು ನಡೆಯದಿದ್ದರೆ ಪ್ರಧಾನಿಯವರಿಗೆ ತಮ್ಮ ರಾಜೀನಾಮೆಯನ್ನು ಕೊಡುತ್ತೇನೆ ಎನ್ನುವಂಥಾ "ವೀರವಾಣಿ" ಶ್ರೀಮಾನ್ ವೀರೇಂದ್ರ ಪಾಟೀಲರಿಗೆ ಇದ್ದರೆ ನಾನು ಅವರನ್ನು ಅಭಿನಂದನೆ ಮಾಡುತ್ತೇನೆ. ದೆಹಲಿಯಲ್ಲಿ ಇವರು ಹೇಳಿದ ಮಾತು ನಡೆಯದೇ ಅವರು ಹೇಳಿದ್ದನ್ನು ಕೇಳಿಕೊಂಡು ಬಂದರೆ, ನೀವು ಯಾವ ಮುಖವನ್ನು ಹೊತ್ತುಕೊಂಡು ವಾಪಸ್ಸು ಬಂದಿರಿ, ಪಕ್ಷಕ್ಕೆ ನೀವು ರಾಜೀನಾಮೆ ಕೊಡುತ್ತೇನೆಂದು ಪ್ರಧಾನಿಯವರಿಗೆ ಹೇಳಲಿಲ್ಲ ಎಂದು ನಾನು ಹೇಳಬೇಕಾಗುತ್ತದೆ. ಮುಖ್ಯಮಂತ್ರಿಗಳು ದೆಹಲಿ ಯಾತ್ರೆಯಲ್ಲಿ ಏನು ಮಾಡಿಕೊಂಡು ಬರುತ್ತಾರೆ ಎಂಬುದನ್ನು ನಾವು ಕಾದು ನೋಡೋಣ. ಅವರು ಬಂದ ಮೇಲೆ ದೆಹಲಿಯಾತ್ರೆಯ ಬಗ್ಗೆ ಈ ಸಭೆಗೆ ಉತ್ತರ ಕೊಡಬೇಕಾಗುತ್ತದೆ. ಹಣಕಾಸಿನ ಪರಿಸ್ಥಿತಿ ಇಷ್ಟೊಂದು ವ್ಯಸನಕರವಾದ ಪರಿಸ್ಥಿತಿಯಲ್ಲಿರುವಾಗ

(ಶ್ರೀ ಎಸ್. ಶಿವಪ್ಪ)

ಸಪ್ಲಿಮೆಂಟರಿ ಡಿಮ್ಯಾಂಡನ್ನು ತಂದಿರುವುದನ್ನು ನೋಡಿದರೆ ಹಣವನ್ನು ಖರ್ಚು ಮಾಡುವುದರಲ್ಲಿ ನಿಮಗೆ ಹಿಡಿತವಿದೆಯೇ ಎಂಬುದನ್ನು ನೀವೇ ಯೋಚನೆ ಮಾಡಿ ಎಂದು ಹೇಳಬೇಕಾಗಿದೆ. ಮೊನ್ನೆ ತಾನೇ ಶಾಸನಸಭೆ ಮಾರ್ಚ್ ತಿಂಗಳಿನಲ್ಲಿ ಬಜೆಟ್ಟನ್ನು ಮಂಜೂರು ಮಾಡಿಕೊಟ್ಟಿತ್ತೆ. ಬಜೆಟ್ಟನ್ನು ಮಂಜೂರು ಮಾಡಿದ ದಿವಸವೇ ಖರ್ಚು ಹಾಕಿರತಕ್ಕಂಥ ಹಣ ಇಷ್ಟೊಂದು ಸಾವಿರ ರೂಪಾಯಿಗಳು ಇದೆ. ಸುಮಾರು 63 ಐಟಂಗಳಿಗೆ, ಸುಮಾರು 39 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಸಹಕಾರ ಸಂಘಗಳಿಗೆ ಸಾಲ ಮತ್ತು ಸಬ್ಸಿಡಿ ಕೊಡತಕ್ಕಂಥ 4) ವಿಷಯಗಳಿಗೆ ಮಾರ್ಚ್ 31 ನೇ ತಾರೀಖು ಗೌರ್ಮೆಂಟ್ ಆರ್ಡರ್ ಮಾಡಿ ಇಪ್ಪತ್ತು ಸಪ್ಲಿಮೆಂಟರಿ ಎಸ್ಟಿಮೇಟಿನಲ್ಲಿ ತಂದಿರುವುದನ್ನು ನೋಡಿದರೆ ಇವರು ಬಡ್ಜೆಟನ್ನು ಸಭೆಯಮುಂದೆ ಇಡುವಾಗ ಸಪ್ಲಿಮೆಂಟರಿ ಎಸ್ಟಿಮೇಟಿನಲ್ಲಿ ಇರತಕ್ಕ ವಿಷಯಗಳು ಇದ್ದರೂ ಅವುಗಳನ್ನು ಸಭೆಯಮುಂದೆ ಇಡದೆ ಬಡ್ಜಟ್ ಆದಮೇಲೆ ಇದನ್ನು ಇಡೋಣ ತಮಗೆ ಬೇಕಾದವರಿಗೆ ಬೇಕಾದಂಥ ಸೌಲಭ್ಯಗಳನ್ನು ಕೊಡೋಣ ಎಂದು ಉದ್ದೇಶವನ್ನು ಇಟ್ಟುಕೊಂಡಿದ್ದಾರೆ ಎಂದು ಕಾಣುತ್ತದೆ ಅಧಿಕಾರದಲ್ಲಿರತಕ್ಕ ಜನ ನ್ಯಾಯನಪಕ್ಷಪಾತವಿಂದ ತಮ್ಮ ಜನಗಳಿಗೆ ಸೌಲಭ್ಯಗಳನ್ನು ಕೊಡುವುದಕ್ಕೋಸ್ಕರ ಹಣವನ್ನು ಖರ್ಚು ಮಾಡಿ ಶಾಸನ ಸಭೆಗೆ ಒಂದು ಸಪ್ಲಿಮೆಂಟರಿ ಬಡ್ಜೆಟ್ಟಿನ ಡಿಮ್ಯಾಂಡನ್ನು ಇಡುವುದಾದರೆ ಖಂಡಿತ ವಾಗಿಯೂ ನೀವು ನಿಮ್ಮ ಹಣಕಾಸಿನ ನೀತಿಗೆ ಸರಿಯಾಗಿ ಹೊಂದಿಕೊಂಡು ಹೋಗುತ್ತಿಲ್ಲ ನಿಮ್ಮ ಹಣಕಾಸಿನ ನೀತಿ ಅನುಮಾನಕ್ಕೆ ಎಡೆ ಕೊಟ್ಟಹಾಗೆ ಆಗುತ್ತದೆ ಎಂಬುದನ್ನು ನಾನು ಹೇಳುತ್ತೇನೆ.

ಈ ಸಪ್ಲಿಮೆಂಟರಿ ಡಿಮ್ಯಾಂಡ್ 39·42 ಕೋಟಿ ಅಂದರೆ ಸುಮಾರು 40 ಕೋಟಿ ರೂಪಾಯಿ ಗಳನ್ನು ಖರ್ಚುಮಾಡತಕ್ಕಂಥಾದ್ದು ಆಗಿದೆ. ನಮ್ಮ ಹಣಕಾಸಿನ ಸಚಿವರು ಮಾಮೂಲಾಗಿ ಹೇಳು ತ್ತಾರೆ, ಇಷ್ಟೊಂದು ಹಣವನ್ನು ಕೂಡಖರ್ಚು ಮಾಡುವುದು ಅಲ್ಲ, ಎಲ್ಲಾ ಅಡ್‌ಜೆಸ್ಟ್‌ಮೆಂಟು, ಸರ್ಕಾರದ ಖಜಾನೆಗೆ ಖರ್ಚು ಬರುವುದು ಸುಮಾರು ಒಂದೂವರೆಕೋಟಿ ರೂಪಾಯಿಗಳು ಎಂದು.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರಿಗೆ ತಪ್ಪು ತಿಳಿವಳಿಕೆಯಾಗಬಾರದು ಎಂದು ಈ ಸಲ ಇಂಟ್ರಡಕ್ಟರಿ ರಿಮಾರ್ಕ್ಸ್‌ನಲ್ಲಿ ವಿವರಗಳನ್ನು ಕೊಡಲಾಗಿದೆ. ಅಡ್‌ಜೆಸ್ಟ್‌ಮೆಂಟ್ ಎಷ್ಟು, ಕೇಂದ್ರ ಸರ್ಕಾರದಿಂದ ಬರಬೇಕಾಗಿರುವುದು ಎಷ್ಟು ಎಂಬುದನ್ನು. ನಮ್ಮ ಸರ್ಕಾರದ ಖಜಾನೆಗೆ ಬರುವ ಖರ್ಚು 103 ಲಕ್ಷ ಚಿಲ್ಲರೆ ಮಾತ್ರ.

ಶ್ರೀ ಎಸ್. ಶಿವಪ್ಪ.—ಅಂತೂ ಈಗ 39 ಕೋಟಿ ರೂಪಾಯಿಗಳಿಗೆ ಮಂಜೂರಾತಿಯನ್ನು ಕೊಡಬೇಕಾಗಿದೆ. ಕೆಲವು ಅಡ್‌ಜೆಸ್ಟ್‌ಮೆಂಟ್‌ಗಳು ಇವೆ. ಶರಾವತಿ ಯೋಜನೆಯನ್ನು ಎಲೆಕ್ಟ್ರಿಸಿಟಿ ಬೋರ್ಡಿನವರಿಗೆ ವಹಿಸಿದ್ದರಿಂದ ಏಳೂವರೆ ಕೋಟಿ ರೂಪಾಯಿಗಳಷ್ಟು ರೆವಿನ್ಯೂ ಸರ್ಕಾರಕ್ಕೆ ಬರುತ್ತದೆ ಎಂದು ಬಡ್ಜೆಟ್‌ನಲ್ಲಿ ಹೇಳಿದ್ದರು. ಆದರೆ ಅವರಿಂದ ಬಂದಿಲ್ಲ. ಈಗ ಅದೇ ಏಳೂವರೆ ಕೋಟಿ ರೂಪಾಯಿಗಳನ್ನು ಅವರಿಗೆ ಸಾಲದ ರೂಪದಲ್ಲಿ ಕೊಡುತ್ತೇವೆಂದು ಇಲ್ಲಿ ಹೇಳಿದ್ದೀರಿ. ಇದೇ ರೀತಿ ಅನೇಕ ಕೈಗಾರಿಕೆಗಳಿಗೆ, ಸೊಸೈಟಿಗಳಿಗೆ ಸಾಲ ಕೊಡುವ ಪದ್ಧತಿಯನ್ನು ಅನುಸರಿಸಿಕೊಂಡು ಬಂದು ಈ ರಾಜ್ಯದ ಈಗಿನ ಹಣಕಾಸಿನ ನಿಜವಾದ ಪರಿಸ್ಥಿತಿ ಏನು ಎಂಬುದನ್ನು ಅಖ್ಯರಾಗಿ ಹೇಳುವ ಪರಿಸ್ಥಿತಿಯಲ್ಲಿ ಇಲ್ಲದವರಾಗಿದ್ದಾರೆ. ಹಣವ ಕೊರತೆ ಎಷ್ಟು ಇದೆ ಎಂಬುದನ್ನು ಹೇಳ ತಕ್ಕಂಥ ಪರಿಸ್ಥಿತಿಯಲ್ಲಿ ಈ ಸರ್ಕಾರ ಇಲ್ಲ. ಒಂದೊಂದು ಸಪ್ಲಿಮೆಂಟರಿ ಡಿಮ್ಯಾಂಡ್ ಬಂದಾಗಲೂ ಕೂಡ ಹತ್ತಿಪ್ಪತ್ತು ಕೋಟಿ ರೂಪಾಯಿಗಳ ಕೊರತೆ ಹೆಚ್ಚಾಗುತ್ತಲೇ ಹೋಗುತ್ತಿದೆ. ಆ ರೀತಿ ಬಡ್ಜೆಟ್‌ನ ಪರಿಸ್ಥಿತಿಯನ್ನು ತಂದಿಟ್ಟಿದ್ದಾರೆ. ನರಿಯಾದ ಬಾಬುಗಳಿಗೆ ಹಣವನ್ನು ಖರ್ಚು ಮಾಡು ತ್ತಿಲ್ಲ. ಪ್ರತಿಸಲವೂ ಕೂಡ ನಾವು ಅತಿ ಅಗತ್ಯವಾಗಿ ಅಭಿವೃದ್ಧಿ ಕಾರ್ಯಗಳಿಗೆ ಎಲ್ಲಿ ಖರ್ಚು ಮಾಡಬೇಕೆಂಬುದನ್ನು ನೋಡಿಕೊಂಡು ಮಾಡಿ ಎಂದು ರಾಜ್ಯಸರ್ಕಾರಕ್ಕೆ ಹೇಳುತ್ತಲೇ ಇದ್ದೇವೆ. ಆದರೆ ನಾವು ಹೇಳುವುದು ಸರ್ಕಾರದ ಕಿವಿಗೆ ಬೀಳುತ್ತಲೇ ಇಲ್ಲ. ಇವತ್ತಿನದಿನಪತ್ರಿಕೆಯನ್ನು ನೋಡಿದರೆ ಫೈನಾನ್ಸ್ ಕಮಿಷನರ್ ಅವರು ಕೂಡ ನಮ್ಮ ರಾಜ್ಯಕ್ಕೆ ಹಣದ ಕೊರತೆ ಮಾಡಿದ್ದಾರೆ. ಅಭಿವೃದ್ಧಿ ಯೋಜನೆ ಗಳಿಗೆ, ನೀರಾವರಿ ಯೋಜನೆಗಳಿಗೆ ಖರ್ಚು ಮಾಡಲು ಹಣ ಇಲ್ಲವೆಂದು ಹೇಳುತ್ತೀರಿ. ಆದರೆ ಡಿಮ್ಯಾಂಡ್ 10ರಲ್ಲಿ ರಾಜಭವನವನ್ನು, ಶೃಂಗಾರ ಮಾಡುವುದಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ. ಕೆಲವು ಹಳ್ಳಿಗಳಲ್ಲಿ ಕುಡಿಯುವ ನೀರಿನ ಬಾವಿಗಳು ಇಲ್ಲ. ಅಂತಹ ಕಡೆ ಬಾವಿಗಳನ್ನು ತೋಡಿಸಲು ಹಣ ಇಲ್ಲವೆಂದು ಹೇಳುತ್ತೀರಿ. ಆದರೆ ರಾಜ್ಯಭವನಕ್ಕೆ ಸೋಫಾ ಸೆಟ್ ಕಾರ್ಪೆಟ್ ಮುಂತಾದವನ್ನು ಅಳವಡಿಸುವುದಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ. ಇದರ ಅವಶ್ಯಕತೆಯಾದರೂ ಕೂಡ ಏನಿತ್ತು. ಮಾನ್ಯ ಆರ್ಥಿಕ ಮಂತ್ರಿಗಳು ಯಾವಾಗಲೂ ಕೂಡ ಹಣವಿಲ್ಲವೆಂದು ಹೇಳುತ್ತಿರುತ್ತಾರೆ, ಆದರೆ ಶೃಂಗಾರವು ನೀತಿಯನ್ನು

ಮಾತ್ರ ಅನುಸರಿಸಿಕೊಂಡು ಬಂದಿದ್ದಾರೆ. ಕೋಆಪರೇಟಿವ್ ಸೆಕ್ಟಾರ್‌ಗೆ ಮತ್ತು ಇಂಡಸ್ಟ್ರಿಯಲ್ ಸೆಕ್ಟಾರ್‌ಗೆ ತಮ್ಮ ಮನಸ್ಸಿಗೆ ಬಂದಂತೆ ಹಣವನ್ನು ಕೊಡುತ್ತಿದ್ದೀರಿ. ಅದೂ ಕೂಡ ತಮಗೆ ಬೇಕು ಬೇಕಾದವರಿಗೆ ಕೊಡುತ್ತಿದ್ದೀರಿ. ಸಹಕಾರ ಇಲಾಖೆಯ ಮಂತ್ರಿಗಳಾದ ಶ್ರೀ ನಾಡಗೌಡರು ಸರ್ವಾಧಿಕಾರಿಗಳಾಗಿದ್ದಾರೆ. ಅವರು ತಮ್ಮ ಕಡೆಯವರಿಗೆ ಸೊಸೈಟಿಗಳನ್ನು ಸ್ಥಾಪನೆ ಮಾಡಲು ಹಣವನ್ನು ಕೊಟ್ಟು ಒಬ್ಬೊಬ್ಬರನ್ನೂ ಕೂಡ ಸಹಕಾರಿಗಳನ್ನಾಗಿ ಮಾಡಿದ್ದಾರೆ. ಇವತ್ತಿನ ದಿವಸ ಸರ್ಕಾರದವರು ಸೊಸೈಟಿಗಳನ್ನು ಸ್ಥಾಪನೆ ಮಾಡಲು ತಮಗೆ ಬೇಕಾದವರಿಗೆ ಸಾಲದ ರೂಪದಲ್ಲಿ, ಗ್ರ್ಯಾಂಟ್ ರೂಪದಲ್ಲಿ, ಸಬ್ಸಿಡಿ ರೂಪದಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಕೆಲವು ವ್ಯಕ್ತಿಗಳನ್ನು ಪೋಷಣೆ ಮಾಡುವುದಕ್ಕಾಗಿ ಖಜಾನೆಯಿಂದ ಹಣವನ್ನು ಕೊಡುತ್ತಿದ್ದೀರಿ. ಕಂಠೀರವ ಸ್ಟುಡಿಯೋ ಲಿಮಿಟೆಡ್‌ಗೆ 12 ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಡುತ್ತಿದ್ದಾರೆ. ಅಲ್ಲಿ ಅಧಿಕಾರವರ್ಗದವರು ಯಾರಿದ್ದಾರೆಂಬುದು ನನಗೆ ಗೊತ್ತಿಲ್ಲ. ಸರ್ಕಾರದವರೇ ಒಂದು ಸ್ಟುಡಿಯೋವನ್ನು ಸುಸಜ್ಜಿತ ರೀತಿಯಲ್ಲಿ ಕಟ್ಟಿಸುತ್ತಾರೆ ಎಂದು ಮಾನ್ಯ ಹಣಕಾಸಿನ ಸಚಿವರೇ ಎಷ್ಟೋ ಸಲ ಹೇಳುತ್ತಿದ್ದರು. ಮತ್ತು ಆಧುನಿಕ ರೀತಿಯಲ್ಲಿ ಒಂದು ಸ್ಟುಡಿಯೋ ನಮ್ಮ ರಾಜ್ಯದಲ್ಲಿ ಆಗಬೇಕಾಗಿದೆ ಎಂದು ಹೇಳುತ್ತಿದ್ದರು. ಆದರೆ ಇವತ್ತಿನದಿವಸ ಸರ್ಕಾರದವರೇ ಕಟ್ಟಿಸುವ ಬದಲು ತಮಗೆ ಬೇಕಾದ ಸ್ನೇಹಿತರೊಬ್ಬರಿಗೆ 12 ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಟ್ಟು ಸ್ಟುಡಿಯೋ ಕಟ್ಟಿಸುತ್ತಿದ್ದಾರೆ. ಗುಲ್ಬರ್ಗದ ಎಂ. ಎಸ್. ಕೆ. ಮಿಲ್‌ಗೆ ಇದುವರೆಗೆ ಸರ್ಕಾರದವರು ಎರಡು ಕೋಟಿ ರೂಪಾಯಿಗಳವರೆಗೆ ಸಾಲವಾಗಿ ಕೊಟ್ಟಿದ್ದಾರೆ. ಲುಕ್ಸಾನಿನಲ್ಲಿ ನಡೆಯುತ್ತಿರುವ ಈ ಮಿಲ್‌ಗೆ ಮತ್ತೆ 40 ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಡುವುದಕ್ಕೆ ಹೊರಟಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—40 ಲಕ್ಷ ರೂಪಾಯಿಗಳನ್ನು ಹೊಸದಾಗಿ ಸಾಲುವಾಗಿ ಕೊಡುತ್ತಿಲ್ಲ. ಹೊದ ವರ್ಷವೇ ಅಲಾಟ್ ಮಾಡಲಾಗಿತ್ತು. ಆದರೆ ಅವರು ಡ್ರಾ ಮಾಡಿರಲಿಲ್ಲ. ಈಗ ಡ್ರಾ ಮಾಡುತ್ತಿದ್ದಾರೆ. ಅದಕ್ಕಾಗಿ ಅಲ್ಲಿ ತೋರಿಸಲಾಗಿದೆ.

ಶ್ರೀ ಎಚ್. ಸಿದ್ದವೀರಪ್ಪ (ಹರಿಹರ).—ಮತ್ತೆ ಸಾಲ ಕೊಡುವುದಿಲ್ಲವೆಂದು ಹೇಳಿ.

ಶ್ರೀ ರಾಮಕೃಷ್ಣ ಹೆಗಡೆ.—ಒಂದು ಸಂತೋಷದ ವಿಷಯ ಹೇಳಬೇಕೆಂದರೆ ಎಂ. ಎಸ್. ಕೆ. ಮಿಲ್ ಈಗ ನಷ್ಟದ ಬದಲು ಲಾಭದಲ್ಲಿ ನಡೆಯುತ್ತಿದೆ.

ಶ್ರೀ ಎಸ್ ಶಿವಪ್ಪ.—ಸರ್ಕಾರದಿಂದ ಹಣವನ್ನು ಸಾಲವಾಗಿ ಪಡೆದು, ಅದೇ ಹಣವನ್ನು ಲಾಭ ಬಂದಿದೆ ಎಂದು ವಾಪಸ್ ಕೊಡುತ್ತಿರಬಹುದು. ಹಿಂದೆ ಗೋಪಾಲರಾವ್ ಎಂಬ ಖಾಸಗಿ ಇದ್ದ. ಅವನು ಸಾಹುಕಾರರ ಹತ್ತಿರ ಹೋಗಿ 25 ಪರ್‌ಸೆಂಟ್ ಬಡ್ಡಿ ಕೊಡುತ್ತೇನೆಂದು ಹೇಳಿ ಹಣ ಪಡೆದು, ಅದೇ ಹಣದಲ್ಲಿ ಮುಂಗಡವಾಗಿ 25 ಪರ್‌ಸೆಂಟ್ ಬಡ್ಡಿ ಕೊಡುತ್ತಿದ್ದ. ಉಳಿದ 75 ಭಾಗದ ಹಣಕ್ಕೆ ನಾಮ ಹಾಕುತ್ತಿದ್ದ. ಎಂ. ಎಸ್. ಕೆ. ಮಿಲ್‌ನವರು ಸಹ ಇದೇ ರೀತಿ ಮಾಡುತ್ತಿರಬಹುದು. ಈ ಪ್ರಕಾರ ಸೊಸೈಟಿಗಳು ಮತ್ತು ಮಿಲ್‌ಗಳು ಲಾಭ ತೋರಿಸಿ ಸರ್ಕಾರದಿಂದ ಹಣವನ್ನು ತೆಗೆದುಕೊಂಡು ಖರ್ಚು ಮಾಡುತ್ತಿವೆ. ಅವುಗಳಿಗೆ ಸಾಲ ಕೊಡಬೇಡಿ ಎಂದು ಅನೇಕ ಸಾರಿ ಸರ್ಕಾರಕ್ಕೆ ನಾವು ಹೇಳಿದ್ದೇವೆ. ನಾನಾದರೂ ಕೂಡ ಅಪಾರವಾದ ಅಂಕಿಅಂಶಗಳನ್ನು ತೆಗೆದುಕೊಂಡು ಚರ್ಚೆ ಮಾಡದೆ, ಇನ್ನು ಒಂದೆರಡು ವಿಚಾರಗಳನ್ನು ಮಾತ್ರ ಹೇಳುತ್ತೇನೆ. ಶರಾವತಿ ಎಲೆಕ್ಟ್ರಿಸಿಟಿ ಪ್ರಾಜೆಕ್ಟ್‌ನ್ನು ನಡೆಸುವುದಕ್ಕೆ ಈನ್ನೂ ಆಗಲಿಲ್ಲ. ಇದಕ್ಕಾಗಿ ಇಲ್ಲಿ ನುಮಾರು ಹತ್ತು ಕೋಟಿಯಷ್ಟು ಬಡ್ಡಿ ಕೊಡಬೇಕೆಂದು ಇದರಲ್ಲಿ ಹೇಳಿದ್ದಾರೆ. ಇದರಿಂದ ಇನ್ನೂ ಯಾವ ಲಾಭವೂ ಕೂಡ ಬಂದಿಲ್ಲ. ಹಾಗೇನಾದರೂ ಲಾಭ ಬಂದಿದ್ದರೆ ಅದರ ವಿಚಾರವನ್ನು ಪ್ರಸ್ತಾಪ ಮಾಡಿ ಇದರ ಆಡಜಸ್ಟ್‌ಮೆಂಟಿಗಾಗಿ ಹತ್ತು ಕೋಟಿ ಕೊಡಬೇಕೆಂದು ಕೇಳಿದರೆ ಕೊಡಬಹುದಾಗಿತ್ತು. ಶರಾವತಿ ಯೋಜನೆಯಲ್ಲಿ ನಾವು ಹಿಂದೆ ಕೂಡ ಪ್ರಸ್ತಾಪ ಮಾಡಿದಾಗ ಇಲ್ಲಿ ಹಣ ಯಾವ ಯಾವ ರೀತಿಯಲ್ಲಿ ಪೋಲಾಗುತ್ತಿದೆ, ಯಾವ ರೀತಿಯಲ್ಲಿ ಖರ್ಚು ಮಾಡಿದ್ದಾರೆ ಮತ್ತು ಯಾವ ರೀತಿಯಾಗಿ ದುರುಪಯೋಗವಾಗಿದೆ ಮತ್ತು ಯಾವ ಯಾವ ಅವ್ಯವಹಾರಗಳ ಪ್ರಕರಣ ನಡೆಯಿತು ಮತ್ತು ಎಲ್ಲಿ ಒಂದಕ್ಕೆರಡು ಪಟ್ಟಿನಷ್ಟು ಹಣ ಖರ್ಚಾಯಿತು ಎನ್ನುವ ವಿಚಾರಗಳನ್ನೆಲ್ಲಾ ನಾವು ವಿವರವಾಗಿ ಪ್ರಸ್ತಾಪ ಮಾಡುತ್ತಲೇ ಬರುತ್ತಿದ್ದೇವೆ. ಇದಕ್ಕೆ ಇಂದು ಸುಮಾರು ಹತ್ತು ಕೋಟಿಯಷ್ಟು ಹಣ ಕೊಡಬೇಕೆಂದು ತರುತ್ತಿದ್ದಾರೆ. ಇಷ್ಟು ಹಣ ಖರ್ಚು ಮಾಡಿದ್ದರೂ ಶರಾವತಿಯಿಂದ ನಮಗೆ ಇನ್ನೂ ಯಾವ ರೀತಿಯಾದ ಲಾಭವೂ ಬರುತ್ತಿಲ್ಲ. ಇದರ ಆದಾಯ ಸಿಳಿಂಟು ಕೋಟಿ ಇದ್ದರೆ ಈಗ ಸಾಲದ ಬಡ್ಡಿಗಾಗಿ ಕೊಡುವ ಬಡ್ಡಿ ಸುಮಾರು ಹತ್ತು ಕೋಟಿ ತೋರಿಸುತ್ತದೆ. ತಾವು ಖರ್ಚು ಮಾಡುತ್ತಿರುವ ರೀತಿನೀತಿಗಳು ಹಾಗೂ ಇಲ್ಲಿ ನಡೆದಿರುವ ಪ್ರಕರಣಗಳು ಇವನ್ನು ನೋಡಿದರೆ ಇಂದು ನಮ್ಮ ರಾಜ್ಯದಲ್ಲಿರುವ ಎಲ್ಲ ವಿದ್ಯುಚ್ಛಕ್ತಿಯನ್ನೂ ಪೂರ್ಣವಾಗಿ ಉಪಯೋಗ ಮಾಡಿಕೊಳ್ಳುವ ಯೋಗ ನಮ್ಮ ರಾಜ್ಯಕ್ಕೆ ಇಲ್ಲ. ನಮ್ಮ ರಾಜ್ಯದಲ್ಲಿ ವಿದ್ಯುಚ್ಛಕ್ತಿಯ ಉಪಯೋಗ

(ಶ್ರೀ ಎಸ್. ಶಿವಪ್ಪ)

ವನ್ನು ಪಡೆಯುವ ಶಕ್ತಿ ನಮ್ಮ ಸರ್ಕಾರಕ್ಕೆ ಇಲ್ಲ. ಇದಕ್ಕೆ ಬದಲಾಗಿ ಒಂದಕ್ಕೆ ನಾಲ್ಕರಷ್ಟು ಅವರಿಗೆ ಬೇಕು ಬೇಕಾದವರುಗಳಿಗಾಗಿ ಖರ್ಚು ಮಾಡಿದ್ದಾರೆ. ಇದರ ಬಗ್ಗೆ ನಾವು ಕೂಡ ಒಂದು ಪಟ್ಟಿಮಾಡಿ ಒಂದು ನ್ಯಾಯಾಂಗ ವಿಚಾರಣೆ ಮಾಡಿ ಎಂದು ಹೇಳಿದರೂ ಇದುವರೆಗೆ ಮಾಡಿಲ್ಲ. ಆಗ ಈ ಶಾಖೆಯ ಮಂತ್ರಿಗಳಾಗಿದ್ದವರೇ ಇಂದಿನ ಮಂತ್ರಿಮಂಡಲದಲ್ಲಿ ಮುಖ್ಯ ಮಂತ್ರಿಗಳಾಗಿದ್ದಾರೆ. ಹಾಗಿದ್ದರೂ ಇನ್ನೂ ಇವರ ಬಗ್ಗೆ ಯಾವ ಒಂದು ವಿಚಾರಣೆ ಮಾಡಲು ಅನುಮಾನ ಮಾಡುತ್ತಿದ್ದಾರೆ. ನಾವು ಇದೇ ಆಪಾದನೆಗಳ ಪಟ್ಟಿಗಳನ್ನು ಮಾಡಿ ಭಾರತದ ರಾಷ್ಟ್ರಾಧ್ಯಕ್ಷರಿಗೂ ಹಾಗೂ ಪ್ರಧಾನ ಮಂತ್ರಿಗಳಿಗೂ ಕೊಟ್ಟು ಅವರ ಅವಗಾಹನೆಗೂ ತಂದಿದ್ದೇವೆ. ಇದರಮೇಲೆ ನಮ್ಮ ರಾಜ್ಯದವರು ಯಾವ ಒಂದು ಖಚಿತವಾದ ಪಾದವನ್ನೂ ಇಲ್ಲಿ ಹೇಳಲಿಲ್ಲ. ನಾವು ಕೂಡ ಪ್ರಧಾನ ಮಂತ್ರಿಗಳಲ್ಲಿ ಶರಾವತಿ ಬಗ್ಗೆ ವಿಚಾರಣೆ ನಡೆಸಬೇಕೆಂದು ಒತ್ತಿ ಒತ್ತಿ ಹೇಳಿದ್ದೇವೆ. ಆದರೆ ಸರಕಾರ ವಿಚಾರಣೆ ಮಾಡುವುದಕ್ಕೆ ಧೈರ್ಯ ಕೂಡ ಇಲ್ಲ ಎಂದು ಇಲ್ಲಿ ನಾನು ಹೇಳುತ್ತೇನೆ. ಮತ್ತೊಮ್ಮೆ ನಾವು ಇದರ ಬಗ್ಗೆ ಅನ್ಯಾಯಗಳಾಗಿವೆ ಎಂದು ಪ್ರಧಾನ ಮಂತ್ರಿಗಳ ಗಮನಕ್ಕೆ ತಂದು ಇದರ ಒಂದು ಎನ್‌ಕ್ವೈರಿ ಮಾಡಿ ಎಂದು ಹೇಳಿದ್ದೇವೆ. ಮತ್ತು ನಮ್ಮ ಹಣಕಾಸಿನ ಸಚಿವರು ರಾಜ್ಯದ ಹಣಕಾಸಿನ ಚಿತ್ರವನ್ನು ಇದರಲ್ಲಿ ಸರಿಯಾಗಿ ನೂಚಿಸಿಲ್ಲ ಎಂದು ಹೇಳಿ ನಾನು ಇದನ್ನು ವಿರೋಧ ಮಾಡುತ್ತೇನೆ.

ಶ್ರೀ ಎನ್. ಎ. ಚನ್ನೇಗೌಡ (ಪಾಂಡವಪುರ).—ಮಾನ್ಯ ಅಧ್ಯಕ್ಷರೇ, ರಾಜ್ಯದ ಹಣಕಾಸಿನ ಸಚಿವರಾದ ಶ್ರೀಮಾನ್ ರಾಮಕೃಷ್ಣ ಹೆಗ್ಗಡೆಯವರು ಮಂಡಿಸಿರತಕ್ಕ ಸಪ್ಲಿಮೆಂಟರಿ ಡಿಮ್ಯಾಂಡುಗಳನ್ನು, ನಾನು ಬಹು ತೀವ್ರವಾಗಿ ವಿರೋಧಿಸುತ್ತೇನೆ ಮತ್ತು ಒಂದೆರಡು ಅಂಶಗಳನ್ನು ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ.

ಕಳೆದ ನಾಲ್ಕಾರು ವರ್ಷಗಳಿಂದ ಪ್ರತಿ ಸಾಲಿನಲ್ಲೂ ಹೆಚ್ಚುವರಿ ಬೇಡಿಕೆಯ ಒಂದು ವಿಚಿತ್ರ ರೋಗ ಹೈನಾನ್ಸ್ ಮಿನಿಸ್ಟರವರಿಗೆ ಅಂಟಿಕೊಂಡಿದೆ. ಪ್ರತಿಯೊಂದು ಸಾರಿಯೂ ಇಂತಹ ಸಪ್ಲಿಮೆಂಟರಿ ಡಿಮ್ಯಾಂಡುಗಳನ್ನು ತರುವುದು ಈ ಸರಕಾರದ ಒಂದು ವೈಶಿಷ್ಟ್ಯ ಆಗಿದೆ ಇನ್ನೊಂದು ಈ ಸರಕಾರದ ವೈಶಿಷ್ಟ್ಯ ಎಂದರೆ ಇದಕ್ಕಾಗಿಯೇ ಒಂದು ಇರಾಖೆ ಇಟ್ಟುಕೊಂಡು ಅದಕ್ಕೆ ಬೇಕಾದ ಎಲ್ಲ ಸಹಾಯ ಸಲಕರಣೆಗಳನ್ನೂ ಇಟ್ಟುಕೊಂಡು ಒಂದು ಸರಿಯಾದ ಬಡ್ಜೆಟ್ಟನ್ನು ತಯಾರು ಮಾಡಲಾರದೆ ಇರುವುದು. ಪ್ರತಿ ವರ್ಷವೂ ಇಂತಹ ಸಪ್ಲಿಮೆಂಟರಿ ಡಿಮ್ಯಾಂಡ್ಸನ್ನು ಈ ಸಭೆಯ ಮುಂದೆ ತರುವುದು ಸರಕಾರದ ಅದಕ್ಷತೆಯನ್ನು ತೋರಿಸುತ್ತದೆ. ರಾಜ್ಯಾಂಗದ ಪ್ರಕಾರ ಇಂತಹ ಸಪ್ಲಿಮೆಂಟರಿ ಡಿಮ್ಯಾಂಡುಗಳನ್ನು ತರಬಹುದು. ಒಂದು ಅನಿರೀಕ್ಷಿತವಾದಂತಹ ಹೊಸ ಸೇವೆಯನ್ನು ಕೈಗೊಂಡ ಪರಿಸ್ಥಿತಿಯಲ್ಲಿ ಮಾತ್ರ ತರಬಹುದು ಮತ್ತು ಅಂತಹ ಕಾಲದಲ್ಲಿ ನ್ಯೂ ಸರ್ವಿಸ್‌ಗಳನ್ನು ವಿವರಿಸಿ ಸಪ್ಲಿಮೆಂಟರಿ ಡಿಮ್ಯಾಂಡುಗಳನ್ನು ತಂದು ಇಲ್ಲಿ ಮಂಡಿಸಬೇಕು. ಆದರೆ ಈಗ ಇಂತಹ ಅಸಾಧಾರಣವಾದ ಯಾವ ಪರಿಸ್ಥಿತಿಗಳು ಕಂಡುಬರುತ್ತಿಲ್ಲ. ನ್ಯಜನ ಪಕ್ಷಪಾತಕ್ಕಾಗಿ ಸರಕಾರದ ಹಣವನ್ನು ದುರುಪಯೋಗಮಾಡುತ್ತಿದ್ದಾರೆ ಎಂದು ಹೇಳಬೇಕಾಗಿದೆ. ಶ್ರೀಮಾನ್ ಶಿವಪ್ಪನವರು ಈಗಾಗಲೇ ಹೇಳಿದಂತೆ ಸಾಲವಾಗಿ ತಮಗೆ ಬೇಕಾದವರಿಗೆ ಕಂಠೀರವ ಸ್ಟೂಡಿಯೋವಿಗೆ ಸುಮಾರು 12 ಲಕ್ಷ ದಷ್ಟು ಹಣವನ್ನು ಕೊಟ್ಟಿದ್ದಾರೆ. ಕೊಟ್ಟ ಸಾಲದ ಹಣಕ್ಕೆ ಬಡ್ಡಿ ಯಾವ ದರದಿಂದ ಕೊಟ್ಟಿದ್ದಾರೆ ನೋಡಿ. ಮೊದಲನೇ ಸಾರಿ ಶೇಕಡ ಏಳುವರೆಯಷ್ಟು ಕೊಟ್ಟು ಇದರಲ್ಲೇ ರೀಬೇಟ್ ಆಗಿ ಶೇಕಡಾ ಎರಡೂವರೆಯಷ್ಟು ಕೊಡುವಷ್ಟರತ್ತು ಹಾಕಿದ್ದಾರೆ. ಎಂದರೆ ಇದರ ಬಡ್ಡಿ ಶೇಕಡಾ ಐದರಷ್ಟು ಮಾತ್ರ ಆಯಿತು. ಸಾಲವನ್ನು ಸಕಾಲದಲ್ಲಿ ಉಪಯೋಗಿಸಿಕೊಳ್ಳದ ಪ್ರಯುಕ್ತ ಅದೇ ಸಾಲವನ್ನು ಎರಡನೇ ಸಾರಿ ಇದೇ ಸ್ಟೂಡಿಯೋವಿಗೆ ಕೊಡುವಾಗ ಶೇಕಡಾ ಹತ್ತರಷ್ಟು ಬಡ್ಡಿ ಕೊಡಬೇಕೆಂದು ಹೇಳಿ ಶೇಕಡಾ ನಾಲ್ಕರಷ್ಟು ರೀಬೇಟು ಕೊಡುತ್ತೇವೆಂದು ಷರತ್ತು ಹಾಕಿದ್ದಾರೆ. ಈ ಸೌಲಭ್ಯ ಸವಲತ್ತುಗಳನ್ನು ಏತಕ್ಕಾಗಿ ಕೊಡಬೇಕು ಎನ್ನುವುದು ನಮಗೆ ಅರ್ಥವಾಗುತ್ತಿಲ್ಲ. ಹಾಗೆ ಡಿಮ್ಯಾಂಡು 54ರಲ್ಲಿ ಕರ್ಣಾಟಕ ಕೋಲಪರೇಟೀವ್ ಪಬ್ಲಿಸಿಟಿ ಹೌಸಿಗಾಗಿ ಸುಮಾರು ಒಂಬತ್ತು ಲಕ್ಷದಷ್ಟು ಹಣವನ್ನು ಸಾಲವಾಗಿ ಕೊಡಲಾಗಿದೆ. 18 ಲಕ್ಷ ರೂಗಳ ಮುಂಗಡ ವ್ಯಾಪಾರ ಭರವಸೆ ಕೊಟ್ಟಿದ್ದಾರೆ. ಇದರಲ್ಲಿ ಕೆಲವರು ಕಾಂಗ್ರೆಸ್ಸಿನ ಮುಖಂಡರುಗಳ ಸಂಬಂಧುಗಳು ಇದ್ದಾರೆ ಎಂಬ ಏಕಮಾತ್ರ ಕಾರಣದಿಂದ ಕೊಡಲಾಗಿದೆ. ಆದರೆ ಸರಕಾರ ಸಾಲವನ್ನು ಕೊಡುವಾಗ ಸಾಲಗಾರರಿಗೆ ಒಂದೆ ತೆರನಾದ ಬಡ್ಡಿಯನ್ನು ಹಾಗೂ ಷರತ್ತುಗಳನ್ನು ವಿಧಿಸಿ ಕೊಡಬೇಕು. ಕೆಲವರಿಗೆ ಶೇಕಡಾ ಆರೂಕಾಲರಂತೆ ಬಡ್ಡಿ, ಇನ್ನು ಕೆಲವರಿಗೆ ಶೇಕಡಾ ಏಳುವರೆಯಂತೆ ಬಡ್ಡಿ, ಹಾಗೆ ರಾಜಾಜಿ ನಗರದಲ್ಲಿರುವ ಕೋ-ಆಪರೇಟೀವ್ ಸೊಸೈಟಿಗೆ ಶೇಕಡಾ ಐದರಂತೆ ಬಡ್ಡಿ ಹಾಕಿ ಸಾಲ

ಕೊಟ್ಟಿದ್ದಾರೆ. ಅಂದರೆ ಅವರಿಗೆ ಬೇಕಾದವರಿಗೆ ಹಾಗೂ ಅವರ ಬಂಧುಗಳಿಗೆ ಪಕ್ಷದವರಿಗೆ ಅನುಕೂಲವಾಗಲೆಂದು ಮತ್ತು ಅವರ ಬಂಧುವರ್ಗದವರಿಗೆ ಅನುಕೂಲ ಮಾಡುವ ಸಲುವಾಗಿ ಬಡ್ತಿಯನ್ನೇ ವಿಧಿಸದೆ ಸಾಲ ಕೊಟ್ಟು ಇಂತಹ ಸಪ್ಲಿಮೆಂಟರಿ ಡಿಮ್ಯಾಂಡುಗಳು ಎಂದು ತರುವ ಒಂದು ರೂಢಿ ಮಾಡಿಕೊಂಡಿದ್ದಾರೆ. ಇದೇಕೆ ಮಾಡುತ್ತಾರೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಇಂದು ರಾಜ್ಯದಲ್ಲಿ ಅನೇಕ ಕಡೆಗಳಲ್ಲಿ ಅಭಾವದ ಪರಿಸ್ಥಿತಿ ಬಹಳ ತೀವ್ರವಾಗಿದೆ. ಬಡ್ತಿ ಇಲ್ಲದೆ ಸಾಲ ಕೊಡುವ ಬದಲು ಸಾಕಷ್ಟು ಹಣವನ್ನು ಪರಿಹಾರದ ಕಾಮಗಾರಿಗಳಿಗೆ ಹೆಚ್ಚಾಗಿ ವಿನಿಯೋಗಿಸಿದರೆ ಅದಕ್ಕಾಗಿ ಎಂದು ಈ ಸಪ್ಲಿಮೆಂಟರಿ ಡಿಮ್ಯಾಂಡುಗಳನ್ನು ತಂದಿದ್ದರೆ ತುಂಬಾ ಸಂತೋಷವಾಗುತ್ತಿತ್ತು.

ಪುಟ 6ರಲ್ಲಿ ಚೆಕ್ಸ್‌ಬುಕ್ ಕಮಿಟಿಗಾಗಿ ದೊಡ್ಡದಾಗಿ ಒಂದು ಡೈರೆಕ್ಟೊರೇಟನ್ನೇ ಮಾಡುತ್ತಿದ್ದಾರೆ. ಈ ದಿನ ದೇಶದಲ್ಲಿರುವ ಶಾಲೆಗಳಲ್ಲಿ ರಾಷ್ಟ್ರೀಕರಣವಾಗಿರುವ ಉತ್ತಮ ಪುಸ್ತಕಗಳೇ ಬರುತ್ತಿಲ್ಲ. ಮತ್ತು ವಿದ್ಯಾರ್ಥಿಗಳಿಗೆ ಓದಲು ರಾಷ್ಟ್ರೀಕರಣವಾದ ಪುಸ್ತಕಗಳು ಸಾಕಷ್ಟು ಸಕಾಲದಲ್ಲಿ ಸಿಗುತ್ತಿಲ್ಲ. ಪುಸ್ತಕಗಳನ್ನು ಹೆಚ್ಚು ಹೆಚ್ಚಾಗಿ ಪ್ರಿಂಟು ಮಾಡಿಸುವುದಕ್ಕೆ ಬದಲಾಗಿ ಒಂದು ದೊಡ್ಡ ಡೈರಕ್ಟೊರೇಟನ್ನೇ ಮಾಡಿ ಇದಕ್ಕಾಗಿ ಸುಮಾರು ಎಂಟೂ ಚಿಲ್ಲರೆ ಲಕ್ಷ ರೂಪಾಯಿಗಳನ್ನು ಖರ್ಚು ತೋರಿಸಿದ್ದಾರೆ. ಇದರಲ್ಲಿ ಏನು ಗುಟ್ಟು ಇದೆ ಎಂದರೆ ಜಾಯಿಂಟು ಡೈರೆಕ್ಟರುಗಳು ಹಾಗೂ ಇನ್ನಿತರ ಅಧಿಕಾರಿಗಳು ಬೇಕು ಬೇಕೆಂದು ಬರೀ ಹುದ್ದೆಗಳನ್ನು ನಿರ್ಮಾಣ ಮಾಡುವುದಕ್ಕೆ ಹೊರಟಿದ್ದಾರೆ. ಸ್ವಜನರ ಉಪಯೋಗಕ್ಕಾಗಿ ಹಣಕಾಸಿನ ನಡವಳಿ ಈ ಕಡೆ ಸರಿಯಾಗಿ ಗಮನ ವಹಿಸಿಸಿಲ್ಲ. ಜನಸಾಮಾನ್ಯರಿಗೆ ಅನುಕೂಲವಾಗುವ ರಾಷ್ಟ್ರೀಕರಣ ಮಾಡುವುದರ ಕಡೆಗೆ ಸರಿಯಾದ ಗಮನ ಕೊಡುತ್ತಿಲ್ಲ.

ಜಲವಿವಾದಗಳಿಗೆ ಬೇಕಾದಷ್ಟು ಹಣವನ್ನು ಟ್ರಬ್ಯುನಲ್‌ಗಳಿಗಾಗಿ ಹಾಗೂ ಕಾನ್‌ಫರೆನ್ಸ್‌ಗಳಿಗಾಗಿ ಹೇರಳ ಹಣ ಖರ್ಚುಮಾಡುತ್ತಿದ್ದಾರೆ. ಇದರಲ್ಲಿ ಡಿಮ್ಯಾಂಡು ಹತ್ತರಲ್ಲಿ ಒಂದು ಕಡೆ ಹೀಗೆ ಹೇಳಿದ್ದಾರೆ :

> "A former judge of the Bombay High Court and former Member of the Central Law Commission has been engaged as Special Officer (Legal) in the P. W. D. and Electricity Department on a salary of Rs. 3,500 per month for a period of one year from the date of report to duty. A retired Commissioner of the Indus Water Treaty, New Delhi, has been engaged as a Technical consultant on a retention fee of Rs. 1,500 per mensem plus Rs. 250 per day of actual work, limited to Rs. 6,000 in one Calendar month (The limit of Rs. 6,000 is inclusive of the retention fee of Rs. 1,500 per month)"

ಹೀಗೆ ತಮಗೆ ಬೇಕುಬೇಕಾದವರಿಗೆ ಕೆಲಸಕೊಟ್ಟು ಹಣವನ್ನು ಕೊಡುವುದನ್ನು ನೋಡಿ ನನಗೆ ತುಂಬಾ ವಿಷಾದವಾಗುತ್ತದೆ.

ಸ್ವಾಮಿ, ಈ ಸಪ್ಲಿಮೆಂಟರಿ ಎಸ್ಟಿಮೇಟ್ಸ್‌ನ 9ನೇ ಪುಟ ನೋಡಿ. ಈ ಸಭೆಯನ್ನು ಅಡ್ಡದಾರಿಗೆ ಎಳೆಯುವ ಒಂದು ಪ್ರಯತ್ನ ನಡೆಸಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಅದರಲ್ಲಿರುವ ಪ್ಯಾರಾ ಈ ರೀತಿ ಇದೆ :

> "However, during 1967-68 the Accountant General suggested that the expenditure may be debited to "Pay and Accounts Officer, Suspense (Ministry of Food and Agriculture direct instead of to the State Budget initially). The revised procedure was followed during 1967-68 and 1969 and no provision was made in the State Budget of these years."

The same Accountant General guides us again as follows :

> "The Accountant General has now observed that debiting the expenditure directiy to 'Pay and Accounts Officer, Suspense' will be an irregularity and has suggested the revival of the original procedure."

(ಶ್ರೀ ಎಸ್. ಶಿವಪ್ಪ)

ಒಬ್ಬರೇ ಅಧಿಕಾರಿಗಳು ಒಂದು ಸಮಸ್ಯೆ ಬಗ್ಗೆ ವಿರೋಧಾಭಾಸವುಳ್ಳ ಎರಡು ಅಭಿಪ್ರಾಯಗಳನ್ನು ಕೊಟ್ಟು ಸದಸ್ಯರನ್ನು ಅಡ್ಡದಾರಿಗೆ ಎಳೆಯುತ್ತಾ ಇಲ್ಲ ಎಂದರೆ ಅದರ ಅರ್ಥ ಏನು ! ಕೇಂದ್ರ ಸರ್ಕಾರದ C. & A. G. ಅವರ ಕೈ ಕೆಳಗಿರುವ ಅಕೌಂಟೆಂಟ್ ಜನರಲ್‌ರವರು ಮೊದಲು ತಾವು ಯಾವುದನ್ನು ಸರಿಯಾಗಿದೆ ಎಂದು ಹೇಳಿದರೋ ಅದನ್ನು ಪುನಃ ಇದು ಸರಿಯಲ್ಲ ಎಂದು ಹೇಳಿದ್ದಾರೆ ಅವರು ಪಬ್ಲಿಕ್ ಅಕೌಂಟ್ಸ್ ಕಮಿಟಿಯವರಿಗೆ ಯಾವರೀತಿ ಉತ್ತರ ಕೊಟ್ಟಿದ್ದಾರೋ ಗೊತ್ತಿಲ್ಲ. ಒಟ್ಟಿನಲ್ಲಿ ಈ ರೀತಿ ಆದರೆ ಈ ಸಭೆಯ ಗೌರವ ತಾನೇ ಏನು ಉಳಿಯುತು ! ಒಂದುಸಾರಿ ಖರ್ಚನ್ನು ಮಂಜೂರು ಮಾಡಿದ ಮೇಲೆ ಪುನಃ ಖರ್ಚನ್ನು ಕೇಳುವ ಬದಲು ಒಂದೇ ಸಾರಿ ಎಲ್ಲವನ್ನೂ ಸೇರಿಸಿ ಮಂಜೂರಾತಿಯೆನ್ನು ಕೇಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನೊಂದು ನಮ್ಮ ಸರ್ಕಾರದ ವಿಚಿತ್ರ ಪದ್ಧತಿ ಅದು ಯಾವುದೆಂದರೆ ಪಬ್ಲಿಕ್ ಸೆಕ್ಟಾರ್‌ನಲ್ಲಿ ಇಂಡಸ್ಟ್ರೀಸ್ ನಡೆಸಿದರೆ ನಷ್ಟವಾಗುತ್ತದೆ, ಅದೇ ರೀತಿ ಪ್ರೈವೇಟ್ ಸೆಕ್ಟಾರ್‌ನವರು ಇಂಡಸ್ಟ್ರೀಸ್ ನಡೆಸಿದರೆ ಲಾಭವಾಗುತ್ತದೆ ಎನ್ನುವ ಉದ್ದೇಶ. ಆದರೆ ಪ್ರೈವೇಟ್ ಸೆಕ್ಟಾರ್‌ನಲ್ಲಿ ಖಾಸಗಿಯವರು ಈ ಉದ್ಯಮಗಳಿಗೆ ಎಷ್ಟು ಹಣವನ್ನು ಹಾಕಿದ್ದಾರೆ ಎಂದು ಕೇಳುತ್ತೇನೆ. ನಮ್ಮ ರಾಜ್ಯದ ಕೆಲವೇ ಜನರು ಪ್ರೈವೇಟ್ ಸೆಕ್ಟಾರ್ ಉದ್ಯಮಗಳಲ್ಲಿ ಸರಕಾರದ ಹಣ ಹಾಕಿಸಿ ಲಾಭ ಮಾಡಿಕೊಳ್ಳುತ್ತಿದ್ದಾರೆ.

ಈಗ ಉದಾಹರಣೆಗೆ ಮೈಸೂರು ಗವರ್ನಮೆಂಟ್ ಪೋರ್ಸ್‌ಲೈನ್ ಫ್ಯಾಕ್ಟರಿ ಮತ್ತು ಎನ್. ಜಿ. ಇ. ಎಫ್. ತೆಗೆದುಕೊಳ್ಳೋಣ. ಮೈಸೂರು ಪೋರ್ಸ್‌ಲೈನ್ ಫ್ಯಾಕ್ಟರಿಗೆ 40,00,000 ರೂಪಾಯಿಗಳು ಮತ್ತು ಎನ್. ಜಿ. ಇ. ಎಫ್. ಗೆ 4,80,00,000 ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಿದ್ದಾರೆ. ಅವರ ಎಕ್ಸ್‌ಪ್ಲನೇಟರಿ ನೋಟ್‌ನಲ್ಲಿ ಈ ರೀತಿ ಇದೆ :

> "The Government Procelain Factory was converted into a Joint Stock Company with effect from 1st April 1967. The Purchase consideration in respect of Government Porcelain Factory has been fixed at Rs. 3,31,35,850.62 and in part satisfaction of this consideration the Mysore Porcelains Ltd., has allotted 40,000 Equity Shares of Rs. 100 each valued at Rs. 40,00,000 to the Government. The balance of Rs. 2,91,35,850.62 is treated as loan repayable by the Company."

ಇದರಲ್ಲಿ ಈಕ್ವಿಟಿ ಷೇರ್ಸ್ ಸರಕಾರದ್ದು ಇದೆ. ಹೆನರಿಗೆ ಮಾತ್ರ ಖಾಸಗಿಯವರದ್ದು ಹಣ ಸರಕಾರದ್ದು ಮತ್ತು ಮುಂದೆ ಬರುವ ಲಾಭವೂ ಖಾಸಗಿಯವರಿಗೆ ಹೋಗಬೇಕು. ಈ ಹಣ ವೆಲ್ಲಾ ಅವರಿಗೆ ಹೋಗಬೇಕು, ಕೈಯಿಂದ ಕೊಟ್ಟಿರತಕ್ಕಂಥ ಹಣಕ್ಕೆ ಲಾಭವಿಲ್ಲದೆ ನಷ್ಟಗಳಿಗೆ ಮಾತ್ರ ಸರ್ಕಾರ ಗುರಿಯಾಗಬೇಕು. ಇದು ಸಮಾಜವಾದ ಗುರಿಯುಳ್ಳ ಸರಕಾರ. ಇನ್ನು ಎನ್. ಜಿ. ಇ. ಎಫ್. ಫ್ಯಾಕ್ಟರಿ ತೆಗೆದುಕೊಂಡರೆ ಅವರ ಎಕ್ಸ್‌ಪ್ಲನೇಟರಿ ನೋಟ್‌ನಲ್ಲಿ ಈ ರೀತಿ ಇದೆ :

> "The New Government Electric Factory, which was a Government Commercial undertaking was converted into a Joint stock Company in April 1965. The total assets as on 30th September 1965, were valued at Rs. 8,55,99,677. 05 on the basis of the Balance Sheet audited by the Account General (Commercial Audit Wing)..... "
>
> "The Company has already allotted 3,20,000 shares of Rs. 100 each, valued at Rs. 3,20,00,000 to Government. The Company has now come up with the proposal of offering additional Equity Capital of 1,60,000 Shares of Rs. 100 each, valued at Rs. 1,60,00,000. Thus the total Share Capital in the NGEF Ltd., would be Rs. 4,80,00,000."

ಎಲ್ಲವೂ ನ್ಯಯಂಬದ್ಧವಾಗಿದೆ. ಅರ್ಥಪೂರ್ಣ ನ್ಯಜನಪಕ್ಷಪಾತ ಇದಕ್ಕೂ ಕೂಡ ನಮ್ಮ ಕೈಯಿಂದ ಕೊಟ್ಟಂಥ ಹಣಕ್ಕೆ ಲಾಭವಿಲ್ಲ. ಈ ದುಂದು ಸಾರುಬಾರಿನಿಂದ ರಾಜ್ಯದ ಹಣಕಾಸಿನ ಪರಿಸ್ಥಿತಿ ವಿಷಮವಾಗಿದೆ. ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದಹಾಗೆ, ರಾಜ್ಯದಲ್ಲಿರುವ ಹಣಕಾಸಿನ ನ್ಯೆಜ ಪರಿಸ್ಥಿತಿಯನ್ನು ಫೈನಾನ್ಸ್ ಕಮೀಷನ್‌ನವರಿಗೆ ತಿಳಿಸಿ ನಮ್ಮ ರಾಜ್ಯಕ್ಕೂ ಹೆಚ್ಚು ಹಣ ಕೊಡುವ ಹಾಗೆ ಅವಕಾಶ ಕಲ್ಪಿಸಿಕೊಳ್ಳಬೇಕೆಂದು ನಮ್ಮ ಹಣಕಾಸಿನ ಮಂತ್ರಿಗಳು ಪ್ರಾರ್ಥನೆ ಮಾಡಿ ಎಂದು ನನ್ನ ಮಾತನ್ನು ಮುಗಿಸುತ್ತೇನೆ. ಮತ್ತು ನಮಯ ದೊರಕಿಸಿ ಕೊಟ್ಟ ಅಧ್ಯಕ್ಷರಿಗೆ ವಂದಿಸುತ್ತೇನೆ.

ಶ್ರೀ ಜಿ. ದುಗ್ಗಪ್ಪ (ಭರ್ಮಸಾಗರ).—ಸ್ವಾಮಿ, ಈ ನಭೆಯ ಮುಂದೆ ಮಂಡಿಸಿರತಕ್ಕಂಥ ಬೇಡಿಕೆಗಳನ್ನು ವಿರೋಧಿಸುತ್ತೇನೆ. ಇದರಲ್ಲಿ ಕೆಲವು ವಿಚಾರಗಳನ್ನು ಹೇಳಬೇಕಾಗಿದೆ. ಸರ್ಕಾರದವರು ಈ ಬೇಡಿಕೆಗಳನ್ನು ಮಂಡಿಸುವಾಗ ಯಾವ ಒಂದು ನೀತಿಯನ್ನೂ ಅನುಸರಿಸುತ್ತಾ ಇಲ್ಲ. ನಮ್ಮ ಹಣಕಾಸಿನ ಸಚಿವರನ್ನು ಹಿಂದೆ ಒಂದು ಸಾರಿ ಬಹಳ ಪೆಟ್ಟಿಕೊಂಡು ಈ ಸಭೆಯಲ್ಲಿ ಅವರನ್ನು ಉತ್ಸಾಹಶಾಲಿಗಳು ಎಂದು ಹೇಳಿದೆ. ಈಗ ಇವೆರ್ಲಾ ನೋಡಿದಾಗ ನಮ್ಮ ಅಭಿಪ್ರಾಯವನ್ನು ಕೂಡ ಬದಲಾಯಿಸಬೇಕು ಎಂದು ಹೇಳಬೇಕಾಗಿದೆ. ಇದಕ್ಕೆ ಕಾರಣ ನ್ಯೂ ಸರ್ವಿಸಸ್ ಎಂದು ಏನು ಹೇಳುತ್ತೀರಿ ಅದನ್ನು ಈಗ ಏತಕ್ಕಾಗಿ ಖರ್ಚು ಮಾಡುತ್ತೀರಿ ಎಂದು ಕೇಳಬೇಕಾಗಿದೆ. ಈಗ ಇದನ್ನು ತಂದಿರುವ ಉದ್ದೇಶ ಈ ಬಡ್ಜೆಟ್ಟಿನಲ್ಲಿ ಇಲ್ಲದೇ ಇರತಕ್ಕಂಥ ವಿಚಾರಗಳನ್ನು ಇಲ್ಲಿ ತಂದು, ನಿಮ್ಮ ದೃಷ್ಟಿಯಲ್ಲಿ ಯಾವುದಕ್ಕೆ ಅವಶ್ಯಕವಾಗಿ ಖರ್ಚು ಮಾಡಬೇಕೋ ಅದಕ್ಕೆ ತಂದಿದ್ದೀರಿ. ಈ ಬಡ್ಜೆಟ್ಟಿನಲ್ಲಿರುವ ಒಟ್ಟು ಐಟಂಗಳು ಎಷ್ಟು? ಈ ಬಡ್ಜೆಟ್ಟಿನಲ್ಲಿರತಕ್ಕಂಥ ಬಹುಮುಖ್ಯವಾದ ಬೇಡಿಕೆಗೆ ಈ ಹಣ ಖರ್ಚು ಮಾಡುತ್ತೀರಾ? ಈ ದುಡ್ಡನ್ನು ಇದಕ್ಕೆ ಖರ್ಚು ಮಾಡದೇ ಅವರ ಬೆಂಬಲಿಗರು ಯಾರು ಇದ್ದಾರೋ, ಯಾರು ಒತ್ತಾಯ ಹಾಕುತ್ತಿದ್ದಾರೋ ಅವರಿಗೆ ಸಹಾಯ ಮಾಡುವುದಕ್ಕಾಗಿ ಆವಾಗಿನ ಬಡ್ಜೆಟ್ಟಿನಲ್ಲಿ ಸೇರಿಸದೇ ಇದ್ದರೆ ಈಗ ಇದನ್ನು ತಂದು, ಇದು ಬಹಳ ಅವಶ್ಯ, ಇದಕ್ಕೆ ತಮ್ಮ ಒಪ್ಪಿಗೆ ಕೊಡಿರಿ ಎಂದು ಈಗ ನಮ್ಮನ್ನು ಕೇಳುತ್ತಿದ್ದೀರಿ.

ಉದಾಹರಣೆ ಚಿತ್ರದುರ್ಗ ಜಿಲ್ಲೆಯಲ್ಲಿ ಭರ್ಮಸಾಗರಕ್ಕೆ ಸೇರಿದ ಹಾಗೆ ಕೊಳಹಾರ್ ವಿಲೇಜ್ ಇದೆ, ಅಲ್ಲಿ ಒಂದು ಕೆರೆಯನ್ನು ಕಟ್ಟಬೇಕೆಂದು ಇಲಾಖಾಧಿಕಾರಿಗಳು ಒಂದು ಎಸ್ಟಿಮೇಟನ್ನು ಮಾಡಿ ಸೂಪರಿಂಟೆಂಡೆಂಟ್ ಇಂಜಿನೀಯರ್, ಚೀಫ್ ಇಂಜನೀಯರ್ ಬಂದು ನ್ಯಳ ನೋಡಿ ಅದಕ್ಕೆ ಟೆಂಡರ್ ಕರೆದು ಈ ಕೆಲಸ ಮುಂದುವರಿಸಬೇಕು ಎಂದು ಹೇಳಿದರು. ಇದು ಒಂದು ಲಕ್ಷ ರೂಪಾಯಿನ ಕೆಲಸ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಅಧ್ಯಕ್ಷರು ಚಿತ್ರದುರ್ಗದಿಂದ ದಾವಣಗೆರೆಗೆ ಹೋಗುತ್ತಿದ್ದಾಗ ದಾರಿಮಧ್ಯದಲ್ಲಿ ಸ್ಥಳೀಯರಾದ ಕೆಲವರು ಈ ಕೆಲಸವನ್ನು ನಿಲ್ಲಿಸಬೇಕೆಂದು ಅರ್ಜಿ ಕೊಟ್ಟರು. ಮುಖ್ಯಮಂತ್ರಿಗಳೂ, ಕಾಂಗ್ರೆಸ್ ಅಧ್ಯಕ್ಷರೂ ಅವರು ಕೊಟ್ಟ ಅರ್ಜಿಯನ್ನು ನೋಡಲಿಲ್ಲ. ಅವರು ಮುಖ ನೋಡಿದರು, ಕೂಡಲೇ ಅವರು ಸ್ಟೇ ಆರ್ಡರ್ ಕೊಡಬೇಕು ಸ್ವಾಮಿ, ಎಂದರು, ತಕ್ಷಣ ಸ್ಟೇ ಆರ್ಡರ್ ಕೊಟ್ಟರು. ಈವೊತ್ತಿನವರೆಗೂ ಅಂದರೆ ನಿನ್ನೆಯವರೆಗೂ ಆ ಕೆಲಸ ಆಗಿಲ್ಲ. ನಿನ್ನೆ ದಿವಸ ಸೆಕ್ರೆಟರಿಯವರ ಹತ್ತಿರ ಮಾತನಾಡಿದೆ, ಡೆಪ್ಯೂಟಿ ಸೆಕ್ರೆಟರಿಯವರ ಮತ್ತು ಚೀಫ್ ಇಂಜಿನೀಯರ್ ಕೂಡ ಮಾತನಾಡಿದೆ. ಆ ಅಧಿಕಾರಿಗಳು ಏನು ಹೇಳುತ್ತಾರೆ ಎಂದರೆ ಅದನ್ನು ಹಣಕಾಸಿನ ಸಚಿವರನ್ನು ಕೇಳಬೇಕು ಎಂದು ಹೇಳುತ್ತಾರೆ. ಇದು ಯಾರ ತಪ್ಪು ಎಂಬುದನ್ನು ನಮಗೆ ಹೇಳಲು ಸಾಧ್ಯವಿಲ್ಲ. ನಿಜ ಸಂಗತಿಯನ್ನು ಅನಿವಾರ್ಯವಾಗಿ ತಮಗೆ ಇಲ್ಲಿ ಹೇಳಿದ್ದೇನೆ. ಏನು ಇನಫರ್ಮೇಷನ್ ಬೇಕೋ ಅವೆಲ್ಲವನ್ನೂ ಕೊಟ್ಟಿದ್ದೇನೆ. ಇದನ್ನು ಸರ್ಕಾರದವರು ತೀರ್ಮಾನ ತೆಗೆದುಕೊಳ್ಳಬೇಕೋ ಅಥವಾ ಇಲಾಖಾಧಿಕಾರಿಗಳು ತೀರ್ಮಾನ ತೆಗೆದುಕೊಳ್ಳಬೇಕೋ, ಯಾರು ತೆಗೆದುಕೊಳ್ಳಬೇಕೋ ಗೊತ್ತಿಲ್ಲ. ಚೀಫ್ ಇಂಜಿನಿಯರ್, ಸೂಪರಿಂಟೆಂಡೆಂಟ್ ಇಂಜಿನೀಯರ್, ಎಕ್ಸಿಕ್ಯೂಟೀವ್ ಇಂಜನಿಯರ್ ಇವರೆಲ್ಲಾ ಪ್ರಪೋಸಲ್ ಕಳುಹಿಸಿದ್ದಾರೆ. ಇನ್ನು ಉಳಿದಿರುವುದು ಕೆರೆ ಕಟ್ಟಬೇಕಾದ್ದು. ಇದಕ್ಕೆ ಟೆಂಡರ್ ಕರೆಯಬೇಕು. ಯಾವ ಕೆಲಸವನ್ನೇ ಆಗಲಿ ಇಂಥಾದ್ದನ್ನು ಮಾಡಬೇಕು ಎಂದು ನಿಮಗೆ ಬೇಕಾದವರು ಬಂದು ಹೇಳಿದರೆ ಅಂಥ ಕೆಲಸವನ್ನು ಮಾಡುತ್ತೀರಿ. ಅದೇರೀತಿ ಇದನ್ನು ಮಾಡಬೇಡಿ ನಿಲ್ಲಿಸಿ ಎಂದು ಹೇಳಿದರೆ ಆ ಕೆಲಸವನ್ನು ನಿಲ್ಲಿಸುತ್ತೀರಿ. ಇದನ್ನೆರಾ ಅನಿವಾರ್ಯವಾಗಿ ಹೇಳಬೇಕಾಗುತ್ತದೆ.

ಇನ್ನು ಯಾವ ಸೊಸೈಟಿಯೇ ಆಗಲಿ 20—25 ವರ್ಷಗಳಿಂದಲೂ ತನ್ನ ಕಾರ್ಯಚಟುವಟಿಕೆಗಳನ್ನು ಬಹಳ ಚೆನ್ನಾಗಿ ನಡೆಸಿಕೊಂಡು ಬಂದರೆ ಅಂಥ ಸೊಸೈಟಿಗಳಿಗೆ ಸಬ್ಸಿಡಿ ಕೊಡಬೇಕು ಎಂದು ಇದೆ. ಈ ರೀತಿ ಚೆನ್ನಾಗಿ ನಡೆಸಿಕೊಂಡು ಬಂದಿರುವ ಸೊಸೈಟಿಗಳು ಅನೇಕ ಇವೆ. ಅದರಲ್ಲಿ ಕೆಲವು ಸೊಸೈಟಿಗಳಿಗೆ ಸಬ್ಸಿಡಿಯನ್ನು ಕೊಡುತ್ತೀರಿ, ಕೆಲವು ಸೊಸೈಟಿಗಳಿಗೆ ಕೊಡುತ್ತಾ ಇಲ್ಲ. ಇದರಲ್ಲಿ ನ್ಯಾಯವಿದೆಯೇ ಎಂದು ನಾನು ಕೇಳುತ್ತೇನೆ.

(ಶ್ರೀ ಜಿ. ದುಗ್ಗಪ್ಪ)

ತಾಲ್ಲೂಕು ಮಾರ್ಕೆಟಿಂಗ್ ಸಹಕಾರ ಸಂಘಗಳಿಗೆ ಮ್ಯಾನೇಜೀರಿಯಲ್ ಕಾಸ್ಟ್ ಎಂದು 8 ಸಾವಿರ ರೂಪಾಯಿ ಕೊಡುತ್ತಿದ್ದಾರೆ. ಇದನ್ನು ಯಾರ ಒತ್ತಾಯಕ್ಕಾಗಿ ಕೊಟ್ಟರು, ಏಕೆ ಕೊಡಬೇಕಾಗಿತ್ತು? ಇಂಥದ್ದು ಬೇರೆ ಎಲ್ಲಿಯಾದರೂ ಉಂಟೇ ! ಹುಣಸೆಹಣ್ಣನ್ನು ಹೊಳೆಯಲ್ಲಿ ತೊಳೆದರು ಎನ್ನುವಂತಾಗಿದೆ. ಖರ್ಚು ಮಾಡುವುದನ್ನು ನ್ಯಾಯವಾಗಿ ಖರ್ಚುಮಾಡಿ. ಆದರೆ ತಾಲ್ಲೂಕು ಅಗ್ರಿಕಲ್ಚರರ್ ಮಾರ್ಕೆಟಿಂಗ್ ಸೊಸೈಟಿಗಳಿಗೆ 8 ಸಾವಿರ ರೂಪಾಯಿ ಕೊಟ್ಟಿರುವುದು ನಾಚಿಕೆಗೇಡಿನ ವಿಷಯವಾಗಿದೆ. ಈ ರೀತಿ ಹಣವನ್ನು ಕೊಡುವುದಕ್ಕೆ ಅಂಥ ಬಲವತ್ತರವಾದ ಕಾರಣವೇನಿತ್ತು ಎಂದು ಕೇಳುತ್ತೇನೆ.

ಬಜೆಟೆಡ್ ಕೆಲಸವನ್ನು ಮಾಡದೇ ಇರುವುದು ಸರ್ಕಾರದ ಕರ್ತವ್ಯರೋಪವಾಗಿದೆ. ಯಾವುದಾದರೂ ಮುಖ್ಯವಾದ ಕೆಲಸವನ್ನು ಮಾಡಿದ್ದರೆ ಹೇಳಲಿ, ಅಂಥದಕ್ಕೆ ನಾವು ವಿರೋಧ ಮಾಡುವುದಿಲ್ಲ. ಮಾಡಿದ್ದು ಸರಿಯಾಗಿದೆ ಎಂದು ಹೇಳುತ್ತೇವೆ.

ಕೋಟಿಗಟ್ಟಲೆ ರೂಪಾಯಿಗಳನ್ನು ಕೋ-ಆಪರೇಟಿವ್ ಸೆಕ್ಟಾರಿನಲ್ಲಿ ಗ್ರಾಂಟ್ ರೂಪದಲ್ಲಿ, ಸಬ್ಸಿಡಿ ರೂಪದಲ್ಲಿ ಕೊಡುತ್ತಿದ್ದಾರೆ. 1968ನೇ ಇಸವಿ ಮಾರ್ಚ್ ತಿಂಗಳಿನಲ್ಲಿ ಒಂದೂವರೆ ಲಕ್ಷ ರೂಪಾಯಿಗಳನ್ನು ಹರಿಜನ ಗಿರಿಜನ ಫಾರ್ಮಿಂಗ್ ಕೋ-ಆಪರೇಟಿವ್ ಸೊಸೈಟಿಗೆ ಸಮಾಜ ಕಲ್ಯಾಣ ಇಲಾಖೆಯ ಮುಖಾಂತರ ಗ್ರಾಂಟ್ ರೂಪದಲ್ಲಿ ಕೊಡಲು ಸರ್ಕಾರದವರು ಆರ್ಡರ್ ಮಾಡಿದರು. ಆದರೆ ಹಣವನ್ನು ಕೊಡುವಾಗ ಸಹಕಾರ ಇಲಾಖೆಯ ಮೂಲಕ ಕೊಡುವಂತೆ ಮಾಡಿದರು. ಇದರ ಬಗ್ಗೆ ಒಂದು ಆರ್ಡರ್ ಹೊರಡಿಸಿ ವರ್ಷದ ಕೊನೇ ಘಳಿಗೆಯಲ್ಲಿ ಹಣವನ್ನು ಕೊಡುತ್ತಿರುವುದರಿಂದ ಅದನ್ನು ಡ್ರಾ ಮಾಡಿ, ಡಿಸ್ಟ್ರಿಕ್ಟ್ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ್‌ಗಳಲ್ಲಿ ಇಟ್ಟು ತದನಂತರ ಕೊಡಿ ಎಂದು ಹೇಳಿದರು. ಶಿವಮೊಗ್ಗ ಜಿಲ್ಲೆಯ 5 ಸಹಕಾರ ಸಂಸ್ಥೆಗಳಿಗೆ ಹಣವನ್ನು ಕೊಟ್ಟರು. ಆದರೆ ಆ ಸೊಸೈಟಿಗಳ ಹೆಸರಿನಲ್ಲಿ ಡ್ರಾ ಮಾಡಿ ಬ್ಯಾಂಕಿನಲ್ಲಿ ಇಟ್ಟುದನ್ನು ಸಹಕಾರ ಇಲಾಖೆಯ ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರು ಈ ಹೊತ್ತಿನವರೆಗೂ ಡ್ರಾ ಮಾಡಿಲ್ಲ. ಏಕೆ ಡ್ರಾ ಮಾಡಿಲ್ಲವೆಂದರೆ ಎಲ್ಲ ಸೊಸೈಟಿಗಳೂ ಡಿಫಾರ್ಮ್ ಆಗಿವೆ, ದುಡ್ಡು ಕೊಟ್ಟಿಲ್ಲ ಎಂದು ಹೇಳುತ್ತಾರೆ. ಸರ್ಕಾರದ ಪಕ್ಷಕ್ಕೆ ಬೆಂಬಲ ಕೊಟ್ಟ ಹರಿಜನ ಗಿರಿಜನ ಪ್ರತಿನಿಧಿಗಳು ಎಷ್ಟು ಜನ ಸರ್ಕಾರದ ಗಮನಕ್ಕೆ ಇಂಥ ವಿಷಯಗಳನ್ನು ತಂದಿದ್ದಾರೆ? ನಾನು ಯಾರನ್ನೂ ವೈಯಕ್ತಿಕವಾಗಿ ದೂಷಣೆ ಮಾಡುತ್ತಿಲ್ಲ. ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ ಮಾನ್ಯ ಮಂತ್ರಿಗಳು ಇದನ್ನು ಸ್ವಲ್ಪ ಯೋಚನೆ ಮಾಡಿ, ಇದಕ್ಕೆ ಯಾರು ಜವಾಬ್ದಾರರು ಎಂಬುದನ್ನು ನೋಡಬೇಕು. ಸರ್ಕಾರದಿಂದ ಕೊಟ್ಟಿರುವ ದುಡ್ಡು ಸದುಪಯೋಗವಾಗಬೇಕು, ಸಕಾಲದಲ್ಲಿ ಉಪಯೋಗವಾಗಬೇಕು. ಚನ್ನಗಿರಿ ತಾಲ್ಲೂಕಿನಿಂದ 8 ಜನರು ಮಲಗುವುದಕ್ಕೆ ಜಾಗವಿಲ್ಲ ಎಂದು ಬಂದು ನನ್ನ ರೂಮಿನಲ್ಲಿ ಮಲಗಿದ್ದರು. 1968ನೇ ಇಸವಿಯಲ್ಲಿ ಐದು ಸೊಸೈಟಿಗಳಿಗೆ ದುಡ್ಡು ಕೊಟ್ಟರೂ ಇದುವರೆಗೂ ಅವರಿಗೆ ಸೇರಿಲ್ಲ. ಸಹಕಾರ ಇಲಾಖೆಯ ರಿಜಿಸ್ಟ್ರಾರ್ ಅವರು ಈಗ ರಾಜ್ಯದಲ್ಲಿಲ್ಲ, ಡೆಪ್ಯುಟಿ ರಿಜಿಸ್ಟ್ರಾರ್ ಮತ್ತು ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರನ್ನು ಸರ್ಕಾರದವರು ಕರೆದು ಕೇಳಬಹುದು; ಏಕೆ ಇನ್ನೂ ದುಡ್ಡು ಕೊಟ್ಟಿಲ್ಲ ಎಂದು. ಆದಳಿತ ಪಕ್ಷದವರಿಗೆ ಯಾರಲ್ಲಿ ಅನಕ್ತಿ ಇದೆಯೋ, ಅಂಥ ಕಡೆ ಕೆಲಸಗಳನ್ನು ಮಾಡುತ್ತಾರೆ. ರಾಜ್ಯದ ಸಾಮಾನ್ಯ ಅಭಿವೃದ್ಧಿಯ ವಿಚಾರದಲ್ಲಿ ಏನೂ ಅನಕ್ತಿ ಇಲ್ಲ. ಎಲ್ಲಿಯವರೆಗೂ ಈ ರೀತಿ ನಡೆಯುತ್ತಿದೆ ಎಂದರೆ, ನನ್ನಂಥವನಿಗೂ ಎಂದರೆ ಸಾಮಾನ್ಯವಾಗಿ ರಾಜ್ಯ ಒಂದಾಗಬೇಕು, ದೊಡ್ಡದಾಗಬೇಕು ಎನ್ನುವಾಗ ಸ್ವಲ್ಪ ಪ್ರಬಲವಾಗಿ ಆ ಅಭಿಪ್ರಾಯಕ್ಕೆ ತಾತ್ವಿಕವಾಗಿ ಮನ್ನಣೆಯನ್ನು ಇತ್ತು ಬೆಂಬಲ ಕೊಟ್ಟವರ ಪೈಕಿ ನಾನೂ ಒಬ್ಬ. ಈಗ ಇವರ ತಾರತಮ್ಯ,ಇವರ ಭಾವನೆಗಳು, ರೀತಿನೀತಿಗಳು, ಹಣವನ್ನು ಖರ್ಚು ಮಾಡತಕ್ಕ ವಿಧಾನ, ಮಾಡಬೇಕಾದುದನ್ನು ಬಿಟ್ಟು ಯಾರದೋ ಒತ್ತಡಕ್ಕೆ ಕಟ್ಟುಬಿದ್ದು ಹೆಚ್ಚಾಗಿ ಖರ್ಚು ಮಾಡುವುದು ಈ ರೀತಿಯಾಗಿ ಮಾಡಿ ಹೆಚ್ಚುವರಿ ಖರ್ಚನ್ನು ಒಪ್ಪಿರಿ ಎಂದು ಕೇಳತಕ್ಕ ಸರ್ಕಾರದ ದೌರ್ಬಲ್ಯದ ನೀತಿಯಿಂದ ಮುಂದೆ ಏನಾಗುತ್ತದೆ ಎಂದರೆ ಬಹು ಪ್ರಾಮುಖ್ಯ ಜನರಲ್ಲಿ ಸಹ ಒಂದು ಬೇಧ ಭಾವನೆ ಬೆಳೆದುಕೊಂಡು ಬರುವುದಕ್ಕೆ ಅವಕಾಶವಾಗುತ್ತದೆ. This feeling is growing very rapidly among the people especially among the people of the old Mysore area. I am afraid it may reach climax. I do not know what will happen then. It is not proper on your part and you should amend it. They could have included some of these items in the Budget. They have avoided it and now they have come with supplementary demands. They are not doing justice to the people of the State.

†ಶ್ರೀ ಬಿ. ಎರ್. ನಾರಾಯಣಸ್ವಾಮಿ (ಶ್ರೀನಿವಾಸಪುರ).—ನನ್ಮಾನ್ಯ ಅಧ್ಯಕ್ಷರೇ, ಸರ್ಕಾರದ ಆಡಳಿತದಲ್ಲಿ ಎಷ್ಟೇ ಎಚ್ಚರಿಕೆಯಿಂದ ಆಯವ್ಯಯನ್ನು ಪಟ್ಟಿಯನ್ನು ಮಂಡಿಸಿದರೂ ಸಹ ಅನಿರೀಕ್ಷಿತವಾಗಿ ಮತ್ತು ಸಂಭವನೀಯವಾಗಿ ಪ್ರಾಪ್ತವಾಗತಕ್ಕ ಖರ್ಚಿಗೆ ಹೆಚ್ಚುವರಿ ಬೇಡಿಕೆಗಳನ್ನು ಮಂಡಿಸತಕ್ಕುದು ಸಹಜ. ಆದರೆ ಈಗ ನಮ್ಮ ಮುಂದೆ ಬರುತ್ತಿರುವ ಹೆಚ್ಚುವರಿ ಬೇಡಿಕೆಗಳನ್ನು ನೋಡಿದರೆ ನನಗೆ ಬಹಳ ನಿರಾಸೆಯಾಗುತ್ತಿದೆ.

ಸ್ವಾಮಿ, ದೇಶದ ಇತಿಹಾಸದಲ್ಲಿ ಅಭಾವ, ಕ್ಷಾಮ, ಪರಿಹಾರ ಎನ್ನತಕ್ಕ ಕೂಗು ಇಲ್ಲದ ಅಧಿವೇಶನವಿಲ್ಲ ಎನ್ನುವುದನ್ನು ಎಲ್ಲರೂ ಒಪ್ಪತಕ್ಕ ಮಾತು. ಪದೇ ಪದೇ ಈ ವಿಷಯ ಸರ್ಕಾರದ ಗಮನಕ್ಕೆ ಬರುತ್ತಿದ್ದರೂ ಸಹ ಎಷ್ಟೋ ಬಾಬುಗಳಿಗಾಗಿ, ಅದರಲ್ಲಿಯೂ ಕೆಲಸಕ್ಕೆ ಬರತಕ್ಕುದು, ಪ್ರಮೇಯವಿರತಕ್ಕುದು ಎಲ್ಲವೂ ಇಲ್ಲ, ಹಣವನ್ನು ಸೇರಿಸಿ ಕೋಟ್ಯಂತರ ರೂಪಾಯಿಗಳ ಹೆಚ್ಚುವರಿ ಬೇಡಿಕೆಯನ್ನು ನಮ್ಮ ಮುಂದೆ ಇಟ್ಟಿರತಕ್ಕ ಸರ್ಕಾರ ಅಭಾವ ಪರಿಹಾರಕ್ಕಾಗಿ ಶಾಶ್ವತವಾಗಿ ಏನಾದರೂ ಕಾರ್ಯಕ್ರಮವನ್ನು ತೆಗೆದುಕೊಳ್ಳೋಣ ಎನ್ನುವ ನದುದ್ದೇಶದಿಂದ ಯಾವ ಬೇಡಿಕೆಯನ್ನೂ ನಮ್ಮ ಮುಂದೆ ಇಟ್ಟಿಲ್ಲ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಈ ರೋದನ ಹೊಸದೇನೂ ಅಲ್ಲ. ಪ್ರತಿಯೊಂದು ಅಧಿವೇಶನದಲ್ಲಿಯೂ ಬರುತ್ತಿದೆ, ಸರ್ಕಾರದವರು ನಮಗೆ ಭರವಸೆಯನ್ನು ಕೊಡುತ್ತಿದ್ದಾರೆ, ಒಂದು ಸಲ ಶ್ರೀಮಾನ್ ನಿಜಲಿಂಗಪ್ಪನವರು ಇರುವಾಗ ಒಂದು ಕೋಟಿ ರೂಪಾಯಿಯ ದೊಡ್ಡ ಯೋಜನೆಯನ್ನು ಕೇಂದ್ರಕ್ಕೆ ಕಳುಹಿಸಿದ್ದೇವೆ ಎಂದು ಹೇಳಿದ್ದರು, ಶ್ರೀಮಾನ್ ರಾಚಯ್ಯನವರೂ ಅದೇ ರೀತಿ ಹೇಳಿದ್ದರು. ಸರ್ಕಾರದಿಂದ ಕಳಿಸಿರುವ ಯೋಜನೆಗಳು ಕೇಂದ್ರದಿಂದ ಬರುತ್ತವೆ ಎಂದು ಚಂದ್ರನ ಕಡೆಗೂ ತೋರಿಸಿದರು. ನಾವು ಚಂದ್ರನಲ್ಲಿಗೆ ಹೋಗಲಲ್ಲ, ಅಮೆರಿಕಾ ದೇಶದವರು ಹೋಗಿ ಬಂದೂ ಆಯಿತು. ದಲಿತ ಜನಾಂಗದವರ ಆರ್ಥಿಕ ಮಟ್ಟ ಬಹಳ ಕೆಳಮಟ್ಟದಲ್ಲಿರುವಾಗ ದೇಶದಲ್ಲಿ ಶ್ರೀಮಂತರ ಮನೋಭಾವ ಹೇಗಿದೆಯೆಂದರೆ ಬಡವರು ಬಡವರಾಗೇ ಇರಬೇಕು, ಶ್ರೀಮಂತರು ಮತ್ತೂ ಶ್ರೀಮಂತರಾಗಬೇಕು ಎಂಬುದು. ಮತ್ತು, ಅವರು ಅದಕ್ಕೆ ತಕ್ಕಂತೆ ವರ್ತಿಸುತ್ತಿದ್ದಾರೆ. ಬಡವರು ಶ್ರೀಮಂತರಾದರೆ ಶ್ರೀಮಂತರಿಗೆ ಮರ್ಯಾದೆ ಕಡಮೆಯಾಗುತ್ತದೆ ಎಂಬ ಭಾವನೆ ಇದೆ. ಸಮತಾವಾದ ಸಮಾಜ ರಚನೆಯಾಗಬೇಕು ಎಂದು ಹೇಳುತ್ತಿರುವಾಗ ಮಹಾತ್ಮ ಗಾಂಧಿಯವರು ಮತ್ತು ಪಂಡಿತ ಜವಾಹರಲಾಲ್ ನೆಹರೂರವರು ಸಾಮಾನ್ಯ ಜನತೆಗೆ ಅನುಕೂಲವಾಗಬೇಕು, ಅವರ ಮೇಲ್ಮೆಗಾಗಿ ದುಡಿಯಬೇಕು ಎಂದು ಹೇಳುತ್ತಿರುವಾಗ ಸ್ವಾತಂತ್ರ್ಯ ಬಂದು 22 ವರ್ಷಗಳಾದರೂ ಬಡವ ಇನ್ನಷ್ಟು ಬಡವನೇ ಆಗುತ್ತಿದ್ದಾನೆ. ಕೆಲವರು ಪ್ರಿವಿಲೆಜ್ಡ್ ಕ್ಲಾಸಿನಲ್ಲಿದ್ದಾರೆ, ಅವರು ಮಿತಿಮೀರಿ ಶ್ರೀಮಂತಿಕೆಯ ಸುಖವನ್ನನುಭವಿಸುತ್ತಿದ್ದಾರೆ. ಸರಕಾರದವರು ತಮ್ಮ ಸುತ್ತಮುತ್ತಲಿರುವ ಜನರನ್ನು ನೋಡಿ ಸಂತೋಷಪಟ್ಟರೆ ಸಾಲದು, ಬಡವರ ಕಡೆ ಗಮನಹರಿಸಬೇಕು, ಅದರಲ್ಲೂ ಪ್ರಕೃತಿಯ ವಿಕೋಪದಿಂದ ನೊಂದಿರುವ ಜನರ ಕಡೆಗೆ ಹೆಚ್ಚು ಲಕ್ಷ್ಯ ಕೊಡಬೇಕು ಎಂದು ಪದೇ ಪದೇ ಹೇಳುತ್ತಿದ್ದೇವೆ. ಬಡತನವೆಂಬುದು ಯಾವ ಒಂದು ಕೋಮಿಗಾಗಲೀ, ಪಂಗಡಕ್ಕಾಗಲೀ ಮೀಸಲಾಗಿಲ್ಲ. ಇಂದು ಎಲ್ಲಾ ಕೋಮುಗಳಲ್ಲೂ ಬಡವರಿದ್ದಾರೆ, ಬ್ರಾಹ್ಮಣರು, ಲಿಂಗಾಯಿತರು, ಒಕ್ಕಲಿಗರು ಮುಂತಾದ ಎಲ್ಲಾ ಕೋಮುಗಳವರಲ್ಲೂ ಬಡವರಿದ್ದಾರೆ. ಸರ್ಕಾರಕ್ಕೆ ಅವರ ಬಗ್ಗೆ ಏನೂ ಕನಿಕರವಿಲ್ಲ. ಆ ವಿಚಾರದಲ್ಲಿ ನೂಕ್ತವಾದ ಕಾರ್ಯಕ್ರಮ ಕೈಕೊಳ್ಳಲು ಸರ್ಕಾರಕ್ಕೆ ಮನಸ್ಸಿಲ್ಲವೋ ಅಥವ ಶಕ್ತಿಯಿಲ್ಲವೋ ತಿಳಿಯದು. ಇದು ಅರ್ಥವಾಗುವುದಿಲ್ಲ. ಈ ಸಂಬಂಧದಲ್ಲಿ ಮಾಡಬೇಕಾದ ಕೆಲಸ ಒಂದು ದಿವಸ ಅಥವ ಹತ್ತು ವರ್ಷಗಳಲ್ಲಿ ಪೂರ್ಣವಾಗುವುದಿಲ್ಲ, ಇದಕ್ಕೆ ದೀರ್ಘ ಕಾಲ ಬೇಕು. ಈ ಸಂಬಂಧದಲ್ಲಿ ಸೂಕ್ತ ಕಾರ್ಯಕ್ರಮ ಹಾಕಿಕೊಂಡು ಒಂದು ಯೋಜನೆ ತಯಾರಿಸಬೇಕು. ಹಾಗೆ ಮಾಡಿದರೆ ಇಂದಲ್ಲ ಇನ್ನು 20 ವರ್ಷಗಳಮೇಲಾದರೂ ಜನರು ಕಷ್ಟವಿಲ್ಲದೆ ಜೀವನ ನಡೆಸಬಹುದು, ನಾವಲ್ಲದಿದ್ದರೆ ನಮ್ಮ ಮಕ್ಕಳಾದರೂ ಸುಖವಾಗಿರಬಹುದು. ಆದರೆ ಈ ದೆಶೆಯಲ್ಲಿ ಒಂದು ಹೆಜ್ಜೆಯನ್ನೂ ಸಹ ಇಟ್ಟಿಲ್ಲ. ಇದರಿಂದ ನಕ್ಸಲ್‌ಬಾರಿ ಚಟುವಟಿಕೆ ತೆಲಂಗಾಣ ಚಳವಳಿ ಮುಂತಾದವು ಹೆಚ್ಚಿವೆ, ಕಾಲಕ್ರಮದಲ್ಲಿ ನಮ್ಮ ದೇಶದಲ್ಲೂ ಆ ರೀತಿ ಗಲಾಟೆಯಾಗಿ ಚಳವಳಿನಡೆಯಬಹುದು. ಇದಕ್ಕೆ ಅವಕಾಶ ಕೊಡುವುದು ಉಚಿತವಲ್ಲ. ಪರಿಸ್ಥಿತಿ ಹೀಗಿದ್ದರೂ ಕೂಡ ಸಮತಾವಾದ ಸಮಾಜ ರಚನೆಮಾಡುವುದಾಗಿ ಬಾಯಲ್ಲಿ ಹೇಳುತ್ತಿರುವರೇ ಏನಾ ಕಾರ್ಯರೂಪಕ್ಕೆ ಏನೂ ತಂದಿಲ್ಲ. ಪ್ರಕೃತಿಗೆ ವಿರೋಧವಾಗಿ ಏನೂ ಮಾಡಲಾಗುವುದಿಲ್ಲ, ಅದಕ್ಕೆ ಹೊಂದಿಕೊಂಡುಹೋಗಬೇಕು, ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕು. ಇದಕ್ಕಾಗಿ ಒಂದು ತಜ್ಞರ ಸಮಿತಿ ಮಾಡಬೇಕು. ಅಭಾವ ಪರಿಸ್ಥಿತಿಯಿಂದ ಕಷ್ಟಪಡುವುದನ್ನು ಗಮನಿಸಿ ಅದರ ಪರಿಹಾರ ಮಾಡಲು ಒಳ್ಳೆಯ ಕಾರ್ಯಕ್ರಮ ಹಾಕಿಕೊಳ್ಳಬೇಕು. ಇದಕ್ಕೆ ಹೊರಗಿನವರ ಅವಶ್ಯಕತೆ ಇಲ್ಲ, ನಮ್ಮ ದೇಶದ ತಜ್ಞರು, ಅಧಿಕಾರಿಗಳು, ಅನುಭವಿಗಳು ಬೇಕಾದಷ್ಟಿದ್ದಾರೆ, ಅವರನ್ನು ಸೇರಿಸಿ ಒಂದು ಸಮಿತಿಯನ್ನು ರಚಿಸಿ ಕಾರ್ಯಕ್ರಮ ಹಾಕಿಕೊಂಡು ಕೇಂದ್ರ ಸರಕಾರದ ಸಹಾಯ

(ಶ್ರೀ ಬಿ. ಎಸ್. ನಾರಾಯಣ ಸ್ವಾಮಿ)

ಕೇಳಿ. ಕೇಂದ್ರ ಸರಕಾರ ಈಚೆಗೆ ಮೈನೂರು ಸರಕಾರದಮೇಲೆ ಮಲತಾಯಿ ಧೋರಣೆ ತೋರಿಸುತ್ತಿದೆ ಎಂದು ಆರ್ಥಿಕ ಸಚಿವರೇ ಹೇಳುತ್ತಿದ್ದಾರೆ. ನಾವು ಕಷ್ಟದಲ್ಲಿರುವಾಗ ಅದರ ಪರಿಹಾರಕ್ಕೆ ಯೋಜನೆಮಾಡಬೇಕಾಗಿರುವಾಗ ಎಲ್ಲಾ ರೀತಿಯ ಒತ್ತಾಯವಿದ್ದರೂ ನ್ಯಾಯವಾಗಿ ಕೊಡಬೇಕಾದ ಹಣವನ್ನೂ ಕೂಡ ಕೇಂದ್ರ ಸರಕಾರ ಕೊಟ್ಟಿಲ್ಲವೆಂದರೆ ಬಹಳ ವ್ಯಥೆಪಡಬೇಕಾಗಿದೆ. ಇದಕ್ಕೆ ಕಾರಣ ರಾಜಕೀಯ ಎಂದು ಕೆಲವರು ಹೇಳುತ್ತಾರೆ. ಅದು ಪಾಡಿಕೆಯಾಗಿದೆ. ಏನೇ ಆಗಲಿ, ಆರ್ಥಿಕ ಸಚಿವರು ಜಾಣರು, ಅವರಿಗೆ ತಕ್ಕ ಪ್ರಯತ್ನ ಮಾಡಿ ಹಣವನ್ನು ತರುವ ಶಕ್ತಿಯಿದೆ. ಹಿಂದೆ ಇಂಥ ಒಂದು ಪ್ರಸಂಗ ಬಂದಾಗ ಶ್ರೀ ಹನುಮಂತಯ್ಯನವರು ಮಂತ್ರಿಗಳಾಗಿದ್ದಾಗ ಈ ಸಭೆಯ ಎರಡೂ ಕಡೆಯ ಯೋಗ್ಯರಾದ ಸದಸ್ಯರನ್ನು ಸೇರಿಸಿ ಕೇಂದ್ರ ಸರಕಾರಕ್ಕೆ ನಿಯೋಗ ಹೋಗಿ ಫೈನಾನ್ಸ್ ಕಮಿಷನ್ನಿನೊಡನೆ ಚರ್ಚೆಮಾಡಿ ಸೌಲತ್ತನ್ನು ಪಡೆದರು. ಈಗಲೂ ಮಾನ್ಯ ಸಚಿವರು ಇಂಥ ಒಂದು ನಿಯೋಗವನ್ನು ಕೇಂದ್ರ ಸರಕಾರಕ್ಕೆ ಕಳಿಸುವುದು ಒಳ್ಳೆಯದು.

ಅಭಾವ ಪರಿಸ್ಥಿತಿ ವಿಚಾರದಲ್ಲಿ ಈಗಲೂ ಕೂಡ ಮಾನ್ಯ ರಾಜಸ್ವ ಮಂತ್ರಿಗಳೇಕೆ ಯಾವ ರೀತಿಯ ಯೋಚನೆಯನ್ನೂ ಮಾಡಿಲ್ಲವೋ ಅರ್ಥವಾಗುವುದಿಲ್ಲ. ಶ್ರೀ ರಾಮಕೃಷ್ಣ ಹೆಗ್ಗಡೆಯವರು ಬಿಗಿಮುಷ್ಟಿ ಹಿಡಿದಿದ್ದಾರೆಂದು ನಮ್ಮನಿದ್ದಾರೋ ಏನೋ. ಏನೇ ಆಗಲಿ ಈಗಲಾದರೂ ಕಷ್ಟ ಏರುವುದನ್ನರಿತು ಅದನ್ನು ಪರಿಹಾರ ಮಾಡಲು ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ಈಚೆಗೆ ಏರಿಯಾ ಡೆವಲಪ್‌ಮೆಂಟ್ ಸ್ಕೀಂ ಕೆಲವು ಕಡೆ ಜಾರಿಗೆ ಬಂದಿದೆ, ಈ ಸ್ಕೀಂ ಕೋಲಾರ ಜಿಲ್ಲೆ 4 ತಾಲ್ಲೂಕುಗಳಲ್ಲಿದೆ. ಈ ಸ್ಕೀಮು ಬರೀ ಪುನ್ಕಾಕದ ಬದನೇಕಾಯಿಯಾದರೆ ಪ್ರಯೋಜನ ವಾಗುವುದಿಲ್ಲ. ಏಕೆಂದರೆ ಹಿಂದೆ ಕೊಟ್ಟಿರುವ ಸಾಲದಲ್ಲಿ ಶೇಕಡ 90 ಭಾಗವನ್ನು ತೀರಿಸುವವರೆಗೆ ಬೇರೆ ಸಹಾಯ ನೀಡುವುದಿಲ್ಲವೆಂದು ಹೇಳುವುದುಂಟು. 5 ವರ್ಷಗಳಿಂದ ಅಭಾವ ಪರಿಸ್ಥಿತಿ, ಕ್ಷಾಮ ಇರುವಾಗ ಕಾಲಕ್ಕೆ ತಕ್ಕ ಹಾಗೆ ಬದಲಾವಣೆ ಮಾಡಬೇಕು. ಈಗಿನ ಪರಿಸ್ಥಿತಿಯಲ್ಲಿ ಸಾಲ ತೀರಿಸುವ ಶಕ್ತಿ ರೈತರಿಗೆ ಇದೆಯೇ ! ಹಾಗಿರುವಾಗ ಇಂಥ ಕಡ್ಡಾಯ ಹೊರಿಸುವುದು ಉಚಿತವೇ ? ಇದನ್ನು ಯೋಚನೆ ಮಾಡಬೇಕು. ಹಿಂದೆ ಸಾಲ ಪಡೆದ ಕೆಲವರಿಗೆ ಆ ಸಾಲದ ಕಂತನ್ನು ಪಾವತಿ ಮಾಡಲು ಶಕ್ತಿಯಿಲ್ಲದಿರುವಾಗ ಮುಂದೆ ಸಾಲ ಕೊಡುವುದನ್ನು ಮೊಟಕು ಮಾಡುವುದು ಸರಿಯಲ್ಲ. ಇದನ್ನು ಯೋಚಿಸಿ ಸರಕಾರ ಸರಿಯಾದ ವ್ಯವಸ್ಥೆ ಮಾಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

ವ್ಯವಸಾಯ ಬಾಬಿನ ಮೂರನೆಯ ಐಟಂನಲ್ಲಿ ರೀಸೆಟ್ಲ್‌ಮೆಂಟಿಗಾಗಿ 3 ಲಕ್ಷ ಚಿಲ್ಲರೆ ರೂಪಾಯಿಗಳನ್ನು ಕೇಳಿದ್ದಾರೆ, ಕೇವಲ 450 ಕುಟುಂಬಗಳಿಗೆ ಪುನರ್ವ್ಯವಸ್ಥೆ ಮಾಡುವುದಕ್ಕೆ ಇದನ್ನು ಟೋಕನ್ ಗ್ರಾಂಟ್ ಎಂದು ಕೇಳಿದ್ದಾರೆ. ಇದನ್ನು ಒಪ್ಪುತ್ತೇನೆ. ಈ ಬಾಬಿಗೆ 3 ಲಕ್ಷವಲ್ಲ, 3 ಕೋಟಿ ಬೇಕಾದರೂ ಸಂತೋಷದಿಂದ ಕೊಡಬಹುದಾಗಿತ್ತು. ಹಣಕ್ಕೆ ಕೊರತೆ ಇರುವುದು ನಿಜ. ಬೇರೆ ಬಾಬಿನಲ್ಲಿ ಕಡಿಮೆ ಮಾಡಿ ಬಡವರಿಗೆ ಬೇಕಾಗಿರುವುದಕ್ಕೆ ಕೊಟ್ಟರೆ ಕೆಲವು ಕಾಲದ ಮೇಲೆ ಅವರಿಗೆ ಖರ್ಚುಮಾಡಬೇಕಾಗುವುದಿಲ್ಲ. ಆದುದರಿಂದ ದಯೆಯಿಟ್ಟು ಇಂಥ ಬಾಬುಗಳಿಗೆ ಹೆಚ್ಚು ಕೊಟ್ಟು ವರ್ಷದಲ್ಲಿ 4,500 ಕುಟುಂಬಗಳಿಗಾದರೂ ಪುನರ್ವ್ಯವಸ್ಥೆಮಾಡಲು ಯೋಚನೆಮಾಡ ಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಇನ್ನೊಂದು ಸಣ್ಣ ವಿಚಾರ. ಕೋಲಾರ ಜಿಲ್ಲೆಯಲ್ಲಿ ಅಭಾವವಿದೆ ಎಂದು ಪದೇ ಪದೇ ಹೇಳುತ್ತಿದ್ದೇವೆ, ಅಲ್ಲಿ ನಿರುದ್ಯೋಗ ಸಮಸ್ಯೆ ಬಹಳವಾಗಿದೆ, ಜನತೆಗೆ ಉದ್ಯೋಗವಿಲ್ಲ. ಇದೆಲ್ಲಾ ಸರ್ಕಾರದ ಗಮನಕ್ಕೆ ಬಂದಿರಬಹುದು. ಜನರು ಉದ್ಯೋಗವಿಲ್ಲದೆ ಉಪವಾಸ ಮಾಡುತ್ತಿದ್ದಾರೆ. ಕೋಲಾರದಲ್ಲಿ ಬಂಗಾರದ ಗಣಿಯ ಕೆಲಸದಲ್ಲಿರುವವರಿಗೆ ಉದ್ಯೋಗ ಹೋದಾಗ ಅವರಿಗೆ ಅನುಕೂಲವಾಗಲೆಂದು ಭಾರತ್ ಅರ್ತ್ ಮೂವರ್ಸ್ ಕಾರ್ಖಾನೆಯನ್ನು ಅಲ್ಲಿ ಪ್ರಾರಂಭಿಸಿದರು, ನಿಜ. ಈ ಕಾರ್ಖಾನೆಯಲ್ಲಿ ಕೆಲಸವಿದೆ. ಆದರೆ ಯಾರಿಗೆ ಅದರಲ್ಲಿ ಉದ್ಯೋಗ ಸಿಕ್ಕುತ್ತಿದೆ ಎಂಬುದನ್ನು ಯೋಚನೆ ಮಾಡಬೇಕು. ಇಲ್ಲಿ ನಮ್ಮ ಜಿಲ್ಲೆಯವರಿಗೆ ಕೆಲಸ ದೊರೆಯದೆ ಕೇರಳ, ಆಂಧ್ರ, ತಮಿಳು ನಾಡು ಮುಂತಾದ ಕಡೆಗಳವರಿಗೆ ಸಿಕ್ಕುತ್ತಿದೆ.

5-30 P.M.

ಇದು ಎಂತಹ ಶೋಚನೀಯ ಪರಿಸ್ಥಿತಿ ! ನಮಗೇ ಇಲ್ಲ, ಪರರಿಗೆ ಧರ್ಮ ಮಾಡುತ್ತಾ ಇದ್ದೀರಿ. ಮುಖ್ಯಮಂತ್ರಿಗಳು ಬಹಳ ಉದಾರತೆಯಿಂದ ಹೇಳಿದರು, ಎರಡು ಫ್ಯಾಕ್ಟರಿಗಳಿಗೂ ಬರೆದಿದ್ದೇವೆ, ಇನ್ನು ಮುಂದೆ ನಮ್ಮವರಿಗೆ ಕೆಲಸ ಕೊಡುತ್ತಾರೆ ಎಂದು. ಆದರೆ ಅವರು ಕೊಟ್ಟ

ರುವುದು ಏನು ನ್ಯಾಯ ? ಇದು ಬಹಳ ಅನ್ಯಾಯ. ಇಂತಹ ಪರಿಸ್ಥಿತಿಯನ್ನು ತಪ್ಪಿಸಲೇಬೇಕು. ಹಿಂದೇ ಅನೇಕ ಆಕ್ರಮಗಳು ನಡೆದು ಹೋಗಿವೆ. ಪರ್ಸನಲ್ ಮ್ಯಾನೇಜ್‌ಮೆಂಟಿನಲ್ಲಿ ಮೈಸೂರಿನ ಅಧಿಕಾರಿಗಳು ಇರಬೇಕೆಂದು ಒತ್ತಾಯ ಮಾಡಬೇಕು, ನಮಗೆ ತಿಳಿದಮಟ್ಟಿಗೆ ಕೇರಳದ ಒಬ್ಬ ಅಧಿಕಾರಿ ಮತ್ತು ಆಂಧ್ರದ ಒಬ್ಬ ಅಧಿಕಾರಿ ಅಲ್ಲಿ ಇದ್ದಾರೆ. ಅವರೇನಿದ್ದರೂ ಪರದೇಶದ ಮಕ್ಕಳಿಗೆ ಅನ್ನ ಕೊಡುತ್ತಾರೆ, ನಮ್ಮ ಮಕ್ಕಳು ಉಪವಾಸ ಇರಬೇಕಾದ ಪರಿಸ್ಥಿತಿ ಬಂದಿದೆ. ಇದು ಯಾವ ಧರ್ಮ, ನ್ಯಾಯ ? ಈ ವಿಷಯದ ಬಗ್ಗೆ ಕೂಡಲೇ ಗಮನ ಕೊಡಬೇಕೆಂದು ಹೇಳುತ್ತೇನೆ. ಇನ್ನೊಂದು ವಿಷಯವನ್ನು ಮುನ್ನು ನೊಂದು ಹೇಳಬೇಕಾಗಿದೆ. ಡಿಸ್ಟ್ರಿಕ್ಟ್ ಲೆವೆಲ್ ರಿಕ್ರೂಟ್‌ಮೆಂಟ್ ಕಮಿಟಿ ಅಂತ ಮಾಡಿದ್ದೀರಿ, ಅದರ ಉದ್ದೇಶವಾದರೂ ಇಷ್ಟೆ, ಆಯಾ ಜಿಲ್ಲೆಯಲ್ಲಿರತಕ್ಕ ಮಕ್ಕಳಿಗೆ ಅಲ್ಲೇ ಉದ್ಯೋಗ ದೊರೆಯಬೇಕು ಎಂಬುದಾಗಿದೆ. ವಿದ್ಯಾಭ್ಯಾಸದ ಇರಾಖೆಯಲ್ಲಿ 245 ಜನ ಉಪಾಧ್ಯಾಯರು ಮತ್ತು ಉಪಾಧ್ಯಾಯನಿಯರ ಕೆಲಸ ಖಾಲಿ ಇತ್ತು, ಅದಕ್ಕೆ ದರ ಖಾಸ್ತು ತರಿಸಿಕೊಂಡರು. ಸುಮಾರು 500 ಜನ ಟ್ರೈನಿಂಗ್ ಆಗಿರತಕ್ಕ ಹೆಣ್ಣು ಮತ್ತು ಗಂಡು ಮಕ್ಕಳು ಅರ್ಜಿ ಕೊಟ್ಟರು, ಕೋಲಾರ ಜಿಲ್ಲೆಯ 45 ಜನರಿಗೆ ಮಾತ್ರ ಕೆಲಸ ಕೊಟ್ಟಿದ್ದಾರೆ, ಉಳಿದ 200 ಕೆಲಸಗಳನ್ನು ಹೊರಗಿನ ಜಿಲ್ಲೆಯವರಿಗೆ ಕೊಟ್ಟಿದ್ದಾರೆ. ಎಂದರೆ ಕೋಲಾರ ಜಿಲ್ಲೆಯವರಿಗೆ ಐದನೆ ಒಂದು ಭಾಗ ಮಿಕ್ಕಿದ್ದೆಲ್ಲಾ ಹೊರಗಿನವರಿಗೆ ಕೊಟ್ಟಂತಾಯಿತು, ಇದಕ್ಕಿಂತ ಬೇರೆ ಅನ್ಯಾಯ ಬೇಕೆ ಎಂದು ಕೇಳುತ್ತೇನೆ. ಕೋಲಾರ ಜಿಲ್ಲೆಯವರು ಮನುಷ್ಯರು ಅಂತ ಅಂದು ಕೊಂಡಿದ್ದಾರೋ ಅಥವಾ ಮೃಗಗಳು ಅಂತ ಅಂದುಕೊಂಡಿದ್ದಾರೋ ? ಇದು ಅರ್ಥವಾಗುತ್ತಾ ಇಲ್ಲ. ಇಂತಹ ಪಕ್ಷಪಾತ ಮಾಡುವಿಕ್ಕೆ ಯಾರು ಅವಕಾಶ ಕೊಟ್ಟಿದ್ದಾರೆ ? ಇದು ಸರ್ಕಾರದ ನೀತಿಯೇ ಎಂದು ಕೇಳುತ್ತೇನೆ. ಆಂಧ್ರದವರು ನಮ್ಮ ರಾಜ್ಯಕ್ಕೆ ಸೇರಿಸಿಕೊಳ್ಳಿ ಎಂದು ನಮ್ಮನ್ನು ಕೇಳುತ್ತಾರೆ, ಆದರೆ ನಾವು ಮೈಸೂರಿನ ಮೇಲೆ ಇರತಕ್ಕ ಪ್ರೇಮದಿಂದ ಅಲ್ಲಿಗೆ ಹೋಗುವುದಿಲ್ಲ ಎಂದು ಹೇಳುತ್ತೇವೆ. ಇಂತಹ ಅನಾದರಣೆ ಮಾಡಿದರೆ ನಮ್ಮಿಂದ ಸಹಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಇಂತಹ ಅನ್ಯಾಯಗಳನ್ನು ತಪ್ಪಿಸಿ ಕೋಲಾರ ಜಿಲ್ಲೆಯ ಜನರ ಮೇಲೆ ಕೊಂಚವಾದರೂ ದಯೆಯನ್ನು ತೋರಿಸಬೇಕೆಂದು ಪ್ರಾರ್ಥನೆ ಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†Sri P. V. AITHALA (Surathkal).—Mr. Speaker, opposing in very strong terms the Supplementary Demands for Grants, I would like to address a few words.

Firstly, I am astonished to find that Rs. 1 lakh should have been demanded for furnishing the Raj Bhavan, the residence of the Governor. We are thinking of a Socialistic Pattern of Society now. There are ever so many Class III and Class IV servants without any residential accommodation. Recently I had an occasion to address the Hon. Finance Minister regarding the difficulties of the Commercial Tax staff in South Kanara, Mangalore. The Deputy Commissioner was compelled to reside in a lodging house; the Assistant Commissioner had to reside in a hotel; several Commercial Tax Officers are compelled to reside in the tenements of big merchants. In additional I talked to the Chief Minister also to provide these officers with some quarters. The reply was that there must be Housing Board in Mangalore and it should provide the accommodation. I may tell the House that there is no Housing Board in Mangalore. When the Commercial Tax Officers are transferred from one place to another once in two or three years, it is the duty of the Government to provide them Government quarters. It is a very good thing to transfer these officers compulsorily once in two or three years so that they may not be subjected to the influence of the merchants. When the Government servants are liable for transfer it is the primary duty of the Government to provide these officials with Government quarters. That is not done. On the other hand, a sum of Rs. 1 lakh is spent for the Governor's residence for the purpose of

(SRI P. V. AITHALA)

furnishing it. Here please note ; that it is not for the purpose of construction.

I had an occasion to visit Delhi recently. A "Mysore Bhavan" is run there. I went there and informed the Manager of the Bhavan that I am an M.L.A. from Mysore State and enquired whether there was any concession for board and lodging in the 'Mysore Bhavan.' He told me that there was no concession and that I had to pay Rs. 30 per room. But these Ministers enjoy everything free. Then I got up early in the morning and ordered tiffin. You will be shocked to hear that the minimum rate for tiffin is Rs. 3, whether you take two *idlies* or more. Then I enquired the charges per meal ; it is Rs. 4.50 per meal. I asked him whether there was any concession for an M.L.A. He said there was no concession whatsoever. I have a friend of mine there ; he is a Chartered Accountant. He was also with me. We learnt that the charges for tiffin were Rs. 3 whatever be the quantity consumed. Then my friend, the Chartered Accountant, who was from Kerala State put it to me why he should not eat as much he could for Rs. 3. From the next day onwards, he went on eating 20 to 30 idlis and even then he was charged only Rs. 3 to the wonder of the servants and one and all. My friend was about 60 years old. At one time he was a wrestler. Although he was lean, he had a good appetite. Contrast the state of affairs existing in our "Mysore Bhavan" with that of Tamil Nadu. Just opposite to 'Mysore Bhavan' is situated the Guest House of Tamil Nadu. There an M.L.A. from Tamil Nadu is given free lodging. An M.L.A. from outside Tamil Nad is charged Rs. 5 per day. But here in 'Mysore Bhavan' an MLA of Mysore is charged Rs. 30 per room.

Now reverting to the subject of residential accommodation for Government servants, I may say that I addressed the Finance Minister recently and informed that 11 Government quarters belonging to the Port Office, which has been shifted to Karwar, were available for Rs. 1,70,000. Even today our Government have not taken them over. I am told that there is some difficulty because the Port Office is a semi-official body. Even today no Government orders have been passed to take them over. The Commercial Tax Department is a revenue earning department and the Departmental Officers must be provided with residential quarters and should not be left at the mercy of big landlords and merchants in the interests of Government.

The next point that I wish to speak on is, about engaging the services of two counsels from Madras. I am astonished to see that two counsels from Madras have been appointed to appear before the tribunal. Is there any dearth for advocates in Mysore ? Mysore can produce advocates who can even be Supreme Court Judges. Do we not have eminent lawyers ? What happened to the ex-Advocate General and the present Advocate General ? Are they not competent men ? What is the fee you pay for persons engaged from Madras ? Rs. 25,000 as

reading fees and Rs. 2,500 per day. I am really sorry to find that even the Junior to this eminent advocate has been brought from Madras and his reading fee is Rs. 4,000 and Rs. 400 per day. I do not know whether there is no efficient advocate in Mysore. I am sorry to find that eminent counsels of our State have been neglected in spite of the fact that we have eminent advocates like the ex-Advocate General and the present Advocate General.

Various loans are proposed to be given to the co-operative societies. I an sorry to say that several of the Cabinet Ministers do not reply when letters are sent from the M.L.As. In my own village there has been a case of defalcation to the tune of Rs. 18,000 by the Secretary. He is a member of the ruling party. A sum of Rs.18,000 being the compensation amount was deposited in the co-operative society. This Secretary began withdrawing Rs. 300 or 400 every day and at last in 1957 we found that out of Rs. 21,000 there is only Rs. 17 in the society. Sri Ratnakumar Shetty addressed a letter to the hon. Minister for Co-operation on 4th October 1968. No reply is sent from the Minister. Thereafter a question was raised by him on the floor of the House asking why no action was taken. Under the Co-operative Societies Act the limitation is only for 2 years. The period of two years is approaching. When the question was asked the reply given was that the Secretary is a man of substantial means. It may be. But is this the way of giving reply! Thereafter having found that one M. L. A's representation is not enough, myself and Sri Ratnakumar Shetty, both addressed a letter to the Minister for Co-operation. I have talked to him personally. I am afraid big guns in your party is protecting him. Otherwise there would have been action against him. The Minister stated that there is no such thing and I can be rest assured of an enquiry. But up to now no criminal or civil suit has been filed against him. Just before retirement the Deputy Registrar of Co-operative Societies, South Kanara, has given a prolonged stay for the enquiry of this case. I cannot understand how the Ministers do not care even to send a reply when two M.L.As. write to them. This is the state of affairs and yet we want to sink lakns of rupees in this department.

Coming to the next item *i.e.*, famine relief, I want to say that lakhs of rupees are spent on famine relief. It may be necessary to spend in cases where there is shortage of rainfall and there are famine conditions. But, alas, my district has suffered a lot due to floods last year as well as this year and no provision is made for substantial aid. In my district a petty clerk in the Civil Judge's Court who had an acre of land suffered a great loss. His land was filled with sand in 1968. I addressed a letter to the Chief Minister stating that the person was unable to cultivate the land. The reply sent was that the papers were forwarded to the Deputy Commissioner. Within a few days the petitioner is advised by the Deputy Commissioner, that he can apply for interest-free loan if he so desired. I ask, is there no provision to grant any relief for the damage caused due to floods ?

ಶ್ರೀಮತಿ ಲೀಲಾವತಿ ರೈ (ಬಂಟವಾಳ).—ಕಳೆದ ವರ್ಷ ಫ್ಲಡ್‌ರಿಲೀಫ್‌ನಲ್ಲಿ ನತ್ತವರಿಗೆ ಮತ್ತು ಮನೆಯನ್ನು ಕಳೆದುಕೊಂಡವರಿಗೆ ಒಂದೊಂದು ಸಾವಿರ ರೂಪಾಯಿಗಳನ್ನು ಹಂಚಲಾಯಿತು. ಅದೇ ಸಂದರ್ಭದಲ್ಲಿ ಬಡ್ಡಿರಹಿತವಾದ ಸಾಲವನ್ನು ಕೊಡುವುದಕ್ಕೆ ಏರ್ಪಾಡನ್ನು ಮಾಡಲಾಗಿತ್ತು. ಅದ್ಯಾರಿಂದ ಮಾನ್ಯ ಸದಸ್ಯರು ಹೇಳುತ್ತಿರುವ ಆ ಸರ್ಕಾರಿ ಅಜ್ಞೆ ಈಗ ಮಾಡಿದ್ದಲ್ಲ. ಅದು ಒಂದು ವರ್ಷದ ಹಿಂದಿನದ್ದು.

Sri P. V. AITHAL.—The reply is sent on 29th July 1969. When the fields are rendered unfit for cultivation, do you want us to take loan ? Can he not get loan elsewhere ? When you are spending crores of rupees, why not give some relief to a person who has suffered on account of floods ? You give assistance to persons who have lost houses but what about an agriculturist whose field has been rendered unfit for cultivation due to floods ? There is a further item, *i.e.*, an expenditure of Rs. 1,12,500 on account of export potential survey. When thousands of acres have been acquired for the purpose of industries and are lying vacant for the last three years and when several people have been evicted from Panambur and other villages from thousands of acres, what is the use of this survey ? Agriculturists have been driven away without any rehabilitation. When that is the case, what is the purpose of this survey ? I doubt very much whether the Government has received the report of this survey.

Lastly, coming to rehabilitation, some lakhs of rupees are proposed to be spent for the rehabilitation of certain families. When agriculturists and farmers who are said to be very foundation of democracy are thrown out of their villages and they are unemployed for the last three years, when the M.L.A. of that constituency requests that some industry might be started to rehabilitate those people, from the time of Sri Nijalingappa the Ex-Chief Minister, only oral promises are given. No major rehabilitation is made in spite of cries from all quarters. With these words, I oppose the grants.

ಶ್ರೀ ಎಂ. ನಾಗಪ್ಪ.—ಸನ್ಮಾನ್ಯ ಅಧ್ಯಕ್ಷರೇ, ನಾನು ಈ ಸಭೆಯ ಮುಂದೆ ಮುಂಡಿಸಿರ ತತ್ಕಂಥ ಹೆಚ್ಚುವರಿ ಬೇಡಿಕೆಗಳನ್ನು ಬಹಳವಾಗಿ ವಿರೋಧಿಸಿ ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ನಾನು ಈ ಸಭೆಗೆ ಬಂದು ಎರಡೂವರೆ ವರ್ಷಗಳಾದ ನಂತರ ಪ್ರಥಮವಾಗಿ ಹೆಚ್ಚುವರಿ ಬೇಡಿಕೆಗಳನ್ನು ಈ ಸಭೆಯಲ್ಲಿ ಕೇಳುತ್ತಿರುವುದನ್ನು ನೋಡುತ್ತಿದ್ದೇನೆ. ಇದರಿಂದೇನು ಗೊತ್ತಾಗುತ್ತದೆಂದರೆ, ಸರ್ಕಾರ ಈ ಮಾನ್ಯ ಸಭೆಯ ಅಂಗೀಕಾರವನ್ನು ಹೊಂದಿವೆಯೇ 1964-65 ರಲ್ಲಿ ಮತ್ತು 1965-66 ರಲ್ಲಿ ಏನು ಹಣವನ್ನು ಖರ್ಚು ಮಾಡಿದ್ದಾರೋ ಅವನ್ನು ನಮ್ಮಲ್ಲಿರತಕ್ಕ ಅಕೌಂಟೆಂಟ್ ಜನರಲ್ ಅವರು ಮತ್ತು ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ತೋರಿಸಿಕೊಟ್ಟ ನಂತರ ಈ ಸರ್ಕಾರ ಅದರಲ್ಲಿರತಕ್ಕ ದೋಷಗಳನ್ನು ತಿದ್ದಿಕೊಳ್ಳುವುದಕ್ಕೆ ಈ ಸಭೆಯ ಮುಂದೆ ಎಕ್ಸೆಸ್ ಗ್ರಾಂಟ್ ಡಿಮ್ಯಾಂಡ್ ತಂದಿದೆ. ನಾನು ಈ ಸಮಯದಲ್ಲಿ ಆದರ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಇದು ಸರ್ಕಾರದ ಹಣಕಾಸಿನ ನಡವಳಿಕೆಗಳನ್ನು ತೋರಿಸಿಕೊಡುತ್ತದೆ. ಈಗ ಇಟ್ಟಿರತಕ್ಕ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ನೋಡಿದರೆ, ಸರ್ಕಾರ ಇನ್ನೂ ತನ್ನ ಹಣಕಾಸಿನ ನೀತಿಯನ್ನು ಬದಲಾಯಿಸುತ್ತಾ ಇಲ್ಲವೆನ್ನುವ ಮಾತನ್ನು ನಾನು ಪದೇ ಪದೇ ಈ ಸಂದರ್ಭದಲ್ಲಿ ಸಹಿತ ಹೇಳಬೇಕಾಗಿದೆ. ಏಕೆಂದರೆ, ಇವರು ಕೇಳಿರುವ ಬೇಡಿಕೆಗಳನ್ನು ನೋಡಿದರೆ, ಅವೂ ಸಹ ಹಣಕಾಸಿನ ವರ್ಷದಲ್ಲಿ ಉಪಯೋಗಕ್ಕೆ ಬರತಕ್ಕಂಥ ಅಂಕಿಅಂಶಗಳಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಸಪ್ಲಿಮೆಂಟರಿ ಗ್ರಾಂಟ್‌ನಲ್ಲಿ annexure ಸೀರಿಯಲ್ ಒಂದರಿಂದ 39 ರವರೆಗೆ ನಾವು ನೋಡಿದರೆ ಈ ಹಣಕಾಸಿಗೆ ಸರ್ಕಾರ ಯಾವಾಗ ಆಜ್ಞೆಮಾಡಿದೆ, ಕಾಂಟಿನ್‌ಜೆನ್ಸಿ ಫಂಡ್‌ನಿಂದ ಹಣವನ್ನು ಯಾವಾಗ ತೆಗೆದುಕೊಂಡಿದ್ದಾರೆಂದು ಒಂದು ತಾರೀಖನ್ನು ಕೊಟ್ಟಿದ್ದಾರೆ. ಆ ತಾರೀಖುಗಳ ಪ್ರಕಾರ 26ನೇ ಮಾರ್ಚ್ ತಿಂಗಳು, 27ನೇ ಮಾರ್ಚ್ ತಿಂಗಳು ಮತ್ತು 31ನೇ ಮಾರ್ಚ್ ತಿಂಗಳಲ್ಲಿ

ಎಂದು ತಿಳಿದು ಬರುತ್ತದೆ. ಈ ಸಪ್ಲಿಮೆಂಟರಿ ಗ್ರಾಂಟ್‌ತರತಕ್ಕ ಅಧಿಕಾರ ಘಟನೆಯಲ್ಲಿ ಕೊಟ್ಟಿರುವ ಆರ್ಟಿಕಲ್ 205ರ ಪ್ರಕಾರ ಬರುತ್ತದೆ. ಇವರು ತಂದಿರತಕ್ಕ ಎಕ್ಸೆಸ್ ಗ್ರಾಂಟ್ ಸಹ ಅದೇ ಆರ್ಟಿಕಲ್‌ನಲ್ಲಿ ಬರುತ್ತದೆ. ಮುಂದೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯಾಗಲೀ, ಮತ್ತೆ ಇನ್ನೊಂದು ಕಮಿಟಿಯೇ ಆಗಲೀ ಇದರ ಮೇಲೆ ಟೀಕೆ ಮಾಡಬಹುದೆಂದು ಸರ್ಕಾರದವರು 1969-70ನೇ ಸಾಲಿನಲ್ಲಿ ಇದನ್ನು ಸಪ್ಲಿಮೆಂಟರಿ ಗ್ರಾಂಟ್ ಎಂಬುದಾಗಿ ತಂದಿದ್ದಾರೆ. ಇದು ಆ ರೀತಿ ತರುವುದಕ್ಕೆ ಅವಕಾಶವಿಲ್ಲ. ನಮ್ಮ ಹಣಕಾಸಿನ ವರ್ಷ ಅಂದರೆ 1968-69ನೇ ವರ್ಷ 1969ನೇ ಮಾರ್ಚ್‌ಗೆ ಮುಗಿಯುತ್ತದೆ. ಅದರೊಳಗೆ ಕಾಂಟಿನ್‌ಜೆನ್ಸಿ ಫಂಡಿನಿಂದ ತೆಗೆದುಕೊಂಡ ಹಣವನ್ನು ಈಗ ಸಪ್ಲಿಮೆಂಟರಿ ಬಜೆಟ್ ಎಂದು 1969-70ನೇ ಸಾಲಿಗೆ ತೆಗೆದುಕೊಂಡು ಬರುವುದಕ್ಕಾಗುವುದಿಲ್ಲ ಎನ್ನುವ ಮಾತನ್ನು ದಾಸೂಸ್ ಕಮೆಂಟರಿ ಆನ್ ಬಜೆಟ್—5ನೇ ಎಡಿಷನ್—ಆರ್ಟಿಕಲ್ 115, ಪುಟ 117 ರಲ್ಲಿ ಹೇಳಿರುವ ಒಂದೆರಡು ವಿಷಯಗಳನ್ನು ಓದಿ ಹೇಳುತ್ತೇನೆ. ಅದು ಈ ರೀತಿ ಇದೆ:

> "An Excess Demand differs a supplementary demand, in that the former is made after the expenditure has been actually incurred and after the financial year to which relates has expired. Hence there is no question of presenting an estimate for the excess. It is presented in the form of a demand for the excess demand for money already spent in excess of the voted grant should be made not by way of Supplementary demand but in the form of an Excess Demand."

ಇನ್ನು ಹೈಕೋರ್ಟಿನಲ್ಲಿ ನಿರ್ಣಯವಾದಂಥ ವಿಷಯವನ್ನೂ ಸಹ ಈ ಮಾನ್ಯ ಸಭೆಯ ಗಮನಕ್ಕೆ ತರುತ್ತಿದ್ದೇನೆ. ಅದು ಎ.ಐ.ಆರ್. 1955, ನಾಗಪೂರ್, ಪುಟ 11 ಐಟಂ (ಎ) ನಲ್ಲಿ ಹೇಳಿದೆ. ಅದು ರೀತಿ ಇದೆ:

> "Where the memorandum accompanying a budget clearly states that a need has already arisen and that a new service is already contemplated, article 205 of the Constitution cannot come in and a provision for expenditure has to be made in the budget itself."

ನಾನು ಅದಕ್ಕಾಗಿ ಉದಾಹರಣೆಯಾಗಿ ಕೆಲವು ಐಟಂಗಳನ್ನು ತೋರಿಸಿಕೊಟ್ಟಿದ್ದೇನೆ. ಮಾನ್ಯ ಮಂತ್ರಿಗಳು ಅವನ್ನು ನೋಡಬೇಕು. 1969ನೇ ಫೆಬ್ರವರಿ-ಮಾರ್ಚ್ ತಿಂಗಳಲ್ಲಿ 1967-68 ಮತ್ತು 1966-67ನೇ ಸಾಲಿನಲ್ಲಿ ಬಂದಿರುವ ಕೆಲವು ಐಟಂಗಳನ್ನು ತಾವು ಇದರಲ್ಲಿ ಸೇರಿಸಿದ್ದೀರಿ.

6-00 P. M.

ಅದನ್ನು ಸ್ಯಾಂಕ್ಷನ್ ಮಾಡಿದ್ದಕ್ಕೆ ನಾನು ಟೀಕೆ ಮಾಡುತ್ತಾ ಇಲ್ಲ. ಮಾರ್ಚ್ 26ನೇ ತಾರೀಖಿನಿಂದ 31ನೇ ತಾರೀಖಿನೊಳಗೆ 63ರಲ್ಲಿ 39 ಐಟಮುಗಳನ್ನು ಪಾಸ್ ಮಾಡಿದರು. ಇಂಥ ಹಣಕಾಸಿನ ಪರಿಸ್ಥಿತಿಯನ್ನು ಮಾನ್ಯ ಮಂತ್ರಿಯವರು ಸ್ವಲ್ಪ ಗಮನಿಸಬೇಕು. ತಾವು ಒಂದು ಉದ್ದವಾದ ಭಾಷಣವನ್ನು ಮಾಡಿದಿರಿ. ಆದನ್ನೇ ಕೇಳಿ ಒಂದು ಕಡೆ ಆಶ್ಚರ್ಯವಾಗುತ್ತದೆ. ತಮ್ಮ ಇವತ್ತಿನ ನೀತಿ ಬಹಳ ವಿಚಿತ್ರವಾಗಿದೆ. ಸರ್ಕಾರದ ಫೈನಾನ್ಸ್ ಕಮಿಷನ್ ಎದುರಿಗೆ, ನಮ್ಮಲ್ಲರ ತಕ್ಕಂತಹಾ ರಿಸೋರ್ಸಸ್ ಕಡಿಮೆ, ಹೆಚ್ಚು ಕೊಡಿ ಎಂದು ಕೇಳುತ್ತೀರಿ. ಪ್ಲಾನಿಂಗ್ ಕಮಿಷನ್ ಎದುರಿಗೆ ನಮಗೆ ರಿಸೋರ್ಸಸ್ ಬಹಳ ಇದೆ, ನಮ್ಮ ಪ್ಲಾನಿಂಗ್ ಜಾಸ್ತಿ ಮಾಡಬೇಕೆಂದು ಹೇಳುತ್ತಿದ್ದೀರಿ. ಈ ರೀತಿ ಎರಡು ಮುಖದ ನಿಮ್ಮ ವಾದ ಒಂದಲ್ಲ ಒಂದು ದಿವಸ ನಿಮಗೇ ಹಾನಿಯನ್ನು ತರುತ್ತದೆ. ಈಗಲಾದರೂ ನಿಮ್ಮ ಹಣಕಾಸಿನ ಪರಿಸ್ಥಿತಿ ಯಾವ ರೀತಿ ಇದೆ ? ನೀವು ನಮ್ಮ ರಾಜ್ಯವನ್ನು ಎಲ್ಲಿಗೆ ತೆಗೆದುಕೊಂಡು ಹೋಗುತ್ತಿದ್ದೀರಿ ? ಇವತ್ತು ಫೈನಾನ್ಸ್ ಕಮಿಷನ್ಸ್ ನಮಗೆ ಕಡಿಮೆ ಹಣ ಕೊಟ್ಟಿದೆ ಎಂದು ಹೇಳುತ್ತಿದ್ದೀರಿ. ಅದು ಫೈನಾನ್ಸ್ ಕಮಿಷನ್ ದೋಷವಲ್ಲ. ನಮ್ಮಲ್ಲರತಕ್ಕ ಫೈನಾನ್ಸ್ ಮಂತ್ರಿ ಮತ್ತು ರಾಜ್ಯ ಸರ್ಕಾರದವರು ಅದಕ್ಕೆ ಜವಾಬ್ದಾರರು, ಎಂದು ನಾನು ಹೇಳುತ್ತೇನೆ. ಇದೇ ನೀತಿ ಮುಂದೆ ನಡೆಸಿಕೊಂಡು ಹೋದರೆ, ನಮ್ಮ ಹಣಕಾಸಿನ ಪರಿಸ್ಥಿತಿ ಎಲ್ಲಿ ಹೋಗುತ್ತದೆಎಂದು ಯೋಚನೆ ಮಾಡಬೇಕು. ಒಂದು ಸಾರಿ ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಶ್ರೀಮಾನ್ ಜತ್ತಿಯವರು ಹಣಕಾಸಿನ ಮಂತ್ರಿಯಾಗಿದ್ದಾಗ, ನಾವು ಹಣವಿಲ್ಲದೆ, ಸರ್ಕಾರಿ ನೌಕರರಿಗೆ

(ಶ್ರೀ ಎಂ. ನಾಗಪ್ಪ)

ನಂಬಳಕೊಡುವುದು ಕಷ್ಟವಾಗಬಹುದು ಎಂದು ಹೇಳಿದ್ದರು. ಯಾರಾದರೂ ಒಂದು ಸಾರಿ ದೋಷ ಮಾಡಿದ್ದರೆ, ಅದನ್ನು ಮುಂದಿನ ಮಂತ್ರಿ ಬಂದು ತೋರಿಸುತ್ತಿದ್ದಾರೆ. ಇವತ್ತು ನೀವು ಮಾಡುವ ತಪ್ಪನ್ನು ಮುಂದಿನವರು ತೋರಿಸಬಹುದು, ಎಂ.ಎಲ್.ಎ. ಗಳು ಟೀಕಿಸಬಹುದು. ಇವತ್ತು ಹಣದ ಖರ್ಚು ಅವಶ್ಯ ಇದೆ. ಯಾವಾಗ ಅಂದರೆ, ಏನಾದರೂ ಪ್ರವಾಹ ಬಂದು, ಎಲ್ಲಾ ಒಡೆದು ಕೊಂಡು ಹೋಗಿದ್ದಾಗ, 'ನ್ಯೂ ಸರ್ವಿಸಸ್' ಎಂದು ಮಾಡಬಹುದು. ಬಜೆಟ್ ಕಡಿಮೆ ಬಿದ್ದರೆ, ಸಪ್ಲಿಮೆಂಟರಿ ಮಾಡಬಹುದು. ಅದರ ಬದಲು ಹೊಸದಾಗಿ ಎಲ್ಲಾ ಪ್ರಾರಂಭ ಮಾಡಿ, ಎಲ್ಲಾ ಬಾಬಿಗೂ ಖರ್ಚು ಮಾಡಿ, ಇಲ್ಲಿ ಬಂದು ಒಪ್ಪಿಗೆ ಕೊಡಿ ಎಂದರೆ ಹೇಗೆ ? ಇವತ್ತು ರಾಜ್ಯಾಂಗವನ್ನು ಪ್ರತಿಯೊಂದು ಕಡೆಯೂ ಉಲ್ಲಂಘನೆ ಮಾಡುತ್ತಿದ್ದಾರೆ ಈ ಕಾಂಗ್ರೆಸ್ ಸರ್ಕಾರದವರು. ಆದ್ದರಿಂದ ನಾವು ಇನ್ನು ಮುಂದೆ ಈ ತರದ ಸಪ್ಲಿಮೆಂಟರಿಯನ್ನು ನಿಲ್ಲಿಸಬೇಕು. ನಿಮಗೆ ಬೇಕಾದಂತಹ ಹಣಕಾಸಿನ ಬಜೆಟ್ ಮಾಡಿ. ಅಲ್ಲದೆ ಈ ರೀತಿ ಮಾಡಿದರೆ ನಮ್ಮ ಹಣಕಾಸಿನ ಸ್ಥಿತಿ ಎಲ್ಲಿ ಮುಟ್ಟುತ್ತದೆ ? ಇವತ್ತು ನಾವು ನಮ್ಮ ರಾಜ್ಯಾಂಗದಲ್ಲಿರತಕ್ಕ ಮಾರ್ಗವನ್ನು ಅನುಸರಿಸುತ್ತಾ ಇಲ್ಲ. 5ನೇ ಫೈನಾನ್ಸ್ ಕಮಿಷನಿಂದಲೂ ಸಹ ಮೈಸೂರು ರಾಜ್ಯದ ಜನರಿಗೆ ಅಹಿತವಾಗುತ್ತದೆ.

ಈಗ ಕೊಟ್ಟಂತಹ ಅಂಕಿ ಅಂಶಗಳನ್ನು ನಾವು ನೋಡಿದರೆ ನಾವು ಇದನ್ನು ಸಮರ್ಥಿಸಬೇಕೋ, ವಿರೋಧಿಸಬೇಕೋ ಎಂಬುದೇ ಗೊತ್ತಾಗುತ್ತಿಲ್ಲಾ. ಈಗ ಸರ್ಕಾರದವರು ಒಂದು ಕಡೆ ಬ್ಯಾಂಕ್ ನ್ಯಾಷನಲೈಸೇಷನ್ ಮಾಡಿದ್ದಾರೆ. ಇನ್ನೊಂದು ಕಡೆ ಸರ್ಕಾರದ ಪಬ್ಲಿಕ್ ಸೆಕ್ಟರ್ ಮಿಲ್ಲುಗಳನ್ನು ಜಾಯಿಂಟ್ ಸ್ಟಾಕ್ ಕಂಪೆನಿಗಳಿಗೆ ಕೊಡುವುದು ಡಿಮ್ಯಾಂಡ್ ನಂಬರ್ 54 ರಲ್ಲಿ ಗುಲ್ಬರ್ಗ ಮಿಲ್, ಪೋರ್ಸಿಲನ್ ಫ್ಯಾಕ್ಟರಿಗಳನ್ನೆಲ್ಲಾ Joint Stock Co., ಯಾಗಿ ಪರಿವರ್ತಿಸಿದ್ದೀರಿ. ಅದನ್ನೆಲ್ಲಾ ಜಾಯಿಂಟ್ ಸ್ಟಾಕ್ ಕಂಪೆನಿಯಂತೆ ನಡೆಸುತ್ತಿದ್ದಾರೆ. ಸರ್ಕಾರಿ ಹಣದಿಂದ ಷೇರ್ ಪರ್ಚೇಸ್ ಮಾಡಿ, ನಡೆಸತಕ್ಕವರು ಜಾಯಿಂಟ್ ಕಂಪೆನಿ. ಗುಲ್ಬರ್ಗಾ ಮಿಲ್ಲಿನಲ್ಲಿ ಅನ್-ಎಂಪ್ಲಾಯಿಮೆಂಟ್ ಪ್ರಾಬ್ಲೆಮ್ ಬಂದಿದೆ, ಬಹಳ ಕೆಟ್ಟು ಹೋಗಿದೆ, ಮತ್ತು ಅಲ್ಲರತಕ್ಕ ಕೂಲಿಗಾರರಿಗೆ ಅನುಕೂಲವಾಗಲಿ ಎಂದು ಹೇಳಿ ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡದ್ದು. ಅಗ್ರಿಮೆಂಟ್ ಸರ್ಕಾರ ಮತ್ತು ಮಿಲ್ ಮಾಲೀಕರ ನಡುವೆಯಲ್ಲಾ ಕೆ.ಆರ್. ಮಿಲ್ಸ್ ಅವರ ಕಡೆಯಿಂದ ಅಗ್ರಿಮೆಂಟ್. ಅಗ್ರಿಮೆಂಟ್ ಪ್ರಕಾರ 2500 ಲೇಬರರ್‌ಗಳನ್ನು ತೆಗೆದುಕೊಳ್ಳಬೇಕೆಂದು ಇದೆ ಅದರೆ ಇವತ್ತು ಅಲ್ಲ ಕೇವಲ ಒಂದು ಸಾವಿರ ಮಾತ್ರ ಇದ್ದಾರೆ. ಇನ್ನೂ ಕೆಲವು ವಿಷಯಗಳನ್ನು ಸಪ್ಲಿಮೆಂಟರಿ ಬಜೆಟ್‌ನಲ್ಲಿ ಹೇಳುತ್ತೇನೆ. ಡಿಮ್ಯಾಂಡ್ ನಂ. 27 ರಲ್ಲಿ ಐಟಮು ನಂ. 1 ಟಪು 6 :

> " Provision for the undermentioned Institutions and training and production sections which were started under tne annual plans of 1966-67 to 1968-69 under the Centrally sponsored sector and which have become normal activities of the Department (committed expenditure) from 1969-70 was not included in the current year's budget estimates, as the Social Welfare Department did not by oversight send proposals for making necessary provision :
>
> Certified School, Hassan
> Certified School, Bagalkot, Khanapur
> Dairy and Poultry Farming of certified School,
> Chalk Grayon unit at Certified School, Mysore.
> Printing unit at certified School, Hubli."

ಅಂದರೆ ನೀವು ಈ ಅಧಿಕಾರಿಗಳ ಮೇಲೆ ಯಾವ ತರದ ಕ್ರಮಗಳನ್ನು ತೆಗೆದುಕೊಂಡಿದ್ದೀರಿ ಎಂದು ಹೇಳಬೇಕು. ಇಂತಹ ನಿರ್ಲಕ್ಷ ಮಾಡತಕ್ಕ ಸಮಾಜಕಲ್ಯಾಣದ ಅಧಿಕಾರಿಗಳ ಮೇಲೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕು. ಅದನ್ನು ಯಾವ ದೃಷ್ಟಿಯಲ್ಲಿ ಸೇರಿಸಬೇಕಾಗಿತ್ತೋ ಅದನ್ನು ಮಾಡಿಲ್ಲ. ಅದರ ಮೇಲೆ ಉಗ್ರವಾದ ಕ್ರಮ ತೆಗೆದುಕೊಳ್ಳಬೇಕು. ಅದರಂತೆ ಕೆಲವು ಕೋಆಪರೇಷನ್ ಇಲಾಖೆಯ ಬಗ್ಗೆ ಕೂಡ ಇಲ್ಲಿ ಕೊಟ್ಟಿದ್ದೀರಿ. ಇವತ್ತಿನ ದಿವಸ ಕೋಆಪರೇಷನ್ ಮೂವ್‌ಮೆಂಟ್ ಎಂದು ತಿಳಿದುಕೊಂಡು ಈ ತರದ ಹಣ ಏನು ಖರ್ಚು ನಡೆದಿದೆ. ಅದನ್ನು ನೋಡಿದರೆ, ಇಡೀ ದೇಶವನ್ನು ನೆಲಸಮ ಮಾಡುತ್ತದೆ. ಇವತ್ತು ಮಾನ್ಯ ಎ.ಎನ್. ಪಾಟೀಲರು ಕೇಳಿದ ಪ್ರಶ್ನೆಗೆ

ಮಾನ್ಯ ಮಂತ್ರಿಯವರು ಉತ್ತರ ಕೊಡುತ್ತಾ, 22 ಲಕ್ಷ ರೂಪಾಯಿ ವ್ಯಾಪಾರದಲ್ಲಿ ನಷ್ಟ ವಾದುದು 9 ಲಕ್ಷ ರೂಪಾಯಿ ಎಂದು ಹೇಳಿದರು. ಅದು ಕೂಡ ಒಂದೂವರೆ ತಿಂಗಳಲ್ಲಿ ಇಷ್ಟು ನಷ್ಟವಾಗಿದೆ. ಕೋಆಪರೇಟೀವ್ ಸೆಕ್ಟಾರಿನಲ್ಲಿ ನಡೆಸತಕ್ಕ ಮಿಲ್ಲುಗಳು ಖಂಡಸಾರಿ ಮುಗರ್ ಫ್ಯಾಕ್ಟರಿಗಳು ಸರಿಯಾಗಿ ನಡೆಯದೇ ಇದ್ದರೆ ಅವುಗಳಲ್ಲಿ ಹಾಕಿರತಕ್ಕ ಕ್ಯಾಪಿಟಲ್ ಅಮೌಂಟ್ ಕಡಿತ ಇರತಕ್ಕ ಪರಿಸ್ಥಿತಿ ಇರುವುದಿಲ್ಲ. ಸಾಧಾರಣ ಮನುಷ್ಯನಿಗೆ ಸ್ವಂದಿ ಸಾಧಾಯು ಗಳ ಮಾರಾಟ ಮುಖಾಂತರ ತೆರಿಗೆಯನ್ನು ಹಾಕಿ ಅದರಿಂದ ಬಂದಂಥ ಹಣವನ್ನು ದೊಡ್ಡ ದೊಡ್ಡ ಜನರ ಬಾಯಲ್ಲಿ ಸರ್ಕಾರದವರು ಹಾಕುತ್ತಾರೆ. ಮತ್ತು ಅಂಥಾ ಫ್ಯಾಕ್ಟರಿಗಳಿಗೆ ಡೈರೆಕ್ಟರು, ಮ್ಯಾನೇಜಿಂಗ್ ಡೈರೆಕ್ಟರುಗಳನ್ನು ನೇಮಕ ಮಾಡುವಾಗ ತಮ್ಮವರಿಗೇ ನಹಕಾರ ನೀಡಿ ತಮಗೆ ಬೇಕಾದವರನ್ನು ನೇಮಕ ಮಾಡುತ್ತಾರೆ. ಅವರು ಅಲ್ಲಿ ಮಾಡತಕ್ಕ ಅನ್ಯಾಯಗಳನ್ನು ನಾವು ನೋಡುತ್ತಿದ್ದೇವೆ. ಈ ರೀತಿ ಮಾಡುವುದಾದರೆ ಕೋಆಪರೇಟೀವ್ ಸೆಕ್ಟಾರಿನಲ್ಲಿರತಕ್ಕ ಮಿಲ್ಲುಗ ಳಾಗಲೀ, ಫ್ಯಾಕ್ಟರಿಗಳಾಗಲೀ ಮುಂದೆ ಬರುವುದಿಲ್ಲ. ಈ ಕೋಆಪರೇಟೀವ್ ಸೆಕ್ಟಾರ್ ಸರಿಯಾಗಿ ನಡೆಯಬೇಕಾದರೆ ಕೋಆಪರೇಟೀವ್ ಆಕ್ಟನ್ನು ತಿದ್ದುಪಡಿ ಮಾಡಬೇಕು. ಈ ಸಹಕಾರ ಸಂಘಗ ಳಿಂದ ದೊಡ್ಡ ದೊಡ್ಡವರಿಗೆ ಅನುಕೂಲವಾಗಿದೆಯೇ ವಿನಾ ಕೆಳಮಟ್ಟದಲ್ಲಿರುವ ಕೂಲಿಕಾರರಿಗೆ ಸಣ್ಣ ಸಣ್ಣ ರೈತರಿಗೆ ಅಷ್ಟು ಹೆಚ್ಚಿನ ಅನೂಕೂಲವಾಗುತ್ತಿಲ್ಲ. ಈಗ ಉದಾಹರಣೆಗೆ ಹೇಳಬೇಕಾದರೆ ಒಂದು ಟ್ರಾಕ್ಟರ್ ಕೊಂಡುಕೊಳ್ಳಬೇಕಾದರೆ 30 ಸಾವಿರ ರೂಪಾಯಿಗಳನ್ನು ಸರ್ಕಾರದವರು ಸೊಸೈಟಿಗಳ ಮುಖಾಂತರ ಕೊಡುತ್ತಾರೆ. ಅಂಥಾದನ್ನು ದೊಡ್ಡ ಮನುಷ್ಯನಿಗೆ ಕೊಡುತ್ತಾರೆಯೇ ವಿನಾ ಆಮ ಸಣ್ಣ ರೈತನಿಗೆ ಸಿಕ್ಕುವುದಿಲ್ಲ. ಸಣ್ಣ ರೈತನಿಗೆ ಅನುಕೂಲವಾಗತಕ್ಕಂಥವುಗಳು ಯಾವ ಯೋಜನೆಗಳೂ ಇಲ್ಲ. ಒಂದು ಎಕರೆ ಜಮೀನಿರತಕ್ಕ ರೈತನಿಗೆ 100 ರೂಪಾಯಿ ಸಾಲ ಕೊಡುತ್ತಾರೆ. ಆದರಿಂದ ಏನಾಗುತ್ತದೆ ? 100 ಕ್ಕೆ 80 ರಷ್ಟು ದೊಡ್ಡ ದೊಡ್ಡ ಜನಗಳಿಗೆ ಅನುಕೂಲವಾಗುತ್ತಿದೆಯೇ ವಿನಾ ಸಾಧಾರಣವಾದ ಜನಗಳಿಗೆ ಪೂರ್ತಿಯಾಗಿ ಅನುಕೂಲವಾಗಲೀ ಲಾಭವಾಗಲೀ ಆಗುವುದಿಲ್ಲ. ಇನ್ನೊಂದು ಕಡೆ ಕೋಆಪರೇಟೀವ್ ಸೆಕ್ಟಾರಿನಲ್ಲಿ ನಡೆಯುತಕ್ಕ ಕೆಲವು ಕೈಗಾರಿಕೆಗಳನ್ನು ಮತ್ತು ಕೆಲವು ಸರ್ಕಾರಿ ಕೈಗಾರಿಕೆಗಳನ್ನೂ ಜಾಯಿಂಟ್‌ಸ್ಟಾಕ್ ಕಂಪನಿಗಳಾಗಿ ಮಾಡಿ ಅವುಗಳಿಗೆ ಸರ್ಕಾರದವರು ಸಾಲದ ರೂಪದಲ್ಲಿ ಮತ್ತು ಸಬ್ಸಿಡಿ ರೂಪದಲ್ಲಿ ಧನ ಸಹಾಯ ಮಾಡುತ್ತಿದ್ದಾರೆ. ಜಾಯಿಂಟ್‌ಸ್ಟಾಕ್ ಕಂಪನಿಗಳು ಸರ್ಕಾರದ ಸಾಲದಿಂದ ನಡೆಯುತ್ತಿವೆ. ಪ್ರಜಾಪ್ರಭುತ್ವದಲ್ಲಿ ಸೊಷಿಯಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿಯನ್ನು ನಿರ್ಮಾಣ ಮಾಡುತ್ತೇವೆ ಎಂದು ಹೇಳಿ ಸರ್ಕಾರ ಜಾಯಿಂಟ್‌ಸ್ಟಾಕ್ ಕಂಪೆನಿಯನ್ನು ನಡೆಸಿದರೆ ಇದು ಸರಿಯೇ ಎಂದು ನಾನು ಕೇಳುತ್ತೇನೆ.

ಇನ್ನು ಕೊನೆಯದಾಗಿ ಸರ್ಕಾರಕ್ಕೆ ಸಂಬಂಧಪಟ್ಟ ಕೆಲವು ಕೇಸುಗಳಲ್ಲಿ ಆರ್ಗ್ಯೂ ಮಾಡುವುದ ಕ್ಕೋಸ್ಕರ ಸರ್ಕಾರದವರು ಅಡ್ವೋಕೇಟರುಗಳನ್ನು ನೇಮಿಸಿದ್ದಾರೆ. ಅದಕ್ಕಾಗಿ ಸುಮಾರು 8 ಲಕ್ಷ ರೂಪಾಯಿಗಳಿಗಿಂತ ಜಾಸ್ತಿ ಖರ್ಚು ಮಾಡಿದ್ದಾರೆ. ಈ ವಿಷಯದಲ್ಲಿ ನನ್ನ ಅಭಿಪ್ರಾಯವನ್ನು ಹೇಳುವುದಾದರೆ ಬರೀ ವೇಸ್ಟ್ ಎಂದು ನಾನು ತಿಳಿದುಕೊಂಡಿದ್ದೇನೆ. ಕೃಷ್ಣಾಗೋದಾವರಿ ವಾಟರ್ ಡಿಸ್‌ಪ್ಯೂಟಿಗೆ ಸಂಬಂಧಪಟ್ಟಹಾಗೆ ಟ್ರಿಬ್ಯುನರ್‌ನಲ್ಲಿ ಆರ್ಗ್ಯೂ ಮಾಡಲು ಮಹಾರಾಷ್ಟ್ರದ ಒಬ್ಬರು ರಿಟೈರ್ಡ್ ಜಡ್ಜ್ ಅನ್ನು ನೇಮಕ ಮಾಡಿಕೊಂಡಿದ್ದಾರೆ. ಅವರು ಮಹಾರಾಷ್ಟ್ರದವರಾಗಿರು ವುದರಿಂದ ಅವರು ಮಹಾರಾಷ್ಟ್ರದ ಹಿತವನ್ನು ಕಾಯ್ದುಕೊಳ್ಳಬೇಕಾಗುತ್ತದೆ. ಅಂಥಾ ಸಂದರ್ಭದಲ್ಲಿ ಅವರನ್ನು ನಮ್ಮ ಮೈಸೂರು ಸರ್ಕಾರದವರು ನೇಮಿಸಿಕೊಂಡಿರುವುದರಿಂದ ಅವರ ವಿಚಾರದಲ್ಲಿ ಸ್ವಲ್ಪ ಅನುಮಾನವಾಗುತ್ತದೆ, ಆದ್ದರಿಂದ ದಯವಿಟ್ಟು ಸರ್ಕಾರದವರು ಅದನ್ನು ಪುನರ್ ಪರಿಶೀಲನೆ ಮಾಡಬೇಕು. ಮತ್ತು ದೆಹಲಿಯಲ್ಲಿ ನಮ್ಮ ಸರ್ಕಾರದ ಪರವಾಗಿಯೇ ನೇಮಕಗೊಂಡ ರಾಯರು ಇರುವಾಗ ದೆಹಲಿಯಲ್ಲಿ ಲೀಗಲ್ ಕೌನ್ಸಿಲ್‌ನವರಿಗೆ ಅಸಿಸ್ಟ್ ಮಾಡಲು ಒಂದು ದಿವಸಕ್ಕೆ 400 ರೂಪಾಯಿಗಳನ್ನು ಕೊಟ್ಟು ಒಬ್ಬರು ವಕೀಲರನ್ನು ಇಟ್ಟುಕೊಳ್ಳುವ ಅವಶ್ಯಕತೆ ಏನಿತ್ತು ? ಇದರಲ್ಲಿ ಯಾವ ನೀತಿಯೂ ನಿಯಮವೂ ಇಲ್ಲ. ಈ ರೀತಿ ಇನ್ನೊಬ್ಬರು ವಕೀಲರನ್ನು ನೇಮಿಸಿ ಕೊಂಡಿರುವುದನ್ನು ನಾನು ಬಹಳ ಕಟುವಾಗಿ ಟೀಕಿಸುತ್ತೇನೆ.

ಇನ್ನು ಇಪ್ಪತ್ತು ಪ್ರಶ್ನೋತ್ತರ ವೇಳೆಯಲ್ಲಿ ಬೀದರ್ ಸಹಕಾರ ಸಕ್ಕರೆ ಕಾರ್ಖಾನೆಯ ವಿಷಯ ಬಂದಿತ್ತು. ಅದರಲ್ಲಿ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ಆ ಕಾರ್ಖಾನೆಗೆ 9 ಲಕ್ಷ ಚಿಲ್ಲರೆ ರೂಪಾಯಿ ಗಳು ನಷ್ಟವಾಗಿದೆ ಎಂದು ತಿಳಿಸಿದ್ದಾರೆ. 517 ಜನ ಕಬ್ಬು ಬೆಳೆಗಾರರಿಗೆ ಪರ್ಮಿಟ್ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಈ ಸಹಕಾರಿ ಸಕ್ಕರೆ ಕಾರ್ಖಾನೆಯ ವಿಚಾರದಲ್ಲಿ ಕೆಲವು ಅನುಮಾನಗಳು ವ್ಯಕ್ತವಾಗುತ್ತವೆ. ಆದ್ದರಿಂದ ಸರ್ಕಾರದವರು ಇದಕ್ಕೆ ಯಾರಾದರೂ ಒಬ್ಬರು ಜುಡಿಷಿಯಲ್ ಆಫೀಸರನ್ನು ನೇಮಕ ಮಾಡಿ ಈ ಸಹಕಾರಿ ಸಕ್ಕರೆ ಕಾರ್ಖಾನೆ ನತ್ಯವಾಗಿ ದೇಶ ಕ್ಕಾಗಿ ಕೆಲಸ ಮಾಡುತ್ತಿದೆಯೇ, ದೇಶದ ಹಿತವನ್ನು ಕಾಪಾಡುತ್ತದೆಯೇ ಇತ್ಯಾದಿ ವಿಷಯಗಳನ್ನು

(ಶ್ರೀ ಎಂ. ನಾಗಪ್ಪ)

ತನಿಖೆ ಮಾಡಿಸಬೇಕೆಂಬುದಾಗಿ ನಾನು ಹೇಳುತ್ತೇನೆ. ಈ ಸಪ್ಲಿಮೆಂಟರಿ ಎಕ್ಸಸ್ ಗ್ರ್ಯಾಂಟನ್ನು ವಿರೋಧ ಮಾಡಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಕೆ. ರಾಜಯ್ಯಶೆಟ್ಟಿ (ಚಿಕ್ಕನಾಯಕನಹಳ್ಳಿ).—ಮಾನ್ಯ ಅಧ್ಯಕ್ಷರೇ, ಈಗ ಸರ್ಕಾರದವರು ನಮ್ಮ ಮುಂದಿಟ್ಟಿರುವ ಸಪ್ಲಿಮೆಂಟರಿ ಎಸ್ಟಿಮೇಟನ್ನು ನಾನು ಪೂರ್ಣವಾಗಿ ವಿರೋಧಿಸುತ್ತೇನೆ. ಸಾಮಾನ್ಯವಾಗಿ ಯಾವ ಒಂದು ಸರ್ಕಾರವೇ ಆಗಲಿ ಸಪ್ಲಿಮೆಂಟರಿ ಡಿಮ್ಯಾಂಡನ್ನು ಇಟ್ಟ ಪಕ್ಷದಲ್ಲಿ ಅದರಲ್ಲಿರತಕ್ಕ ಹಣವನ್ನು ಪೂರ್ಣವಾಗಿ ಖರ್ಚು ಮಾಡುವ ಪಕ್ಷದಲ್ಲಿ ಮತ್ತು ಪೂರ್ಣ ಹಣವನ್ನು ಖರ್ಚು ಮಾಡುವ ಶಕ್ತಿ ಇದ್ದರೆ ಆಗ ಮಾತ್ರ ಸಪ್ಲಿಮೆಂಟರಿ ಎಸ್ಟಿಮೇಟನ್ನು ಇಡಬೇಕು. ಈಗ ಇಲ್ಲಿ ಇಟ್ಟಿರುವ ಬೇಡಿಕೆಗಳಲ್ಲಿ ಕೆಲವು ಬೇಡಿಕೆಗಳಿಗೆ ಕೇಂದ್ರ ಸರ್ಕಾರದಿಂದ ಬಿಡುಗಡೆ ಹಣ ಎಂದು ತಿಳಿಸುತ್ತಾರೆ, ಕೆಲವು ಬೇಡಿಕೆಗಳಿಗೆ ಅಡ್ಜಸ್ಟ್‌ಮೆಂಟ್ ತೋರಿಸಿದ್ದಾರೆ. ಮತ್ತು ಕೆಲವು ಹೊಸ ಬೇಡಿಕೆಗಳಿಗೆ ಸರ್ಕಾರ ಮಾಡಬೇಕಾದ ಖರ್ಚನ್ನು ಇವರಲ್ಲಿ ತೋರಿಸಿದ್ದಾರೆ. ಹಿಂದಿನ ಒಂದು ಸಪ್ಲಿಮೆಂಟರಿ ಡಿಮ್ಯಾಂಡ್ ಇಲ್ಲಿ ಚರ್ಚೆಯಾಗಿ ಆದಕ್ಕೆ ಈ ಮನೆಯವರು ಅನುಮತಿ ಯನ್ನು ಕೊಟ್ಟ ಮೇಲೆ ಸರ್ಕಾರದವರು ಮಾಡಿರುವ ಕೆಲಸವನ್ನು ನೋಡಿದರೆ ಆ ಡಿಮ್ಯಾಂಡಿನಲ್ಲಿ ಏನೇನು ಕೆಲಸಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದರೋ ಆ ಕೆಲಸಗಳನ್ನು ಮಾಡಿಲ್ಲ. ಸಪ್ಲಿಮೆಂಟರಿ ಡಿಮ್ಯಾಂಡ್ ಆಗಲೀ, ಬಡ್ಜೆಟ್ ಡಿಮ್ಯಾಂಡ್ ಆಗಲೀ ಅದರಲ್ಲಿ ಯಾವ ಯಾವ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ನಮೂದು ಮಾಡಿ ಅವುಗಳ ಬಗ್ಗೆ ಈ ಮನೆಯಲ್ಲಿ ಚರ್ಚೆಯಾಗಿ ಅವುಗಳಿಗೆ ಹಣ ಮಂಜೂರಾಗಿತ್ತೋ ಆ ಪ್ರಕಾರ ಸರ್ಕಾರದವರು ಕೆಲಸಗಳನ್ನು ಮಾಡಿಲ್ಲ. ಈ ವಿಷಯ 1969ನೇ ಆಡಿಟ್ ವರದಿಯನ್ನು ನೋಡಿದರೆ ತಮಗೆ ಗೊತ್ತಾಗುತ್ತದೆ. ಅದರಲ್ಲಿ :

> "Supplementary provision of Rs. 44.05 crores was obtained under 43 grants/appropriations. The details given in Appendix I show that—
>
> (i) in twelve grants/appropriations supplementary provision of Rs. 143.51 lakhs obtained in December 1967 and March 1968 proved unnecessary, as the expenditure did not even come up to the original provision ; in seven cases, supplementary provision of Rs. 114.93 lakhs had been obtained in March 1968.
>
> (ii) in two grants and two appropriations, supplementary provision proved excessive ; against the total suplementary provision of Rs. 1,863.08 lakhs, Rs. 1,477.47 lakhs remained unutilised. In three of these cases, Rs. 1,831.08 lakhs had been obtained in March 1968, and
>
> (iii) the supplementary provision proved inadequate in three grants and one appropriation. In three cases while the additional provision made was Rs. 2,000. 29 lakhs, the actual expenditure exceeded the total provision (including the supplementary provision) by Rs. 724. 54 lakhs. "

ಎಂದು ಹೇಳಿದ್ದಾರೆ. ಇದನ್ನು ನೋಡಿದರೆ ಸಪ್ಲಿಮೆಂಟರಿ ಗ್ರ್ಯಾಂಟ್ ಆಗಲೀ ಬಡ್ಜೆಟ್ ಗ್ರ್ಯಾಂಟ್ ಆಗಲೀ ಇದನ್ನು ಯಾವ ರೀತಿ ಖರ್ಚು ಮಾಡಿದ್ದಾರೆ ಎಂಬುದು ತಮಗೆ ಗೊತ್ತಾಗುತ್ತದೆ. 2—3 ತಿಂಗಳಿಗೆ ಒಂದು ಸಾರಿ ಸಪ್ಲಿಮೆಂಟರಿ ಎಸ್ಟಿಮೇಟನ್ನು ಈ ಸಭೆಯಮುಂದೆ ತರುತ್ತಿದ್ದಾರೆ. ಸರ್ಕಾರದವರು ಈ ರೀತಿ ಖರ್ಚು ಮಾಡತಕ್ಕಂಥ ಹಣದಿಂದ ಏನಾದರು ಪ್ರತಿಫಲ ಬರುತ್ತದೆಯೇ ಎಂದು ಲೆಕ್ಕ ಹಾಕಿದರೆ ಸರ್ಕಾರಕ್ಕೆ ನಷ್ಟವಾಗುತ್ತಿರುವುದು ನಮಗೆ ಕಾಣುತ್ತಿದೆ. ಇವೊತ್ತು ಈ ಸಪ್ಲಿಮೆಂಟರಿ ಎಸ್ಟಿಮೇಟಿನಲ್ಲಿ ಸರ್ಕಾರದವರು ಕೇಳತಕ್ಕಂಥ ಹಣ ಏನಿದೆ ಇದರಲ್ಲಿ ಬಹುಭಾಗ ಕೈಗಾರಿಕೆ ಮತ್ತು ಸಹಕಾರ ಸಂಘಗಳಿಗೆ ಸಂಬಂಧಪಟ್ಟದ್ದು. ಈ ಸಪ್ಲಿಮೆಂಟರಿ ಎಸ್ಟಿಮೇಟಿನಲ್ಲಿ ಸೂಚಿಸಿರುವ ಹಾಗೆ ಸರ್ಕಾರದವರು ಏನು ಹಣ ಸಹಾಯವನ್ನು ಸಾಲದ ರೂಪದಲ್ಲಿ ಯಾರು ಯಾರಿಗೆ

ಕೊಡುತ್ತಾರೆಯೋ ಅದು ಮತ್ತೆ ವಾಪಸ್ಸು ಬರುವ ಹಾಗೆ ಕಾಣುವುದಿಲ್ಲ. ಇಂಥಾ ಹೊಸ ಸಲಹೆಗಳನ್ನು ಸರ್ಕಾರದವರು ಸೃಷ್ಟಿ ಮಾಡುತ್ತಿದ್ದಾರೆ.

ತಮಗೆ ಬೇಕಾದವರ ದಾಕ್ಷಿಣ್ಯಕ್ಕೆ ಕಟ್ಟುಬಿದ್ದು, ಅಥವಾ ಅವರ ಪ್ರಭಾವಕ್ಕೆ ಒಳಗಾಗಿ ಹಣವನ್ನು ಮಂಜೂರು ಮಾಡುತ್ತಿದ್ದೀರಿ. 54ನೇ ಡಿಮ್ಯಾಂಡ್‌ನಲ್ಲಿರತಕ್ಕಂಥ ಲೋನ್ಸ್ [ಅಂಡ್ ಅಡ್ವಾನ್ಸ್‌ಸ್‌ನಲ್ಲಿರತಕ್ಕಂಥ ಎರಡು ಮೂರು ಐಟಮ್‌ಗಳನ್ನು ನೋಡುವುದಾದರೆ, ಕೋಆಪರೇಟಿವ್ ಇರಾಖೆಯ ಮೂಲಕ ಸೊಸೈಟಿಗಳಿಗೆ ಸಾಲವನ್ನು ಕೊಡುತ್ತಿದ್ದೀರಿ. ಇದುವರೆಗೆ ಸುಮಾರು 46 ಕೋಟಿ ರೂಪಾಯಿಗಳಷ್ಟನ್ನು ಸಹಕಾರಸಂಘಗಳಿಗೆ ಸಾಲದ ರೂಪದಲ್ಲಿ, ಷೇರ್ ರೂಪದಲ್ಲಿ ಕೊಟ್ಟಿದ್ದೀರಿ. ನಾವೇನಾದರು ಕೇಳಿದರೆ ಆ ಸೊಸೈಟಿಗಳಿಗೆ ಸಾಲ ಮರುಪಾವತಿ ಮಾಡುವ ಶಕ್ತಿ ಇದೆ ಎಂದು ಹೇಳುತ್ತೀರಿ. ಇವತ್ತಿನದಿವಸ ಸೊಸೈಟಿಗಳಿಂದ ಎಷ್ಟು ಬಡ್ಡಿ ಸರ್ಕಾರಕ್ಕೆ ಬರುತ್ತಿದೆ, ಎಷ್ಟು ಸಾಲ ಮರುಪಾವತಿಯಾಗಿದೆ ಎಂಬ ಲೆಕ್ಕ ಹಾಕಿದರೆ ಬರಬೇಕಾಗಿದ್ದಾರಲ್ಲಿ ಅರ್ಧಭಾಗ ಕೂಡ ಬರುತ್ತಿಲ್ಲವೆಂದು ಹೇಳಬಹುದು. ಕೊಟ್ಟ ಸಾಲ ವಾಪಸ್ ಬರುವುದಿಲ್ಲವೆಂದು ತಿಳಿದಿದ್ದರೂ ಕೂಡ ಪ್ರತಿವರ್ಷವೂ ಕೂಡ 8–10 ಕೋಟಿ ರೂಪಾಯಿಗಳಷ್ಟು ಹೆಚ್ಚು ಹಣವನ್ನು ಕೊಡುತ್ತಿದ್ದೀರಿ. ಪ್ರತಿಸಲ ಬಡ್ಜೆಟ್ ಮಂಡಿಸುವಾಗಲೂ ಕೂಡ ಸರ್ಕಾರದ ಅಸೆಟ್ಸ್ ಮಾಡಿರುವ ಸಾಲಕ್ಕಿಂತಲೂ ಜಾಸ್ತಿ ಇದೆ ಎಂದು ಆರ್ಥಿಕ ಮಂತ್ರಿಗಳು ಹೇಳುತ್ತಿರುತ್ತಾರೆ. ಈ ಒಂದು ಬಡ್ಜೆಟ್ ವ್ಯವಹಾರವನ್ನು ಏನೂ ತಿಳಿಯದ ಕುರುಡರು ಒಪ್ಪಿಕೊಳ್ಳಬೇಕಾಗಿದೆ. ಇವತ್ತಿನದಿವಸ ಸಹಕಾರ ಇಲಾಖೆಯಲ್ಲಿ ನಡೆಯುತ್ತಿರುವ ವ್ಯವಹಾರಗಳನ್ನು ನೋಡಿದರೆ, ಈ ಸಹಕಾರ ಸಂಘಗಳಿಗೇ ನಂಜುಕಾರ ಬಂದಿದೆಯೋ ಈ ದೇಶದಲ್ಲಿ ಸಹಕಾರ ಎನ್ನುವುದು ನಾಶವಾಗುತ್ತಿದೆಯೋ ಎಂಬ ಅನುಮಾನ ಕಂಡುಬರುತ್ತಿದೆ. ಕೇಂದ್ರಸರ್ಕಾರದವರು ಹೊಸ ಹೊಸ ಸ್ಕೀಮುಗಳನ್ನು ತೆಗೆದುಕೊಳ್ಳಲು ಪ್ರತಿವರ್ಷವೂ ನಮ್ಮ ಸರ್ಕಾರಕ್ಕೆ ಹತ್ತಾರು ಕೋಟಿ ರೂಪಾಯಿಗಳನ್ನು ಸಾಲವಾಗಿ ಕೊಡುತ್ತಲೇ ಇದ್ದಾರೆ. ಆ ಒಂದು ಸಾಲವನ್ನು ಮರುಪಾವತಿ ಮಾಡುವ ಜವಾಬ್ದಾರಿ ಯಾರದು ಎಂಬುದನ್ನು ಮಾನ್ಯ ಆರ್ಥಮಂತ್ರಿಗಳು ಹೇಳಬೇಕು. ಈ ಸಹಕಾರಸಂಘಗಳು ಇರಬೇಕೇ ಅಥವಾ ಬೇಡವೇ ಎಂಬುದನ್ನು ಯೋಚನೆ ಮಾಡಬೇಕಾಗಿದೆ. ನಮ್ಮ ಜಿಲ್ಲೆಯ ಹತ್ತು ತಾಲ್ಲೂಕ್‌ಗಳಲ್ಲಿ ಹತ್ತು ಅಗ್ರಿಕಲ್ಚರ್ ಮಾರ್ಕೆಟಿಂಗ್ ಸೊಸೈಟಿಗಳು ಇವೆ. ನಿರಾ ತಾಲ್ಲೂಕ್ ಮಾರ್ಕೆಟಿಂಗ್ ಸೊಸೈಟಿಯಲ್ಲಿ 2 ಲಕ್ಷ ರೂಪಾಯಿಗಳು ಷಾರ್ಟ್‌ಫೀಜ್ ಬಂದಿದೆ. ತುರುವೇಕೆರೆ ಮಾರ್ಕೆಟಿಂಗ್ ಸೊಸೈಟಿಯಲ್ಲಿ ಒಂದು ಲಕ್ಷ ರೂಪಾಯಿಗಳು ಷಾರ್ಟ್‌ಫೀಜ್ ಬಂದಿದೆ. ಕುಣಿಗಲ್ ಮಾರ್ಕೆಟಿಂಗ್ ಸೊಸೈಟಿಯಲ್ಲಿ ಎರಡು–ಮೂರೂ ಲಕ್ಷದಷ್ಟು ಷಾರ್ಟ್‌ಫೀಜ್ ಬಂದಿದೆ. ಎರ್ಲಾ ಸೊಸೈಟಿಗಳ ಪರಿಸ್ಥಿತಿಯೂ ಕೂಡ ಇದೇ ರೀತಿ ಆಗಿದೆ. ಎರ್ಲಾ ಸೊಸೈಟಿಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಸುಮಾರು 50 ಲಕ್ಷ ರೂಪಾಯಿಗಳಷ್ಟು ಲುಕ್ಸಾನಾಗಿದೆ ಎಂದು ಹೇಳಬಹುದು. ಸುಮಾರು ಅರ್ಧಭಾಗದಷ್ಟು ಸಹಕಾರ ಸಂಘಗಳು ಚೆನ್ನಾಗಿ ನಡೆಯುತ್ತಿಲ್ಲ. ಈ ಕಾರಣದಿಂದ ಪ್ರತಿವರ್ಷ ಹತ್ತು–ಹನ್ನೆರಡು ಕೋಟಿ ರೂಪಾಯಿಗಳಷ್ಟು ಹೊಸದಾಗಿ ಸಾಲ ಕೊಡುವುದು ಸರಿಯಲ್ಲ ಎಂದು ಹೇಳಬೇಕಾಗಿದೆ.

ಇನ್ನು "Loans to Karnatak Co-operative Publishing House Limited, Bangalore for compilation of Junior Encyclopaedia in Kannada (New head of account)"

ಇದಕ್ಕೆ 9 ಲಕ್ಷ ರೂಪಾಯಿಗಳನ್ನು ಪ್ರೊವೈಡ್ ಮಾಡಿದ್ದೀರಿ. ಈ ರೀತಿ ಇದಕ್ಕೆ ಸಾಲ ಕೊಡಲು ಮಂತ್ರಿಗಳ ಪ್ರಭಾವ ಇವೆ ಎಂದು ಕಾಣುತ್ತದೆ. ಮಂತ್ರಿಗಳ ಪ್ರಭಾವದ ಮೇಲೆ ಈ ರೀತಿ 9 ಲಕ್ಷ ರೂಪಾಯಿಗಳನ್ನು ಕೊಡುವುದು ಸರಿಯಲ್ಲ, ಇದನ್ನು ತಡೆಹಿಡಿಯಬೇಕು. ಇವತ್ತಿನ ದಿವಸ ಪಠ್ಯ ಪುಸ್ತಕಗಳನ್ನು ಸಕಾಲದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಒದಗಿಸುವುದಕ್ಕೆ ಹಣ ಇಲ್ಲವೆಂದು ಹೇಳುತ್ತೀರಿ. ಆದರೆ ಕರ್ನಾಟಕ ಕೋಆಪರೇಟಿವ್ ಪಬ್ಲಿಷಿಂಗ್ ಹೌಸ್ ಲಿಮಿಟೆಡ್‌ಗೆ 9 ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಡುತ್ತಿದ್ದೀರಿ. ಇದಕ್ಕೆ ವಿದ್ಯಾಮಂತ್ರಿಗಳು ಮತ್ತು ಶ್ರೀ ಬೊಮ್ಮಾಯಿ ಅವರು ಡೈರೆಕ್ಟರ್‌ಗಳಾಗಿದ್ದಾರೆಂದು ಕಾಣುತ್ತದೆ. ಅದಕ್ಕಾಗಿ ಕೊಡುತ್ತಿದ್ದೀರಿ. ಪ್ರಭಾವದ ಮೇಲೆ ಕೊಡುವುದು ಸರಿಯಲ್ಲ. ಇದನ್ನು ತಡೆಹಿಡಿಯಬೇಕೆಂದು ಹೇಳುತ್ತೇನೆ. ಇದೇ ರೀತಿ ಎಂ.ಎಸ್.ಕೆ ಮಿಲ್‌ಗೆ 46 ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಡುತ್ತಿದ್ದೀರಿ. ಮಾನ್ಯ ಆರ್ಥಮಂತ್ರಿಗಳು ಹೋದವರ್ಷ ಈ ಮಿಲ್‌ನವರು ಡ್ಯಾಮೇಜ್ ಮಾಡಿರಲಿಲ್ಲ, ಅದಕ್ಕಾಗಿ ಈಗ ಸೇರಿಸಬೇಕಾಗಿದೆ ಎಂದು ಹೇಳಿದರು. ಇಷ್ಟೊಂದು ಸಾಲ ಕೊಡುತ್ತಿದ್ದರೂ ಕೂಡ ಆ ಮಿಲ್ ನಷ್ಟದಲ್ಲಿಯೇ ನಡೆಯುತ್ತಿದೆ. ಆ ಮಿಲ್‌ನಲ್ಲಿರುವ ಮಿಷಿನರಿ 15ನೇ ಸೆಂಚುರಿಯದ್ದು ಎಂದು ಕಾಣುತ್ತದೆ. ಈ ಮಿಲ್‌ನ್ನು ನಡೆಸಬೇಕೇ ಬೇಡವೆ ಎಂಬ ಬಗ್ಗೆ ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ನೇಮಿಸಿದಾಗ ಆ ಕಮಿಟಿಯವರು ಈ ಮಿಲ್‌ನ್ನು ಸ್ಕ್ಯಾಪ್ ಮಾಡಬೇಕೆಂದು ಹೇಳಿದ್ದರು. ಆದರೆ ಈಗ ಮತ್ತೆ

(ಶ್ರೀ ಎಂ. ನಾಗಪ್ಪ)

ಆ ಮಿಲ್‌ನ್ನು ನಡೆಸುವ ಜವಾಬ್ದಾರಿಯನ್ನು ಶ್ರೀ ನಿಜಲಿಂಗಪ್ಪನವರ ಸ್ನೇಹಿತರಾದ ಕೆವೂರಿವಾಲ ಎಂಬುವರು ತೆಗೆದುಕೊಂಡಿದ್ದಾರೆಂದು ತಿಳಿದಿದ್ದೇನೆ. ಈ ಮಿಲ್‌ಗೆ ಮತ್ತೆ ಮತ್ತೆ ಸಾಲ ಕೊಡುವುದು ಸರಿಯಲ್ಲ ಎಂದು ದುಃಖದಿಂದ ಹೇಳಬೇಕಾಗಿದೆ. "Loans to Mysore Procelains Limited"—ಇದಕ್ಕೆ ಮತ್ತೆ ಸಾಲ ಕೊಡುತ್ತಿದ್ದೀರಿ. ಈ ಕಾರ್ಖಾನೆಯಿಂದ ಲಾಭವೇ ಬರುತ್ತಿಲ್ಲ ವಾದ್ದರಿಂದ ಮತ್ತೆ ಸಾಲ ಕೊಡುವುದು ಸರಿಯೇ ಎಂಬುದನ್ನು ಯೋಚನೆ ಮಾಡಬೇಕು. ಎನ್.ಜಿ.ಇ.ಎಫ್.ಗೆ ಸಾಲ ಕೊಡುತ್ತಿದ್ದೀರಿ. ಈ ಒಂದು ಕಾರ್ಖಾನೆಗೆ ಬೆಹಳ ಹಣವನ್ನು ತೊಡಗಿಸುತ್ತಿದ್ದೀರಿ ಜರ್ಮನ್ ತಜ್ಞರು ಇಲ್ಲಿ ಇದ್ದಾರೆ. ಇವರ ನೇತೃತ್ವದಲ್ಲಿ ಸಾಮಾನುಗಳು ತಯಾರಾಗುತ್ತಿವೆ. ಇವರಿಗೆ ಬಹಳಷ್ಟು ಸಂಬಳ ಕೊಟ್ಟು ಇಟ್ಟುಕೊಂಡಿದ್ದೀರಿ. ಈ ಕಾರಣದಿಂದ ಈ ಕಾರ್ಖಾನೆಯಿಂದ ಸರ್ಕಾರಕ್ಕೆ ಲಾಭ ಬರುತ್ತಿಲ್ಲ. ಅದೇ ಕೊಯಮತ್ತೂರಿನಲ್ಲಿರುವ ಕಾರ್ಖಾನೆಯಲ್ಲಿ ಎರ್ನಾ ಭಾರತೀಯ ತಾಂತ್ರಿಕ ತಜ್ಞರೇ ಇದ್ದಾರೆ. ಮತ್ತು ಆ ಕಾರ್ಖಾನೆ ಲಾಭದಲ್ಲಿ ನಡೆಯುತ್ತಿದೆ. ಇನ್ನು ಮುಂದೆಯಾದರೂ ಕೂಡ ಹೊರಗಿನ ತಾಂತ್ರಿಕ ತಜ್ಞರನ್ನು ಇಟ್ಟುಕೊಂಡು ಅವರಿಗೆ ಅನಾವಶ್ಯಕವಾಗಿ ಸಂಬಳ ಕೊಡುವುದನ್ನು ನಿಲ್ಲಿಸಬೇಕು. ಕೆ.ಟಿ.ಸಿ. ಮಿಲ್, ಹುಬ್ಬಳ್ಳಿಗೆ 8 ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಡುತ್ತಿದ್ದೀರಿ. ಕಳೆದ ಎರಡು ಮೂರೂ ವರ್ಷಗಳಿಂದ ಈ ಮಿಲ್ ಲಕ್ವಾನಿಂದ ನಡೆಯುತ್ತಿದೆ. ಲಾಭ ಕೊಡುವ ಸ್ಥಿತಿಯಲ್ಲಿ ಆ ಮಿಲ್ ಇಲ್ಲ. ಆದಕಾರಣ ಆ ಮಿಲ್‌ನಲ್ಲಿ ಹೊಸದಾಗಿ ಬಂಡವಾಳವನ್ನು ಸರ್ಕಾರದವರು ಕೊಡುವುದು ಅನ್ಯಾಯ. ಈ ಮಿಲ್‌ಗೆ ಕೊಡುವ ಸಾಲವನ್ನು ನಿಲ್ಲಿಸಬೇಕೆಂದು ಹೇಳುತ್ತೇನೆ. "Loans to Co-operative Societies including House Building Societies" ಗೆ—ಮೂರು ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೀರಿ. ಸಹಕಾರದಲ್ಲಿ ನನಗೆ ನಂಬಿಕೆ ಇಲ್ಲ. ಇವತ್ತಿನದಿವಸ ಸಹಕಾರ ಚಳುವಳಿಯನ್ನು ನಡೆಸಬೇಕೇ ಅಥವಾ ನಿಲ್ಲಿಸಬೇಕೇ ಎಂಬುದನ್ನು ಎಲ್ಲರೂ ಯೋಚನೆ ಮಾಡಬೇಕಾಗಿದೆ. ಈಗಿನ ಸಹಕಾರ ಮಂತ್ರಿಗಳು ತಮಗೆ ಬೇಕಾದವರಿಗೆ ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಲು ಲಕ್ಷಾಂತರ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಈ ಮೂಲಕ ಸರ್ಕಾರದ ಹಣ ಲೂಟಿಯಾಗುತ್ತಿದೆ. ಅವರೇನು ಈ ಹಣವನ್ನು ಸರ್ಕಾರದ್ದು ಎಂದು ತಿಳಿದಿದ್ದಾರೋ ಅಥವಾ ಸ್ವಂತದ್ದು ಎಂದು ತಿಳಿದಿದ್ದಾರೋ ಗೊತ್ತಿಲ್ಲ. ನುಮಾರು ಹತ್ತಾರು ಕೋಟಿ ರೂಪಾಯಿಗಳಷ್ಟು ಸರ್ಕಾರದ ಹಣ ಈ ಸಹಕಾರಸಂಘಗಳ ಮೂಲಕ ಲುಕ್ಸಾನಾಗುತ್ತಿದೆ. ಈಗ ಬ್ಯಾಂಕ್‌ಗಳು ರಾಷ್ಟ್ರೀಕರಣವಾಗಿವೆ. ಇನ್ನು ಮುಂದೆ ಸಾಲ ಬೇಕಾದವರಿಗೆ ಹಣವನ್ನು ಈ ಬ್ಯಾಂಕ್‌ಗಳ ಮೂಲಕವೇ ಕೊಟ್ಟರೆ ಯಶಸ್ವಿಯಾಗಿ ಜನರಿಗೆ ಸಹಾಯವಾಗುತ್ತದೆ. ಮತ್ತು ಹಣ ಲುಕ್ಸಾನಾಗುವುದಕ್ಕೆ ಅವಕಾಶವಾಗುವುದಿಲ್ಲ. ಮತ್ತು ಸಹಕಾರ ಇಲಾಖೆಯಲ್ಲಿ ಏನು ಒಂದು ರಾಜಕೀಯ ಇದೆಯೋ ಅದನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆ ಗೋರ್ಡ್ ಮೈನಿಂಗ್ ಕಂಪನೀಸ್‌ಗೆ 10 ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಡುತ್ತಿದ್ದೀರಿ. ಹಟ್ಟಿಚಿನ್ನದಗಣಿಯ ಪರವಾಗಿ ಕೇಂದ್ರ ಸರ್ಕಾರವ ಆದೇಶದ ಪ್ರಕಾರ ರಿಜರ್ವ್ ಬ್ಯಾಂಕಿನಲ್ಲಿ 25 ಲಕ್ಷ ರೂಪಾಯಿಗಳಷ್ಟು ಚಿನ್ನ ಯಾವತ್ತೂ ಇರುತ್ತದೆ. ಆದ ಕಾರಣ ಈ ಕಂಪನಿಗೆ ನಮ್ಮ ಸರ್ಕಾರದವರು ಏತಕ್ಕೆ ಸಾಲ ಕೊಡಬೇಕು ? 25 ಲಕ್ಷ ರೂಪಾಯಿಗಳಷ್ಟು ಚಿನ್ನ ರಿಜರ್ವ್ ಬ್ಯಾಂಕಿನಲ್ಲಿ ಇರುವುದರಿಂದ, ಆ 25 ಲಕ್ಷ ರೂಪಾಯಿಗಳನ್ನು ಬಡ್ಡಿ ಇಲ್ಲದೆ ಸಾಲವಾಗಿ ಈ ಕಂಪನಿಗೆ ಕೊಡುವಂತೆ ನಮ್ಮ ಸರ್ಕಾರದವರು ಕೇಂದ್ರ ಸರ್ಕಾರದವರಿಗೆ ಹೇಳಬೇಕು. ಆದರೆ ನಾವು ಸಾಲ ಕೊಡುವುದು ಸರಿಯಲ್ಲವೆಂದು ಹೇಳುತ್ತೇನೆ. ಶ್ರೀ ಕಂಠೀರವ ಸ್ಟುಡಿಯೋ ಲಿಮಿಟೆಡ್‌ಗೆ 12 ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಡುತ್ತಿದ್ದೀರಿ. ಇವತ್ತಿನ ದಿವಸ ಯಾವುದಾದರೂ ಪುರಸಭೆಯವರು ನೀರು ಸರಬರಾಜು ಯೋಜನೆಗೆ ಹಣ ಬೇಕೆಂದು ಕೇಳಿದರೆ, ಸರ್ಕಾರದ ಬಳಿ ಹಣ ಇಲ್ಲ, ಎಲ್.ಐ.ಸಿ.ಯಿಂದ ಅಥವಾ ಷೆಡ್ಯೂಲ್ ಬ್ಯಾಂಕ್‌ನಿಂದ ಹಣವನ್ನು ಸಾಲವಾಗಿ ತೆಗೆದುಕೊಳ್ಳಿ ಎಂದು ಹೇಳುತ್ತೀರಾ ? ಆದರೆ ಈ ಸ್ಟುಡಿಯೋ ಕಟ್ಟುವುದಕ್ಕೆ ಇಷ್ಟೊಂದು ಹಣವನ್ನು ಕೊಡುತ್ತಿದ್ದೀರಿ. ಇದು ರೈಟ್ ಆಫ್ ಮಾಡುವ ಸಾಲವೆಂದು ಕಾಣುತ್ತದೆ. ಈ ಸ್ಟುಡಿಯೋದಿಂದ ಏನೂ ಲಾಭ ಬರುವುದಿಲ್ಲ. ಅಲ್ಲಯ ಮೇನೇಜ್‌ಮೆಂಟ್ ಯಾವ ರೀತಿ ಇದೆಯೋ ಗೊತ್ತಿಲ್ಲ. ಇನ್ನು ಮುಂದೆ ಯಾವ ಕಂಪನಿಗಳಿಗೆ ಸಾಲ ಕೊಡಬೇಕಾದರೂ ಕೂಡ ಸರ್ಕಾರದವರು ಷೆಡ್ಯೂಲ್ ಬ್ಯಾಂಕ್‌ಗಳ ಮೂಲಕ ಗ್ಯಾರಂಟಿ ಕೊಟ್ಟು ಕೊಡಿಸುವುದು ಒಳ್ಳೆಯದು. ಶರಾವತಿ ಯೋಜನೆಯಿಂದ ಲಾಭ ಬರುತ್ತದೆ, ಆ ಯೋಜನೆ ನಮ್ಮ ರಾಜ್ಯಕ್ಕೆ ಒಂದು ವರದಂತೆ ಇದೆ ಎಂದು ನಾವು ಮೊದಲು ತಿಳಿದುಕೊಂಡಿದ್ದೆವು. ಈ ಯೋಜನೆಯಿಂದ ಬಂದ ಲಾಭದ ಹಣವನ್ನು ವಿದ್ಯುಚ್ಛಕ್ತಿ ಬೋರ್ಡಿನವರಿಗೆ ಕೊಡುವುದಕ್ಕೆ ಶಕ್ತಿ ಇಲ್ಲವಾಗಿದೆ. ಬೋರ್ಡಿನವರು ಕೊಡಬೇಕಾಗಿದ್ದ ಸುಮಾರು 7 ಕೋಟಿ 32 ಲಕ್ಷ ಚಿಲ್ಲರೆ ಹಣವನ್ನು ಈಗ ಸಾಲವಾಗಿ

ಪರಿಗಣನೆ ಮಾಡುವುದಕ್ಕೆ ಹೊರಟಿದ್ದೀರಿ. ಈ ಶರಾವತಿ ಯೋಜನೆಗೆ ಸಂಬಂಧಪಟ್ಟಂತೆ ಒಂದು ಸ್ಕ್ಯೋರ್ಸ್ ಇದೆ. ಆ ಸ್ಕ್ಯೋರ್ಸ್‌ನಲ್ಲಿ ಅಕೌಂಟ್ಸ್ ಇರಾಖಿಯವರು ಆಡಿಟ್ ಮಾಡಿದಮೇಲೆ ನುಮಾರು 10 ಲಕ್ಷ ರೂಪಾಯಿಗಳಷ್ಟು ಷಾರ್ಟೇಜ್ ಇದೆ ಎಂದು ಗೊತ್ತಾಗಿದೆ. ಅಲ್ಲಿ ಕೆಲಸವಿಲ್ಲದಿದ್ದರೂ ಕೂಡ ಸಾವಿರಾರು ಜನರನ್ನು ನೇಮಕ ಮಾಡಿದ್ದಾರೆ. ಈ ಮೂಲಕ ಹಣ ವ್ಯರ್ಥವಾಗಿ ಖರ್ಚಾಗುತ್ತಿದೆ. ಆ ಸ್ಕ್ಯೋರ್ಸ್‌ನಲ್ಲಿ ಕಳ್ಳರು ಸೇರಿಕೊಂಡರೆ ಹಣ ಷಾರ್ಟೇಜ್ ಆಗದೆ ಇನ್ನೇನಾಗುತ್ತದೆ? ಈ ಕಾರಣದಿಂದ ವಿದ್ಯುಚ್ಛಕ್ತಿ ಬೋರ್ಡಿನವರಿಗೆ ಹಣವನ್ನು ಸಾಲವಾಗಿ ಕೊಡುವುದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ.

6-30 P.M.

ಆಮೇಲೆ ನುಮಾರು ಒಂಬತ್ತು ಲಕ್ಷದಷ್ಟು ಹಣವನ್ನು ಎನ್‌ಸೈಕ್ಲೊಪಿಡಿಯಕ್ಕಾಗಿ ಕೊಡಬೇಕೆಂದು ಇದರಲ್ಲಿ ತಂದಿದ್ದಾರೆ. ಇದು ಬರೀ ಮೋನ ಮತ್ತು ಇದು ಅನವಶ್ಯಕವಾದ ಖರ್ಚು. ಇದರಲ್ಲಿ ಚೀಫ್ ಮಿನಿಸ್ಟರ್‌ರವರಿಗೆ ಸಂಬಂಧಿಸಿದವರು ಇದ್ದಾರೆ ಮತ್ತು ಇದರಲ್ಲಿ ಇವರಿಗೆ ಬೇಕಾದವರು ಡೈರೆಕ್ಟರ್ ಆಗಿದ್ದಾರೆ ಎಂದು ಇದಕ್ಕಾಗಿ ನುಮಾರು ಒಂಬತ್ತು ಲಕ್ಷದಷ್ಟು ಹಣ ಕೊಟ್ಟಿದ್ದಾರೆಂದು ನನ್ನ ಭಾವನೆ. ಇಲ್ಲಿ ಚೆಕ್ಸ್‌ಬುಕ್‌ಗಳನ್ನು ಮಾಡಿಸಬೇಕು ಎಂದು ಇದಕ್ಕಾಗಿ ಅಡ್ವಾನ್ಸ್ ಪುಸ್ತಕಕ್ಕಾಗಿ ಕೊಡಬೇಕು? ಇದಕ್ಕೆ ನೀತಿ ನಿಯಮ ಯಾವುದೂ ಇಲ್ಲವೇ? ಮತ್ತು ಈಗ ಇರುವ ಚೆಕ್ಸ್‌ಬುಕ್ ಕಮಿಟಿಯಿಂದ ಪರಿಶೋಧನೆ ಮಾಡಿ ಬರುವಂತಹ ಪುನ್ರ್ತಕಗಳನ್ನು ನೋಡಿದರೆ ಯಾವ ರೀತಿಯಾದ ಸ್ಟಾಂಡರ್ಡ್ ಇದೆ ಎನ್ನುವುದು ಗೊತ್ತಾಗುತ್ತದೆ. ಇದರಿಂದಲೇ, ಇಂದು ನಮ್ಮ ದೇಶದಲ್ಲಿ ವಿದ್ಯಾಭ್ಯಾಸದ ಸ್ಟಾಂಡರ್ಡ್ ಹಾಳಾಗುತ್ತಿರುವುದು. ಇಂದು ಇರುವ ಚೆಕ್ಸ್‌ಬುಕ್ ಕಮಿಟಿಯಲ್ಲಿ ಸರಿಯಾದ ತಜ್ಞರು, ಕವಿಗಳು, ಸಾಹಿತಿಗಳು ಯಾರೂ ಇಲ್ಲವೋ ಏನೋ ನಮಗೆಂದೂ ಗೊತ್ತಿಲ್ಲ. ಇಲ್ಲಿ ಹೇಳಿರುವ ಕರ್ಣಾಟಕ ಕೋಆಪರೇಟಿವ್ ಪಬ್ಲಿಷಿಂಗ್ ಹೌಸ್ ಎನ್ನುವುದು ಒಂದು ರೀತಿಯಾದ ರ್ಯಾಕೆಟ್‌ನಂತೆ ಆಲ್ಲಿ ಮೋಸದ ವ್ಯವಹಾರಗಳು ನಡೆಯುತ್ತಿವೆ. ಇಂತಹ ಸಂಸ್ಥೆಗೆ ಸರಕಾರದ ಹಣವನ್ನು ಸಾಲವಾಗಿ ಏತಕ್ಕೆ ಕೊಡುತ್ತೀರಿ? ಇದರಿಂದ ಖಂಡಿತ ಸರಕಾರಕ್ಕೆ ನಷ್ಟವಾಗುತ್ತದೆ. ಇಂತಹ ವ್ಯವಹಾರಗಳಿಗೆ ಸಹಾಯ ಕೊಡಬಾರದು. ಹೋದ ವರ್ಷದ ಸಪ್ಲಿಮೆಂಟರಿ ಡಿಮ್ಯಾಂಡ್ಸ್‌ನ್ನು ನಾವು ನೋಡಿದ ಪಕ್ಷದಲ್ಲಿ ಅಗಿದ್ದ ಬಡ್ಜೆಟ್ಟಿನಲ್ಲಿ ಸರ್‌ಪ್ಲಸ್ ಏನೂ ಅಷ್ಟು ಜಾಸ್ತಿ ಇಲ್ಲ. ಅಲ್ಲದೆ ಕನ್ಸಾಲಡೇಟೆಡ್ ಫಂಡಿನಿಂದ ಖರ್ಚು ಮಾಡುತ್ತಿದ್ದಾರೆ. ಕೊನೆಯ ಪಕ್ಷ ಕನ್‌ಸಾಲಡೇಟೆಡ್ ಫಂಡಿನಿಂದ ನುಮಾರು 10–12 ಕೋಟಿಯವರೆಗೂ ಖರ್ಚಾಗಬಹುದು ಎಂದು ಆಯವ್ಯಯ ಪಟ್ಟಿಯನ್ನು ಮಂಡಿಸುವಾಗ ಹೇಳುತ್ತಿದ್ದರು ಮತ್ತು ತಮಗೆ ಬೇಕಾದ ಹಾಗೆ ನಾನ್ ಪ್ರೊಡಕ್ಟೀವ್ ಯೋಜನೆಗಳಿಗಾಗಿ ಹೊಸ ಹೊಸ ಕೆಲಸಗಳನ್ನು ಮಾಡುವುದಕ್ಕಾಗಿ ಖರ್ಚು ಮಾಡಿದರೂ ಅದರಿಂದೇನೂ ರಾಳ ಬರುತ್ತಿಲ್ಲ. ಇಂತಹ ಎಷ್ಟೋ ಐಟಂಗಳು ಇದರಲ್ಲಿ ಬರುತ್ತವೆ ಆದುದರಿಂದ ಇದನ್ನು ನಾವು ಖಂಡಿತ ಒಪ್ಪುವುದಿಲ್ಲ. ಇದಕ್ಕೆ ಬದಲು ನಮ್ಮ ಮಂತ್ರಿಗಳು ಇಂತಿಂತಹ ಖಾತೆಗಳಿಗಾಗಿ ನಾವು ಖರ್ಚು ಮಾಡಿದ್ದೇವೆ ಮತ್ತು ಇದರಿಂದ ಇಷ್ಟು ರಾಳ ಬರುತ್ತಿದೆ ಎಂದು ತಂದಿದ್ದರೆ ನಾವು ಆಗ ಅದನ್ನು ಒಪ್ಪುತ್ತಿದ್ದೆವು. ಇನ್ನು ಗೊಬ್ಬರ ನಮಗೆ ಬಹಳ ಮುಖ್ಯವಾಗಿ ಬೇಕು. ಆದರೆ ಇದನ್ನು ಎಲ್ಲರೂ ಉಪಯೋಗ ಮಾಡಿದರೆ ಅನುಕೂಲವಾಗುತ್ತಿತ್ತು. ಇಲ್ಲ ಸ್ಟೇಟ್ ಮಾರ್ಕೆಟಿಂಗ್ ಕೋಆಪರೇಟಿವ್ ಸೊಸೈಟಿಯಲ್ಲಿ ಸಾಲವಾಗಿ ಕೊಟ್ಟು ಅವರು ತಂದಿರುವ ಗೊಬ್ಬರವನ್ನು ಯಾರಿಗೂ ಹಂಚಿಲ್ಲ. ನುಮ್ಮನೆ ನಷ್ಟವಾಗುತ್ತಿದೆ. ಇದಕ್ಕಾಗಿ ನುಮಾರು 65 ಲಕ್ಷ ಎಂದು ಸಾಲ ಕೊಡುವುದು ಯಾವ ನ್ಯಾಯ! ನಮ್ಮ ದೇಶಕ್ಕೆ ಎಷ್ಟು ಗೊಬ್ಬರ ಬೇಕೋ ಅಷ್ಟನ್ನು ಮಾತ್ರ ತರಿಸಿ ಹಂಚಿದ್ದರೆ ಸಾಕಾಗುತ್ತಿತ್ತು. ನುಮಾರು 26 ಲಕ್ಷ ರೂಪಾಯಿ ಗೊಬ್ಬರ ಸ್ಟಾಕ್‌ನಲ್ಲಿದೆ ಎಂದು ಕೇಳುತ್ತೇವೆ. ಇದರಿಂದ ಕನಿಷ್ಠ ಪಕ್ಷ 20 ಲಕ್ಷದಷ್ಟು ಸ್ಕ್ಯೋರೇಜು ಮಾಡುವುದರಿಂದ ನಷ್ಟವುಂಟಾಗುತ್ತದೆ. ನುಮ್ಮನೆ 65 ಲಕ್ಷ ಎಂದು ಬುಕ್ ಬ್ಯಾರೆನ್ಸ್‌ನಲ್ಲಿ ಆ ನಂತರ ಅಡ್ಜಸ್ಟ್‌ಮೆಂಟಿನಲ್ಲಿ ನುಮಾರು 65 ಲಕ್ಷ ಸ್ಟೇಟ್ ಅಪೆಕ್ಸ್ ಬ್ಯಾಂಕಿನವರು ಹಾಗೂ ರ್ಯಾಂಡ್ ಡೆವಲಪ್‌ಮೆಂಟು ಬ್ಯಾಂಕಿನವರು ಇವರುಗಳಿಂದ ಡಿಸ್ಟ್ರಿಬ್ಯುಷನ್ ಆಗಿದೆ ಎಂದು ಹೇಳುತ್ತಾರೆ. ಈಗ ಸೊಸೈಟಿಗಳಿಗೇನೋ ಬೇಕಾದಷ್ಟು ಗೊಬ್ಬರ ಎಂದು ಸಾಲವಾಗಿ ಹಂಚುತ್ತಿದ್ದಾರೆ. ಇವೆಲ್ಲಾ ಸರಿಯಾಗಿ ವಿನಿಯೋಗವಾಗುತ್ತೋ ಇಲ್ಲ ಏನಾಗುತ್ತದೋ ಆ ಪರಮಾತ್ಮನಿಗೇ ಗೊತ್ತು. ಇದರಲ್ಲಿ ಅಷ್ಟು ಅವ್ಯವಹಾರಗಳು ನಡೆಯುತ್ತಿವೆ. ಇದನ್ನು ಮೊದಲು ಸರಕಾರದವರು ಯೋಚನೆ ಮಾಡಬೇಕು. ಇಷ್ಟೊಂದು ಹೆಚ್ಚು ಸಂಖ್ಯೆ ಮೊತ್ತದಲ್ಲಿ ಗೊಬ್ಬರವನ್ನು ಸ್ಟೋರು ಮಾಡಿದರೆ ಇದರಿಂದ ನುಮಾರು 50 ಲಕ್ಷದಷ್ಟು ನಷ್ಟವಾಗುತ್ತದೆ. ಒಂದು ಮೂಟೆ ಗೊಬ್ಬರಕ್ಕೆ ಸ್ಟಾಕಿನಲ್ಲಿದ್ದರೆ ನುಮಾರು ಐದು ಕೆಜಿಯಸ್ಟು ತೂಕದಲ್ಲಿ ಕಡಿಮೆ ಬರುತ್ತದೆ. ಎಂದರೆ ಶೇಕಡಾ ಎರಡರಷ್ಟು

(ಶ್ರೀ ಎಂ. ನಾಗಪ್ಪ)

ಕಡಿಮೆ ಬರಬಹುದು ಎಂದಿದ್ದರೂ ಇದು ಶೇಕಡಾ ಐದರವರೆಗೆ ಹೋಗುತ್ತದೆ. ಕೊನೆಯ ಪಕ್ಷ ಇದರ ವ್ಯವಹಾರದಲ್ಲಿ ಸುಮಾರು 30 ಲಕ್ಷದಷ್ಟು ಲಾಸ್ ಆಗುತ್ತದೆ. ಇದರಲ್ಲಿ ಏನಾಗಿದೆ ಎಂದರೆ ಯಾರೋ ಇವರಿಗೆ ಬೇಕಾದ ದಳ್ಳಾಳಿಗಳು ಬಂದು ಇಷ್ಟು ಹೆಚ್ಚು ಸಂಖ್ಯೆಯ ಮೊತ್ತದ ಗೊಬ್ಬರವನ್ನು ಸೊಸೈಟಿಗೆ ಕೊಟ್ಟು ಸ್ಟಾಕ್ ಮಾಡಲು ಅವಕಾಶ ಮಾಡಿದ್ದಾರೆ. ಇದಕ್ಕೆ ಡಿಸ್ಟ್ರಿಕ್ಟ್ ಕೋಆಪರೇಟಿವ್ ಬ್ಯಾಂಕಿನವರು ಸಹಾಯ ಮಾಡಿದ್ದಾರೆ. ಇದರಿಂದಾಗಿ ಇಲ್ಲಿ ಸುಮಾರು 26 ಲಕ್ಷ ರೂಪಾಯಿಗಳ ಬೆಲೆಯ ಗೊಬ್ಬರ ಸ್ಟಾಕ್‌ನಲ್ಲಿ ಉಳಿದು ಹೋಗಿದೆ. ಇದನ್ನು ಇನ್ನೂ ಮಾರಾಟ ಮಾಡುವುದಕ್ಕೆ ಆಗುತ್ತಿಲ್ಲ. ಅಗ್ರಿಕಲ್ಚರು ಬ್ಯಾಂಕಿನವರು ರೈತರಿಗೆ ಸಹಾಯವಾಗಲಿ ಎಂದು ಸಾಲ ಕೊಟ್ಟರೂ ಇಂತಹ ಸರಕಾರದ ಧೋರಣೆಯಿಂದಾಗಿ ಇಷ್ಟೊಂದು ಲಾಸ್ ಬರುತ್ತಿದೆ. ಇದನ್ನು ಖಂಡಿತವಾಗಿಯೂ ನಾನು ಒಪ್ಪುವುದಿಲ್ಲ.

ಇನ್ನು ಟ್ರಿಬ್ಯುನಲ್‌ಗಳಿಗಾಗಿ ಹಾಗೂ ಕಾನ್‌ಫೆರೆನ್ಸ್‌ಗಳಿಗಾಗಿ ಮತ್ತು ಕಮಿಟಿಗಳಿಗಾಗಿ ಸರಕಾರ ಬೇಕಾದಷ್ಟು ಖರ್ಚು ಮಾಡುತ್ತಿದೆ. ಮತ್ತು ಇದರಿಂದ ಸರಕಾರಕ್ಕೂ ಹಣ ನಷ್ಟವಾಗುತ್ತಿದೆ. ಹಿಂದೆ ಕೃಷ್ಣಾನದಿ ನೀರಿನ ಹಂಚಿಕೆ ವಿವಾದಗಳು ಬಂದಾಗ ಬೇಕಾದಷ್ಟು ಸಲ ಮಂತ್ರಿಗಳು ದೆಹಲಿಗೆ ಹೋಗಿದ್ದರು. ಇದರ ಬಗ್ಗೆ ವಾದಮಾಡಲು ಒಂದು ಸಾರಿ ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಹೆಚ್. ಎಂ. ಚನ್ನಬಸಪ್ಪನವರೂ ದೆಹಲಿಗೆ ಹೋಗಿದ್ದರು. ಇವರು ಕೇಂದ್ರ ಮಂತ್ರಿಗಳ ಮುಂದೆ ನಮ್ಮ ರಾಜ್ಯದ ವಿವಾದವನ್ನು ಬಹಳ ಚೆನ್ನಾಗಿ ಅಂಕಿ ಸಂಖ್ಯೆಗಳೊಡನೆ ವಿವರಿಸಿದರು. ಇದೇ ಸಮಯದಲ್ಲಿ ಅಲ್ಲಿ ಆಂಧ್ರದ ಮಂತ್ರಿಗಳೂ ಬಂದಿದ್ದರು. ಇವರೆಲ್ಲರೂ ಅಲ್ಲಿ ಮಾನ್ಯ ಚೆನ್ನಬಸಪ್ಪನವರ ವಾದವನ್ನು ಕೇಳಿದ ಮೇಲೆ ಕಾನ್‌ಫರೆನ್ಸ್‌ನಿಂದ ಹೊರಗೆ ಬರುತ್ತಾ ಆಂಧ್ರದ ಮಂತ್ರಿಗಳು ತಮ್ಮ ಇತರ ಸಹೋದ್ಯೋಗಿಗಳೊಡನೆ ತೆಲುಗಿನಲ್ಲಿ ಹೇಳುತ್ತಾ ಬಂದರು, ಅದು ಏನೆಂದರೆ ಮೈಸೂರಿನವರ ವಾದ ಒಳ್ಳೇ ಹುಲಿಯಂತೆ ಧೃಡವಾಗಿದೆ, ನಾವು ಇದನ್ನು ಗೆಲ್ಲಲು ಸಾಧ್ಯವಿಲ್ಲ ಎಂದು ಹೇಳಿದರು. ಆದರೆ ಈಚೆಗೆ ದೆಹಲಿಗೆ ಇನ್ನೊಂದು ಸಾರಿ ನಮ್ಮ ರಾಜ್ಯದ ಪಿ.ಡಬ್ಲ್ಯು.ಡಿ. ಮಂತ್ರಿಗಳು ಹಾಗೂ ಆಂಧ್ರದ ಮಂತ್ರಿಗಳು ಇಲ್ಲಿನ ಕಾನ್‌ಫರೆನ್ಸ್‌ಗೆ ಹೋದಾಗ ಪುನಃ ರಾಜ್ಯದ ವಿವಾದವನ್ನು ಸರಿಯಾಗಿ ಮನವಟ್ಟು ಮಾಡುವಂತೆ ಅಲ್ಲಿ ಹೇಳಲಿಲ್ಲ ಎಂದು ಗೊತ್ತಾಗುತ್ತಿದೆ. ಇದೇ ಆಂಧ್ರದ ಮಂತ್ರಿಗಳು ಕಾನ್‌ಫರೆನ್ಸ್‌ನಿಂದ ಹೊರಕ್ಕೆ ಬರುವಾಗ ಮೈಸೂರಿನವರ ವಾದದಲ್ಲಿ ಏನೂ ಹುರುಳಿಲ್ಲ ಮತ್ತು ಇವರಿಗೆ ಸರಿಯಾಗಿ ವಾದ ಮಂಡಿಸಲಿಕ್ಕೂ ಬರುವುದಿಲ್ಲ ಎಂದು ಹೇಳಿದರಂತೆ. ಇದಕ್ಕಾಗಿ ನಾನು ಸಲಹೆ ಮಾಡುವುದು ನಮ್ಮ ರಾಜ್ಯದಲ್ಲಿ ಮಾನ್ಯ ಸದಸ್ಯರಾಗಿ ಚನ್ನಬಸಪ್ಪನವರು ಅಡಳಿತದಲ್ಲಿದ್ದು ಇದರ ಅನುಭವವನ್ನು ಸಂಪೂರ್ಣವಾಗಿ ಪಡೆದಿರುವುದರಿಂದ ಸರಕಾರ ಇವರು ವಿರೋಧ ಪಕ್ಷದಲ್ಲಿದ್ದರೂ ಇವರ ಸಹಾಯವನ್ನು ರಾಜ್ಯದ ಸರಕಾರದವರು ಪೂರ್ಣವಾಗಿ ಪಡೆಯಬೇಕು. ಇವರಲ್ಲಿ ಈ ಪಕ್ಷ ಮತ್ತು ಆ ಪಕ್ಷ ಎಂದು ಇರಬಾರದು. ನೀರಿನ ವಿವಾದದ ಬಗ್ಗೆ ಪೂರ್ಣವಾದ ಫ್ಯಾಕ್ಟ್‌ಸ್ ಅಂಡ್ ಫಿಗರ್ಸ್‌ಗಳನ್ನು ಚೆನ್ನಾಗಿ ತಿಳಿದಿರುವ ಮಾನ್ಯ ಸದಸ್ಯರಾದ ಶ್ರೀಮಾನ್ ಚೆನ್ನಬಸಪ್ಪನವರು ಒಬ್ಬರೇ ಎಂದು ನಾವು ತಿಳಿದಿದ್ದೇವೆ. ಆದುದರಿಂದ ಮುಖ್ಯ ಮಂತ್ರಿಗಳು ಇಂತಹ ತಜ್ಞರ ಸಹಾಯವನ್ನು ಪಡೆಯುವುದು ರಾಜ್ಯದ ಹಿತದೃಷ್ಟಿಯಿಂದ ಒಳ್ಳೆಯದು ಎಂದು ನಾನು ಸೂಚನೆ ಮಾಡಬಯಸುತ್ತೇನೆ. ಇಂತಹ ವಿಚಾರಗಳಲ್ಲಿ ಕೆಲವರು ತಪ್ಪು ಅಂಕೆ ಸಂಖ್ಯೆಗಳನ್ನು ಕೊಡುವುದರಿಂದ ರಾಜ್ಯದ ಹಿತಕ್ಕೆ ಧಕ್ಕೆ ಉಂಟಾಗುತ್ತದೆ, ಇದರಿಂದಾಗಿ ನಮ್ಮ ನ್ಯಾಯವಾದ ಹಕ್ಕನ್ನು ಕಳೆದುಕೊಳ್ಳುವ ಸಂಭವ ಬರಬಹುದು. ಇದಕ್ಕಾಗಿ ಸರಿಯಾದ ಅನುಭವ ಪಡೆದಂತಹವರ ಸಲಹೆಯನ್ನು ಸರಕಾರ ತೆಗೆದುಕೊಳ್ಳುವುದು ಅಗತ್ಯ. ಇವರು ಹಿಂದೆ ಅಡಳಿತ ಪಕ್ಷದಲ್ಲಿದ್ದವರು ಮತ್ತು ಆಳವಾಗಿ ಇದರ ಬಗ್ಗೆ ಅಧ್ಯಯನ ಮಾಡಿರುವುದರಿಂದ ಇವರಿಗೆ ಎಲ್ಲರೂ ಗೌರವ ಕೊಡಬೇಕು. ಇದರಲ್ಲಿ ಸುಮಾರು 8,50,000 ರೂಪಾಯಿಗಳನ್ನು ಇಂತಹ ಟ್ರಿಬ್ಯುನಲ್‌ಗಾಗಿ ಖರ್ಚು ಮಾಡಿರುವುದು ಮೈಸೂರು ಸರಕಾರಕ್ಕೆ ತುಂಬಾ ಅವಮಾನಕರವಾದುದು. ಇಷ್ಟು ಹಣವನ್ನು ಸರಕಾರ ಖರ್ಚು ಮಾಡುವುದು ತಪ್ಪು. ಇದಕ್ಕೆ ಬದಲಾಗಿ ಬೇರೆ ಯೋಜನೆಗಳಿಗೆ ಖರ್ಚು ಮಾಡಬಹುದಾಗಿತ್ತು. ಅಲ್ಲದೆ ರಾಜ್ಯದಲ್ಲಿ ಇಂಡಸ್ಟ್ರೀಗಳನ್ನು ಮಾಡಬೇಕೆಂದು ಇಲ್ಲಿನವರಿಗೆ ಕೊಡದೇ ಹೊರಗಿನವರನ್ನೇ ಕರೆದು ಅಲ್ಲಿ ಇಂಡಸ್ಟ್ರೀ ಮಾಡಬೇಕೆಂದು ಹೇಳುತ್ತಿದ್ದೀರಿ. ಇದರಿಂದ ಸರಕಾರಕ್ಕೆ ಹೆಚ್ಚು ಲಂಚದ ರೂಪದಲ್ಲಿ ವರಮಾನ ಬರುತ್ತದೋ ಏನೋ ಎನ್ನುವ ಅನುಮಾನ ಬರುತ್ತದೆ. ಇದರ ಬಗ್ಗೆ ಹೇಳಬೇಕಾದರೆ ಚೆಂಡರುಗಳನ್ನು ಸರಕಾರ ಈಚೆಗೆ ಕರೆದಾಗ ನಾವು ಯಾವ ರೀತಿ ಆಯಿತು ಎನ್ನುವುದನ್ನು ನೋಡಿದ್ದೇವೆ. ಒಂದು ಸಾರಿ ಚೆಂಡರು ಕರೆದಾಗ 50 ಸಾವಿರ ಡಿಪಾಸಿಟ್ ಕೊಡಬೇಕೆಂದು ಮೊದಲು ಕರಾರು ಇತ್ತು. ಆ ನಂತರ ಚೆಂಡರುಗಳು ಬಂದಾಗ ಪುನಃ ಚೆಂಡರನ್ನು ಬದಲಾಯಿಸಿ ತಮಗೆ ಬೇಕಾದ ಒಬ್ಬ ಮಾರವಾಡಿಗೆ ಅನುಕೂಲವಾಗಲಿ

ಎಂದು ಒಂದು ಲಕ್ಷ ರೂಪಾಯಿ ಡಿಪಾಸಿಟ್ಟು ಕೊಡಬೇಕೆಂದು ಏರಿಸಿಬಿಟ್ಟರು. ಇದನ್ನು ನೋಡಿದರೆ ಇದರಲ್ಲಿ ಯಾವುದೋ ಒಂದು ರೀತಿಯ ಮೋಸ ಇದೆ ಎನ್ನುವುದು ಚೆನ್ನಾಗಿ ಗೊತ್ತಾಗುತ್ತದೆ. ಇಂತಹ ನಡೆವಳಿಕೆಗಳು ನಮ್ಮ ರಾಜ್ಯದಲ್ಲಿ ನಡೆಯುತ್ತಿದೆ. ಇದಕ್ಕಾಗಿ ನಮ್ಮ ಮಂತ್ರಿಮಂಡಲ ಮೊದಲು ರಾಜೀನಾಮೆ ಕೊಡಬೇಕು, ಈಗೇನೋ ಇವರು ಮಂತ್ರಿಗಳಾಗಿರಬಹುದು. ಮುಂದೆ ಯಾವುದಾದರೊಂದು ಸಂದರ್ಭದಲ್ಲಿ ವಿಚಾರಣೆಯಾದಾಗ ಇಲ್ಲಿರುವ ಮಂತ್ರಿಗಳು, ಮುಂದೆ ವಿಚಾರಣೆಗೆ ಗುರಿಯಾಗಿ ಖಂಡಿತ ಶಿಕ್ಷೆಗೆ ಒಳಗಾಗುತ್ತಾರೆ ಎನ್ನುವ ಒಂದು ಎಚ್ಚರಿಕೆ ಮಾತನ್ನು ಅವರಿಗೆ ಇಲ್ಲಿ ಹೇಳುತ್ತಿದ್ದೇನೆ.

† Sri V. N. PATIL.—Sir, in opposing the Supplementary demands placed before the House, I wish to say that it looks very strange how and under what circumstances these demands are put forward. On 28th March 1969 the General Demands of the Budget were voted and here items 1 to 39 are amounts which are already spent and these expenses were incurred before 31st March. Items 1 to 39 have been included in these supplementary Demands. I fail to understand how the Finance Minister and the Government could present them at this late stage. It is not legally tenable. On the other hand, this could easily be considered as excessive Demands. This is not a step that should be taken by a Government in a democracy. Our Government has developed an attitude of lethargy. They are so thick-skinned that it has become very difficult to convince the Government. I fail to understand how these items 1 to 39 could be included in the supplementary Demands.

Sri RAMAKRISHNA HEGDE.—I will explain.....

Sri V. N. PATIL.—I will not yield at this stage. I do not have much time to speak. If the Finance Minister has already noticed, I would rather compliment him if he can take action on members of his staff who have not brought them to his notice earlier.

Now I want to refer to the Demand relating to our worthy Minister Hon. Sri P. M. Nada Gouda. In answer to my question 342, there is a wonderful reply. Out of 42 days of operation, the Co-operative Sugar Factory at Bidar incurred a loss of 9 lakhs. The expenditure incurred during the operation period of 42 days is 22 lakhs and the loss incurred is 9 lakhs. This state of affairs glaringly brings out the corrupt practice that is going on there. I thought Bangalore Dairy could be the only example where thousands of rupees worth of butter was supposed to have been burnt. God alone knows whether it was actually burnt or whether it was sold elsewhere. That is also not very clear. Now, you have another instance of corruption and inefficiency in the Bidar Sahakara Sakkare Karkhane which started crushing the cane after the crushing season in order to oblige the Khandsari factory owners. I want to ask the Government, were the Government so impotent as not to be able to call to Order that white elephant in the shape of an IAS officer managing that factory in Bidar? That white elephant Mr. Prabhakara Rao, N. K. is considered to be the most young and energetic person. What has he done in Bidar in collusion with the Managing Director and other white caps? In order to oblige these Khandasari factory owners, he delayed the crushing operations for five months—instead of November,

(SRI V. N. PATIL)

they started crushing operations in March on some lame excuse and from each khandsari sugar factory owner they took a bribe of Rs. 50,000 to one lakh. I am making this allegation with a sense of responsibility. I am prepared to substantiate, what rotten things they have done. For a person who has no sugar cane crop in the field, he has issued a permit saying that that man is a *bona fide* cultivator. With a bogus survey number he is permitted to bring 50,000 tons of cane to the factory. And this so-called bogus permit-holder would go to nearby villages of Zahirabad, and they would purchase cane at Rs. 50 per ton, and bring it to Karnataka State and this was purchased by the sugar factory at Rs. 100 or Rs. 80 per quintal ; If that is the way the operations are carried on, will there be no loss and fortunately the loss is only 9 lakhs. It will be much more, because they say that 9 lakhs is tentative. I am sure it will not end there. Some young students from the Agricultural College who came there for study called on this IAS officer.....

SRI RAMAKRISHNA HEGDE.—I would like to appeal to the Hon'ble Member that this is against the established conventions.

SRI V. N. PATIL.—I wanted to say this fact, this morning during question-hour. But I was told that the supplementary Demands are coming and I could refer to this.

SRI RAMAKRISHNA HEGDE.—I am not questioning your *bona fides*. The only thing is we should not bring in names of people who are not in a position to defend themselves here.

SRI V. N. PATIL.—I am always accustomed to call a spade a spade. What I wanted to say is there is a lot of blackmarket transactions in sugar cane. If they give 5 tons of cane, they were given receipt for 8-10 tons. Will not this kind of a transaction land the concern in loss ? Are we going to make profit out of five tons when the Factory has actually bought 10 tons ? I am asking the Government to initiate judicial enquiry into the allegations. If I fail to substantiate the charges, I am prepared to resign. I am throwing this challenge to the concerned Minister and the Government. I call a spade a spade and want the Government to institute an enquiry against the corrupt official. Will they accept the challenge ?

I am bringing another glaring instance of grievous assault on poor innocent villagers in which no action was taken. I have raised this question in the present Session also ; it is in the 7th List and bears No. 289. It pertains to an incident in Humnabad Taluk, Bidar district, which happened in the month of November 1968. If I remember the date correct, the offence took place on 16th November 1968. After addressing a meeting on that day, I left the place. The elder brother of the Congress candidate for the Taluk Board elections, along with 50 persons, caused axe injuries to four persons. Unfortunately

these injured persons who were taken to the Humnabad Civil Hospital were accorded inhuman and brutal treatment by the Doctor. I gave a telegram to the Chief Minister and the concerned Minister. What was the result ? Neither did I receive any reply nor the injured any relief. Has this Government any regard for human values ? Is this democracy ? They are wrecking the Constitution. I am exposing the follies of the Government. What do we expect in democracy and what is it we are getting under the Congress regime ? In order to protect the interest of their party, the Government is winking at violent methods adopted by their partymen. But the Government must know that the ultimate judges of their doings and actions are the people. The Doctor of the Humnabad Hospital did not admit those persons with bleeding injuries to the Hospital. The Government had been urged to institute an enquiry into this grave matter. Still this Government has the temerity to say that no representation was received by them to conduct an enquiry against the Doctor. I have written, not once but thrice to institute an enquiry. I have brought this fact of refusal of the Doctor to admit the injured persons to the Hospital on 21st January 1969 on the floor of this House and it is reported in Vol. XV-No. 5. So I have brought this to the notice of the House as well as the Government. On the refusal of the Doctor at Humnabad, I had to take the injuried persons to the Civil Hospital at Bidar, where the injured had five stitches ; they were also in-patients there for several days. What more evedence do Government want to take action ? Is there any other method to bring matters to the notice of the Government ? They are so rash as to give a written reply that no representation had been received by Government to institute an enquiry into the matter. I have asked for an enquiry long back. The incident occurred in November 1968. After 11 months, what justice can the aggrieved parties expect ? What safety can we expect from such a Government ? - If I happen to suffer from blood pressure and go to the same Doctor of Humnabad for treatment, he does not hesitate to administer foildol to me and put an end to my life. I ask the Treasury Benches, is there any security for the people under this regime ? If any such doctor existed in a communist or socialist regime, he would have been hung as a matter of right. Such Ministers, who shield such an inhuman official, who is an enemy of humanity, should not be allowed to continue in office. That Doctor has failed in extending ordinary human courtesy and the Minister is tolerating his crime. I am demanding a judicial enquiry into the incident. If the Treasury benches have the courage, let them order the judicial enquiry ; let that Officer be subjected to judicial enquiry. If the allegations made are not true, let them kick me out of this House. I am prepared to take the wrath of this House if I misled the House ; if I mislead the House I will be committing a sin. As if nothing has happened in the incident narrated by me, the Government have placed these estimates blindly and expect sanction for them.

MR. DEPUTY SPEAKER.—The hon. Member may please conclude.

Sri M. S. KRISHNAN.—Many members are eager to participate in the debate. Therefore, these Demands may be taken up tomorrow.

Sri V. N. PATIL.—If need be, let us commence the Session at 11 and give greater opportunities to members.

Mr. DEPUTY SPEAKER.—The sitting is extended up to 7-30 p.m. so as to complete this item. Sri Patil may please conclude.

Sri V. N. PATIL.—I wish to speak a few words about the sort of protection given to minorities. In a village, three miles from my native place, Harijans demanded minimum human rights and Harijans were removed out of a hotel. The Harijans are deprived of their just rights. The caste Hindus have a bell to warn them in case the Harijans enter the village premises. When this segregation was brought to the notice of the Deputy Commissioner, he has sent a communication, which is received just now, that the atrocities and injustices committed on Harijans are found to be facts. There the matter ends. What action have you taken against those culprits? We expect some amount of sincerity and honesty from the treasury benches. Please do not betray the confidence we have reposed in you.

7-00 P.M.

Regarding land distribution in the Bidar District we are very much disappointed. Landless people have entered upon the land and have been cultivating the land as their own. They are paying the penalty. If the Government is satisfied about the position of those people, why not they grant the patta rights to those people? You can stipulate some conditions like that they should have been there for 15 years or something like that. Those people come from backward communities. But you are not caring to look to their welfare. One more intriguing thing is the land revenue paid by the agriculturists in Bidar District is more than in other places. In Gulbarga District also the soil is black cotton soil and the land revenue there is Rs. 1.50 whereas for the same black cotton soil in my district it is Rs. 9 per acre. Why is this difference? To my mind it is because Bidar District was under Jagirdars and Nawabs and Chincholi in Gulbarga District was directly under Nizam. This being the case, the disparity should have been removed. Even aftar 20 years they have failed to remove the difference. On the other hand they are collecting additional surcharge.

Lastly I want to say something about the collection of land revenue. The Mysore Government has advised the agriculturists that if they feel more land revenue is levied, individual agriculturists can go to the Deputy Commissioner and file objection. Is this the way you should treat the agriculturists? I wish to end my speech by complimenting the Government that this Government is anti-government, anti-students, anti-people. How long you want to survive like this? When you are treating the agriculturists like this what right have you

to stay? You do not have even an iota of sympathy. Before pressing for sanction of the Additional Demands for grants, I request you with all sincerity to walk out to this side and resign.

† ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸಭಾಪತಿಗಳೇ, ಸುಮಾರು 40 ಕೋಟಿ ರೂಪಾಯಿಗಳ ಸಪ್ಲಿಮೆಂಟರಿ ಡಿಮ್ಯಾಂಡಿಗೆ ಒಪ್ಪಿಗೆ ಕೇಳಿದ್ದಾರೆ, ಇದಲ್ಲದೆ ಎಕ್ಸೆಸ್ ಗ್ರಾಂಟ್ಸ್ ಬೇರೆ ಕೇಳಿದ್ದಾರೆ. ಈ ಎರಡನ್ನೂ ವಿರೋಧ ಮಾಡುತ್ತಾ ಕೆಲವು ವಾತುಗಳನ್ನಾಡಬೇಕೆಂದಿದ್ದೇನೆ. ಮೊದಲನೆಯದಾಗಿ ಈ ರೀತಿ ಎಕ್ಸೆಸ್ ಗ್ರಾಂಟ್ ಮತ್ತು ಸಪ್ಲಿಮೆಂಟರಿ ಗ್ರಾಂಟನ್ನು ಕೇಳುವುದು ಸರಿಯೇ ಎಂಬುದನ್ನು ಪರಿಶೀಲನೆ ಮಾಡಬೇಕಾಗಿದೆ. ಪ್ರತಿಯೊಂದು ಸಲವೂ ಸಪ್ಲಿಮೆಂಟರಿ ಡಿಮ್ಯಾಂಡ್ ಬರುತ್ತಲೇ ಇರುತ್ತದೆ. ಒಂದು ಪಟ್ಟಿ ಕೊಟ್ಟಿದ್ದಾರೆ, ಅದರಲ್ಲಿ 46 ಡಿಮ್ಯಾಂಡುಗಳಿಗೆ 30-3-69ರಲ್ಲಿ ಆರ್ಡರು ಪಾಸಾಗಿದೆ, 45 ಡಿಮ್ಯಾಂಡುಗಳಿಗೆ ಈಗಾಗಲೇ ಮುಂಗಡವಾಗಿ ಹಣ ಕೊಟ್ಟಿದ್ದಾರೆ. ಅದುವರೆಗೆ ಏನು ಮಾಡುತ್ತಿದ್ದರು, ಕಡೆಯ ದಿವಸ ಏಕೆ ಪಾಸ್ ಮಾಡಿದರು ಎಂದು ಪ್ರಶ್ನೆ ಮಾಡಬೇಕಾಗಿದೆ. ಏನು ಮಾಡುವುದು, ಲ್ಯಾಪ್ಸ್ ಆಗಬಾರದು ಎಂದು ಹಾಗೆ ಮಾಡಲಾಯ್ತು ಎಂದು ಹೇಳಬಹುದು. ಆದರೆ ಅದು ಸರಿಯಾದ ಕಾರಣವಲ್ಲ. ಸರಕಾರ ಉದ್ದೇಶಪೂರ್ವಕವಾಗಿ ಹೀಗೆ ಮಾಡಿರುವಂತೆ ಕಾಣುತ್ತದೆ. ಯಾವುದೇ ಒಂದು ಸರಕಾರವಾಗಲಿ ತನ್ನ ಆರ್ಥಿಕ ನೀತಿ ಸರಿಯಾಗಿದೆ ಎಂದು ಅನ್ನಿಸಿಕೊಳ್ಳಬೇಕಾದರೆ ಬಜೆಟ್ ಸರಿಯಾಗಿರಬೇಕು, ಎಷ್ಟು ಖರ್ಚು ಮಾಡಬೇಕು ಎಂದು ಯೋಚನೆ ಮಾಡಿ ಸರಿಯಾದ ಬಜೆಟ್ ತಯಾರಿಸಬೇಕು. ಸರಿಯಾದ ರೀತಿಯಲ್ಲಿ ಬಜೆಟ್ ತಯಾರು ಮಾಡಬೇಕಾಗಿತ್ತು. ಹಾಗೆ ಮಾಡಿಲ್ಲ. ಬಜೆಟ್ ಬಗ್ಗೆ ಸರಿಯಾಗಿ ಯೋಚನೆ ಮಾಡಿಲ್ಲ, ಪ್ಲಾನ್ ಬಗ್ಗೆ ಕೂಡ ಸರಿಯಾದ ನೀತಿಯನ್ನನುಸರಿಸಿಲ್ಲ. ನಾಲ್ಕನೆಯ ಪಂಚವಾರ್ಷಿಕ ಯೋಜನೆ ಕೂಡ ಸರಿಯಾಗಿಲ್ಲ, ಏನು ಮಾಡುತ್ತಾರೋ ಏನೋ. ಈಗ ಮೂರು ಪಂಚವಾರ್ಷಿಕ ಯೋಜನೆಗಳನ್ನು ನೋಡಿದ್ದೇವೆ. ಹಣ ಸಾಲದೆ ಈಗ ಶೋಚನೀಯ ಪರಿಸ್ಥಿತಿ ಇದೆ. ಡಿಮ್ಯಾಂಡನ್ನು ಈ ರೀತಿ ತರುವುದು ಪ್ರಜಾಪ್ರಭುತ್ವದ ತತ್ವಕ್ಕನುಗುಣವಾಗಿಲ್ಲ. ಸರಿಯಾದ ಸರಕಾರ ಈ ರೀತಿ ತೆಗೆದು ಕೊಂಡು ಬರುವುದಿಲ್ಲ. ಎರಡನೆಯದಾಗಿ ಇದನ್ನು ತಂದಿರುವುದೇಕೆ? ಇದರಲ್ಲಿ ಮುಖ್ಯವಾಗಿ ಕೈಗಾರಿಕೆಗಳಿಗೆ ಹಣ ಕೇಳಿದ್ದಾರೆ, ಎನ್.ಜಿ.ಇ.ಎಫ್., ಪೋರ್ಸಿಲೈನ್ ಫ್ಯಾಕ್ಟರಿ, ಕೆ.ಸಿ.ಟಿ ಮಿಲ್ ಮುಂತಾದುವುಗಳಿಗೆ ಸಾಲ ಕೊಡಬೇಕೆಂದು ಕೇಳಿದ್ದಾರೆ. ಇದರಲ್ಲಿ ಮೂಲಭೂತ ಧೋರಣೆಯ ಪ್ರಶ್ನೆ ಇದೆ. ಅದೇನೆಂದರೆ ಈ ರೀತಿ ಸಾಲ ಕೊಡುವುದು ಸರಿಯೇ ಎಂಬುದು. ಇದು ಕೇಂದ್ರ ಸರಕಾರದ ಕೈಗಾರಿಕಾ ನೀತಿಗನುಗುಣವಾಗಿದೆಯೇ? ಈ ರೀತಿ ಹಣ ಕೇಳುವಾಗ ಕೈಗಾರಿಕಾ ಧೋರಣೆಯೇನು? - ದೇಶವನ್ನು ಹೇಗೆ ಕಟ್ಟಬೇಕೆಂದಿದ್ದೀರಿ? ನಮ್ಮತಾವಾದವನ್ನು ಜಾರಿಗೆ ತರಬೇಕೆಂದು ಹೇಳುವಾಗ ಈ ರೀತಿ ಮಾಡುವುದು ಸರಿಯೇ?

ನಿಮ್ಮ ನೀತಿ, ಧೋರಣೆ, ಧ್ಯೇಯ, ದೃಷ್ಟಿಕೋಣ ಇದೆಲ್ಲಕ್ಕೂ ಕೂಡ ವಿರೋಧವಾಗಿ ನಡೆದಿದ್ದೀರಿ ಎಂದು ಕಾಣುತ್ತದೆ. ಎಂ.ಎಸ್.ಕೆ. ಮಿಲ್ಸ್ ತೆಗೆದುಕೊಳ್ಳಿ, ಖಾಸಗಿಯವರಿಗೆ ಅನುಕೂಲವಾಗುವ ಹಾಗೆ ನೀವು ಹಣ ಕೊಡುತ್ತಾ ಇದ್ದೀರಿ, ಮಿಲ್ ಚೆನ್ನಾಗಿ ನಡೆಯುತ್ತದೆಯೋ ಇಲ್ಲವೋ ಗೊತ್ತಿಲ್ಲ. ಅಲ್ಲಿ ಲಾಸ್ ಇಲ್ಲ ಪ್ರಾಫಿಟ್ ಬಂದಿವೆ ಎಂದು ಶ್ರೀಮಾನ್ ಶಿವಪ್ಪನವರಿಗೆ ಉತ್ತರ ಕೊಟ್ಟಿರಿ ಇದು ಎಷ್ಟು ದಿವಸ ನಡೆಯುತ್ತದೆಯೋ ನೋಡಬೇಕು, ಚೆನ್ನಾಗಿ ನಡೆದರೆ ಸಂತೋಷ. ಆದರೆ ಇದರಲ್ಲಿ ಮೂಲಭೂತವಾದ ಅಂಶವೇನೆಂದರೆ ನಮ್ಮ ರಾಜ್ಯದಲ್ಲಿ ಸರ್ಕಾರ ನಡೆಸುವಂತಹ ಕೈಗಾರಿಕೆಗಳನ್ನು ಖಾಸಗಿಯವರಿಗೆ ಕೊಡುವುದು ಸರಿಯೇ ಅಂತ ಅನ್ನುವುದು ಪ್ರಶ್ನೆ. ಮತ್ತು ಯಾವ ಯಾವ ಕೈಗಾರಿಕೆಗಳನ್ನು ಸರ್ಕಾರದವರೇ ನಡೆಸಬೇಕೆಂಬುದನ್ನು ಯೋಚನೆ ಮಾಡಬೇಕು. ಬೇಸಿಕ್ ಇಂಡಸ್ಟ್ರೀಸನ್ನು ಸರ್ಕಾರದವರೇ ನಡೆಸಬೇಕೆಂದು ಕೇಂದ್ರ ಸರ್ಕಾರದವರು ಅಭಿಪ್ರಾಯ ಪಟ್ಟಿದ್ದಾರೆ. ಮೈಸೂರು ರಾಜ್ಯದಲ್ಲಿ ಬೇಸಿಕ್ ಇಂಡಸ್ಟ್ರೀಸ್ ಕೆಲವು ಇವೆ, ರೆಂಕೋ, ಸೋಪ್ ಫ್ಯಾಕ್ಟರಿ, ಎನ್.ಜಿ.ಇ.ಎಫ್. ಇದರಲ್ಲೆಲ್ಲಾ ಸರ್ಕಾರದವರು ಬಂಡವಾಳ ಹಾಕಿದ್ದಾರೆ. ಸರ್ಕಾರದ ಬಂಡವಾಳ ಹಾಕಿರುವ ಸೆಮಿ ಗವರ್ನ್‌ಮೆಂಟ್ ಇಂಡಸ್ಟ್ರೀಸ್ ಕೆಲವು ಇವೆ. ಅವುಗಳನ್ನು ಖಾಸಗಿಯವರಿಗೆ ಕೊಡುವ ಪ್ರಯತ್ನ ನಡೆಯುತ್ತಾ ಇದೆ ಎಂದು ನನಗೆ ತಿಳಿದು ಬಂದಿದೆ ಖಾಸಗಿಯವರಿಗೆ ಆ ಕೈಗಾರಿಕೆಗಳನ್ನು ಕೊಡಬೇಕೆಂದು ತೀರ್ಮಾನ ಮಾಡಿರಬೇಕಾದರೆ ಅವುಗಳಿಗೆ ಹಣ ಕೇಳುವುದಕ್ಕೆ ನಿಮಗೆ ಅಧಿಕಾರ ಎಲ್ಲಿದೆ, ಎಂದು ಕೇಳುತ್ತೇನೆ. ತಾವು ಹಣ ಕೊಟ್ಟು ಬಂಡವಾಳಶಾಹಿಗಳಿಗೆ ಅನುಕೂಲಮಾಡಿಕೊಡುವಂತಹ ಈ ಒಂದು ಕಾರ್ಯಕ್ರಮ ಸೋಷಿಯಲಿಸಮ್ಮೇ? ಅಥವಾ ಕ್ಯಾಪಿಟಲಿಸಂ ಬಿರ್ಡ್ ಅಪ್ ಮಾಡುತ್ತಾ ಇದ್ದೀರಾ? ರೆಂಕೋ ಬಗ್ಗೆ ಸ್ಪಷ್ಟವಾದ ಉತ್ತರ ತಾವು ಕೊಡಬೇಕಾಗಿದೆ. ಅದನ್ನು ಬಿರ್ಲಾ ಅವರಿಗೆ ಕೊಡಬೇಕೆಂದು ಯೋಚನೆ ಮಾಡಿದ್ದಿರಿ. ಇವತ್ತು ಅದನ್ನು ಬೇರೆಯವರಿಗೆ ಮಾರಾಟ ಮಾಡಬೇಕೆಂದು—ಸಾಹು ಜೈನ್ ಅವರಿಗೆ ಕೊಡಬೇಕೆಂದು ಹೊರಟಿದ್ದೀರಿ.

(ಶ್ರೀ ಎಂ. ಎಸ್. ಕೃಷ್ಣನ್)

ಇಂಥಾದ್ದಕ್ಕೆ ಹಣ ಏಕೆ ಬೇಕು ? ಐ.ಟಿ.ಎಲ್. ಕಂಪನಿಯಲ್ಲಿ ರಾಧ ಬರುತ್ತಾ ಇದೆ. ಅಮೆರಿಕಾದ ಅಟ್ಲಾಸ್ ಕಂಪೆನಿಯವರಿಗೆ ಪೆಜಾರಿಟಿ ಷೇರ್ ಕೊಡಬೇಕೆಂದು ಹೊಂಚು ಹಾಕುತ್ತಾ ಇದ್ದೀರಿ. ಈಗಾಗಲೇ ಅಮೇರಿಕನ್ನರಿಗೆ ಮಾರಿದ್ದೀರಿ ಎಂದು ತಿಳಿದು ಬಂದಿದೆ. ಯಾರ್ಯಾರು ಎಷ್ಟೆಷ್ಟು ಕಮಿಷನ್ ತೆಗೆದುಕೊಂಡಿದ್ದಾರೆ ಎಂಬುದನ್ನು ಹೇಳುವುದಕ್ಕೆ ನಾನು ಹೋಗುವುದಿಲ್ಲ. ಶ್ರೀಮಾನ್ ರಾಜಶೇಖರ ಮೂರ್ತಿಯವರು ಇವತ್ತಿನ ದಿನದ ಪಬ್ಲಿಕ್ ಸೆಕ್ಟರಿಗೆ ವಿರೋಧವಾಗಿದ್ದಾರೆ. ಪ್ರೈವೇಟ್ ಸೆಕ್ಟರ್‌ಗೆ ಪರವಾಗಿ ಇರುವ ಜನ ಅವರು ಆದ್ದರಿಂದ ಈ ಪರಿಪಾಠ ನಡೆಯುತ್ತಾ ಇದೆ ಎಂದು ನನ್ನ ಅಭಿಪ್ರಾಯ. ಎಂ.ಎಸ್.ಕೆ. ಮಿಲ್, ಎನ್.ಜಿ.ಇ.ಎಫ್. ಇವುಗಳಿಗೆ ಹಣ ಕೇಳಿರುವುದರಿಂದ ಈ ರೀತಿಯ ಒಂದು ಅನುಮಾನ ಬಂದಿದೆ. ಇವನ್ನು ಪ್ರೈವೇಟ್ ಕ್ಯಾಪಿಟಲಿಸ್ಟ್‌ಗೆ ಮಾರಾಟ ಮಾಡುವುದಕ್ಕೆ ಹೊರಟಿರುವಾಗ ಈ ರೀತಿ ಹಣ ಕೇಳುವುದು ಸರಿಯಾದ್ದಲ್ಲ. ಬ್ಯಾಂಕ್ ನ್ಯಾಷನಲೈಸೇಷನ್ ಮಾಡಿದರು ಬಹಳ ಸಂತೋಷ. ಆ ದಾರಿಯಲ್ಲಿ ಏನಾದರೂ ತಾವು ಹೋಗುತ್ತಾ ಇದ್ದೀರಾ ಅಂದರೆ ನಿಮ್ಮ ದಾರಿ ಆದಲ್ಲ. ಆದ್ದರಿಂದ ಈ ತರಹದ ಒಂದು ಸಪ್ಲಿಮೆಂಟರಿ ಗ್ರಾಂಟ್ ಕೇಳುವುದಕ್ಕೆ ನಿಮಗೆ ಹಕ್ಕು ಇಲ್ಲ, ನಾವು ಕೊಡುವುದೂ ಇಲ್ಲ, ಇದನ್ನು ವಿರೋಧ ಮಾಡುತ್ತೇವೆ ಎಂದು ನಾನು ಹೇಳಲು ಬಯಸುತ್ತೇನೆ.

ಇನ್ನು ಲ್ಯಾಂಡ್‌ರೆಸ್ ಲೇಬರರ್ಸ್ ಬಗ್ಗೆ ಇದೂ ಕೂಡ ಬಹಳ ಹಾಸ್ಯಾಸ್ಪದವಾಗಿದೆ. ಏಕೆಂದರೆ ಅವರಿಗೆ ಜಮೀನು ಕೊಡಬೇಕೆನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಇದರಲ್ಲಿ ಒಂದು ತಾವು ಅನುಸರಿಸುತ್ತಿರುವ ಒಂದು ಧೋರಣೆಯ ಪ್ರಶ್ನೆ ಇದೆ. ಯಾರಿಗೆ ಜಮೀನು ಇಲ್ಲವೋ ಅಂತಹವರಿಗೆ ಜಮೀನು ಕೊಡಬೇಕೆಂದು ತೀರ್ಮಾನ ಮಾಡಿದ್ದೀರಾ ಅನ್ನುವುದೇ ನನ್ನ ಪ್ರಶ್ನೆ ! ಹಾಗೆ ಮಾಡಿದ್ದರೆ ಅಂತಹರಿಗೆ ಕೊಡುತ್ತಾ ಇದ್ದೀರಾ ಅನ್ನುವುದು ಎರಡನೆಯ ಪ್ರಶ್ನೆ. ಅದನ್ನು ನಿರ್ದಿಷ್ಟವಾಗಿ ಪ್ರಮಾಣ ಮಾಡಿ ಹೇಳಬೇಕು. ಗವರ್ನಮೆಂಟ್ ಆಫ್ ಇಂಡಿಯಾ ಸ್ಟೇಂ ಇದೆ, ಕೋ-ಆಪರೇಟೀವ್ ಇನ್‌ಸ್ಟಿಟ್ಯೂಷನ್ಸ್ ಮಾಡುತ್ತೇವೆ ಎಂದು ಹೇಳುತ್ತಾ ಇದ್ದೀರಿ, ಈ ಬಗ್ಗೆ ಬೇಕಾದಷ್ಟು ಮಾತನಾಡಿದ್ದಾರೆ, ಇದರಲ್ಲಿ ಬಹಳ ಮೋಸ ನಡೆಯುತ್ತಾ ಇದೆ. ಇಲ್ಲಿ ನಡೆಯುವಷ್ಟು ಮೋಸ ಮತ್ತೆಲ್ಲೂ ಇಲ್ಲ. ಸಮಾಜವಾದವು ಹೆಸರಿನಲ್ಲಿ ಬಂಡವಾಳಗಾರರನ್ನು ಬೆಳೆಸುವುದಕ್ಕೆ, ಜಮೀನ್ದಾರರನ್ನು ಬೆಳೆಸುವುದಕ್ಕೆ ಅನುಕೂಲವಾಗುತ್ತಾ ಇರುವುದರಿಂದ ಇದನ್ನು ಕಟುವಾಗಿ ವಿರೋಧಿಸುತ್ತೇನೆ ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

(ಅನೇಕ ಜನ ಸದಸ್ಯರು ಮಾತನಾಡಲು ನಿಂತುಕೊಂಡರು)

ಉಪಾಧ್ಯಕ್ಷರು.—ಇದರ ಚರ್ಚೆಯನ್ನು ಇದನ್ನು ಇವತ್ತೇ ಮುಗಿಸಬೇಕೆಂದು ಹೇಳುತ್ತಾರೆ ಆದ್ದರಿಂದ ಮಾನ್ಯ ಮಂತ್ರಿಗಳು ಈಗ ಉತ್ತರ ಕೊಡಬಹುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆಗಲೇ ಇನ್ನೂ ಎರಡು ಗಂಟೆಗಳ ಕಾಲ ಮಾತನ್ನಾಡುವುದಕ್ಕೆ ಅವಕಾಶ ಕೊಡುತ್ತೇವೆ ಎಂದು ಪ್ರೋಗ್ರಾಂ ಹಾಕಿ ಅದನ್ನು ಮಾನ್ಯ ಪಾರ್ಲಿಮೆಂಟರಿ ವಿವಿಸ್ತರು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಈಗ ಇನ್ನೂ ಮಾತನಾಡುವವರು ಇದ್ದಾರೆ, ಇವತ್ತಿಗೆ ಮುಗಿಸಿ ನಾಳೆ ಎರಡು ಗಂಟೆ ಹೊತ್ತು ಅವಕಾಶ ಕೊಡಬೇಕು.

Sri H. M. CHANNABASAPPA.—Sir, I take it that the Government is anxious to know the opinions of the members of this House before the Hon Finance Minister replies. If it is hustled through, that only shows that the Government is not anxious to know what exactly is the opinion of the members of the Assembly on this side of the House. I would therefore appeal to the Hon'ble Minister for Parliamentary Affairs to use his good offices and provide enough time for the members on this side to offer their remarks on the Supplementary Grants.

† ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ನಾವು ಸಾಧ್ಯವಾದಮಟ್ಟಿಗೂ ಆಯಾಯ ದಿವಸಕ್ಕೆ ನಿಗದಿಯಾದ ಕಾರ್ಯಕಲಾಪಗಳನ್ನು ಆಯಾಯಾ ದಿವಸವೇ ಮುಗಿಸಿದರೆ ನಮ್ಮ ಮುಂದಿನ ಕಾರ್ಯಕಲಾಪಗಳನ್ನು ನಾವು ನಿಗದಿಯಾದ ವೇಳೆಯೊಳಗೆ ಮುಗಿಸುವುದಕ್ಕೆ ಸಾಧ್ಯವಾಗುತ್ತದೆಂಬುದನ್ನು ನಾನು ಮತ್ತೇ ವಿವರಿಸಿ ಹೇಳಬೇಕಾದ್ದಿಲ್ಲ. ಇಂಥ ಒಂದು ಒಳ್ಳೆಯ ಪದ್ಧತಿಯನ್ನು ಅನುಸರಿಸ

ಬೇಕು ಎಂಬುವುದರಲ್ಲಿ ಯಾವುದೂ ಭಿನ್ನಾಭಿಪ್ರಾಯವಿಲ್ಲ. ಆದರೆ ಶ್ರೀ ಹುಚ್ಚಮಾಸ್ತಿಗೌಡರು ನನ್ನ ಬಾಯಿಲ್ಲಿ ಬಾರದಂಥ ಒಂದು ಶಬ್ದವನ್ನು ನಾನು ಹೇಳಿಬೆ ಎಂದು ಅವರು ಹೇಳಿದ್ದು ಸತ್ಯಕ್ಕೆ ದೂರವಾದ ಮಾತು. ನಾನಾದರೂ ಹೇಳಿದ್ದೇನೆಂದರೆ ಈ ದಿವಸ ಈ ಚರ್ಚೆಯನ್ನು ಮುಗಿಸುವುದಕ್ಕೆ ಸಾಧ್ಯವಾಗದಿದ್ದರೆ ನಾಳೆ ಸ್ವಲ್ಪಕಾಲವನ್ನು ಇದಕ್ಕೆ ಕೊಡಬಹುದು ಎಂದು ಹೇಳಿದೆ ; ಅಷ್ಟೇ. ಈ ಸಭೆಯವರಿಗೆ ವಾತಾವರಣವನ್ನುಂಟುಮಾಡುವುದಕ್ಕೆ ಅವಕಾಶಕೊಡದಂತೆ ಸಪ್ಲಿಮೆಂಟರಿ ಡಿಮ್ಯಾಂಡನ್ನು ಪಾಸ್ ಮಾಡಿಸಿಕೊಳ್ಳಬೇಕು ಎಂಬ ಚಪಲವೇನೂ ನಮಗಿಲ್ಲ. ಈ ಸಭೆಯ ಅನುಮತಿಯ ಪ್ರಕಾರ ನಾನಾ ಬಾಬುಗಳಿಗೆ ನಾವು ಹಣವನ್ನು ಖರ್ಚುಮಾಡಿದ್ದೇವೆ. ಅಲ್ಲಿ ಹೆಚ್ಚಿಗೆ ಖರ್ಚಾಗಿರತಕ್ಕ ಹಣದ ಬಗ್ಗೆ ನಾವೀಗ ಸಭೆಗೆ ಒಂದು ಸಮಾಧಾನವನ್ನು ಹೇಳಬೇಕಾದುದಿದೆ ; ಅಷ್ಟೇ. ಆದರೆ ನಾವು ಇದೀ ಈ ದಿವಸ ಮಾಡಿದ್ದಾದರೂ ಏನು ? ಒಂದು ಗಂಟೆಯಕಾಲ ಕೊಶ್ಚನ್ ಅವರ್ ಆವಾದ ಮೇಲೆ ಆ ಒಂದು ಬೀಡಿ ಮನೂದೆ. ಅವಕ್ಕೆಲ್ಲಾ ನಿಗದಿಮಾಡಿದ್ದ ಕಾಲ ಕೇವಲ ಒಂದು ಗಂಟೆ ಆದರೆ ಅದು ಇನ್ನೂ ಕಾಲುಗಂಟೆಯನ್ನು ಜಾಸ್ತಿ ತೆಗೆದುಕೊಂಡಿತು. ಆಾದ ನಂತರ ಸಪ್ಲಿಮೆಂಟರಿ ಡಿಮ್ಯಾಂಡುಗಳ ಚರ್ಚೆ ನಡೆಯುತ್ತಿದೆ. ಇಲ್ಲಿ ಯಾವುದೇ ಒಂದು ವಿಷಯದ ಚರ್ಚೆ ನಡೆಯುವ ನಿಗದಿಮಾಡತಕ್ಕ ಕಾಲವಲ್ಲಿ ಅರ್ಧವೇಳೆಯನ್ನು ರೂಲಿಂಗ್ ಪಾರ್ಟಿಗೂ ಇನ್ನರ್ಧವೇಳೆಯನ್ನು ಎದುರುಪಕ್ಷಗಳವರಿಗೂ ಕೊಡತಕ್ಕದ್ದು ಒಂದು ಪದ್ಧತಿ. ಆದರೆ ನಮ್ಮ ಆಡಳಿತಪಕ್ಷದಲ್ಲಿ ಈ ದಿವಸ ಯಾರೊಬ್ಬರೂ ಭಾಗವಹಿಸಿಲ್ಲ. ಎರಡ್ನೂ ಕಾಲವನ್ನೂ ಎದುರುಪಕ್ಷಗಳವರಿಗೆ ಬಿಟ್ಟು ಕೊಡಬಾಗಿದೆ, ಅಷ್ಟಾದರೂ ಅವರಿಗೆ ಸಮಾಧಾನವಿಲ್ಲ. ಶ್ರೀ ಶ್ರೀಕಂಠಯ್ಯನವರು ಮುನಿಸಿಕೊಂಡು ಹೋಗುತ್ತೇನೆಂದು ಹೇಳುತ್ತಿದ್ದಾರೆ. ನಾಳೆ ದಿವಸ ಇವರಮೇಲಿನ ಚರ್ಚೆ ಮತ್ತು ಒಂದು ಹೈ ಕೋರ್ಟಿನ ತಿದ್ದುಪಡಿ ಮಸೂದೆ ಇದೆ. ಅವೆರಡನ್ನೂ ನಾಳೆ 4 ಗಂಟೆಯೊಳಗೆ ಮುಗಿಸಿ ಕೊಡುತ್ತೇವೆಂಬ ಭರವಸೆಯನ್ನು ಶ್ರೀ ಹುಚ್ಚಮಾಸ್ತಿಗೌಡರು ಕೊಟ್ಟರಾಗಬಹುದು. ಹಾಗೆನು ಆಡ್‌ಜರ್ನ್ ಮಾಡಬಹುದೆಂದು ಹೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾಳೆ ಮೊದಲು ಸಪ್ಲಿಮೆಂಟರಿ ಎಸ್ಟಿಮೇಟುಗಳ ಮೇಲಿನ ಚರ್ಚೆಯನ್ನು ಮುಂದುವರಿಸೋಣ, ಆನಂತರ ಬಾಕಿಯುದನ್ನು ಮಾತೋಣ.

SRI K. PUTTASWAMY.—I have been always very anxious to see that a good precedent is set up. If only my good friend Sri Hutchmasthy Gowda had called me aside and discussed this matter, we would have ironed out the differences and we would have been able to arrive at a settlement on the basis of an agreed formula. I am very sorry these things are not being done here. All the same, tomorrow I may require about half an hour for the High Court (Amendment) Bill. If they are prepared to finish it in half an hour they can utilise the remaining time for this. By 4-30 P. M. if we are able to vote the Supplementary Demands and the High Court (Amendment) Bill, the rest of the day can be utilized for non-official business. We have no objection for that.

MR. DEPUTY SPEAKER.—I think it is agreed.

The House will now adjourn and meet at 1-00 P.M. tomorrow.

The House adjourned at Thirty-five Minutes past Seven of the Clock to meet again at One of the Clock on Friday the 29th August 1969.

WD 13496—GPB—600—12-12-1969